ಗೌರಿದೇವಿ ಜಾತ್ರೆ ಒಂದು ಅಧ್ಯಯನ

(ದೊಡ್ಡ ಉಳ್ಳಾರ್ತಿ ಗ್ರಾಮವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧ)

ನೋಂದಣಿ ಸಂಖ್ಯೆ: ೧೭೦೧೧೨೦೩೦೦೧೭

ಮಾತೆಂಬುದು ಜ್ಯೋತಿರ್ಲಿಂಗ

ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೮-೧೯

ಗೌರಿದೇವಿ ಜಾತ್ರೆ ಒಂದು ಅಧ್ಯಯನ

(ದೊಡ್ಡ ಉಳ್ಳಾರ್ತಿ ಗ್ರಾಮವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ ಫಿಲ್ (ಸಮಾಜಶಾಸ್ತ್ರ) ಸಂಪ್ರಬಂಧ)

ಸಂಶೋಧನಾರ್ಥಿ

ನೋಂದಣಿ ಸಂಖ್ಯೆ: ೧೭೦೧೧೨೦೩೦೦೧೭

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ - ೫೮೩ ೨೭೬

೨೦೧೮-೧೯

ಪರಿವಿಡಿ

ಅಧ್ಯಾಯ : ಒಂದು

ಪ್ರವೇಶ

೧.೧ ಜಾತ್ರೆಯ ಅರ್ಥ ಮತ್ತು ಪದನಿಷ್ಪತ್ತಿ
೧.೨ ಅಧ್ಯಯನದ ಉದ್ದೇಶ
೧.೩ ಅಧ್ಯಯನದ ಮಹತ್ವ
೧.೪ ಅಧ್ಯಯನದ ವ್ಯಾಪ್ತಿ
೧.೫ ಅಧ್ಯಯನದ ವಿಧಾನ
೧.೬ ಅಧ್ಯಯನದ ಸ್ವರೂಪ
೧.೭ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಒಂದು

ಪ್ರವೇಶ

ಭಾರತವು ಸಂಪತ್‌ಭರಿತವಾದ ನಾಡಾಗಿದೆ. ಇಲ್ಲಿ ಬೆಟ್ಟ, ಗುಡ್ಡ, ನದಿ, ಹಳ್ಳ, ಸರೋವರ, ತಾಣಗಳನ್ನು ಒಳಗೊಂಡಿದೆ. ಇಲ್ಲಿ ನದಿ, ಸರೋವರ ಬೆಟ್ಟ ಗುಡ್ಡ ಸುಂದರ ತಾಣಗಳನ್ನು ಒಳಗೊಂಡಿದೆ. ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಯು ತನ್ನದೇ ಆದ ಉಜ್ವಲ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ ಇತಿಹಾಸದ ಪುಟಗಳಲ್ಲಿ ವೈಭವದ ಪರಂಪರೆ ಹೊಂದಿರುವ ಈ ದೇಶದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೂ ಧಾರ್ಮಿಕ ಪುಣ್ಯ ಕ್ಷೇತ್ರಗಳು ತನ್ನದೇ ಆದ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನಲೆಯನ್ನು ಹೊಂದಿವೆ.

ವೈವಿಧ್ಯಮಯವಾದ ಭೂಪ್ರದೇಶ, ಜನ, ಜಾತಿ, ಸಮುದಾಯ, ನಾನಾ ಭಾಷೆಗಳನ್ನು ಹೊಂದಿರುವ ಭಾರತದ ಒಂದು ಪ್ರಮುಖ ರಾಜ್ಯ ಕರ್ನಾಟಕ. ಕರ್ನಾಟಕವು ಒಂದು ಕಡೆ ಬಿರು ಬಿಸಿಲನ್ನು ಹೊಂದಿದ ಬಯಲುಸೀಮೆ, ಮತ್ತೊಂದು ಕಡೆ ಮಳೆಕಾಡುಗಳನ್ನು ಹೊಂದಿದ ಪಶ್ಚಿಮ ಘಟ್ಟ ಪ್ರದೇಶಗಳು, ಕರಾವಳಿ ಪ್ರದೇಶ ಹೀಗೆ ನಾನಾ ವಾತಾವರಣವನ್ನು ಹೊಂದಿದೆ. ಅಷ್ಟೇ ಅಲ್ಲ, ಇಲ್ಲಿ ಹತ್ತು ಹಲವು ಭಾಷೆ, ವೈವಿಧ್ಯಮಯವಾದ ದೈವಗಳು, ಆಚರಣೆಗಳಿಂದ ಕೂಡಿದೆ. ಉದಾಹರಣೆಗೆ ಕರಾವಳಿ ಪ್ರದೇಶಕ್ಕೆ ಹೋದರೆ ವಿಶೇಷವಾಗಿ ಭೂತಾರಾಧನೆ, ಅದಕ್ಕೆ ಸಂಬಂಧಿಸಿದ ಪಾಡ್ದಾನಗಳು ಕಾಣಸಿಗುತ್ತವೆ. ಕರಾವಳಿಯನ್ನು ದಾಟಿ ಘಟ್ಟ ಪ್ರದೇಶಕ್ಕೆ ಕಾಲಿಟ್ಟರೆ ಅಲ್ಲಿಯ ಆಚರಣೆಗಳೇ ಬೇರೆಯಾಗಿವೆ. ಅದರಾಚೆಗೆ ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ, ಹೈದರಾಬಾದ-ಕರ್ನಾಟಕಗಳಲ್ಲಿರುವ ದೈವ, ಆಚರಣೆಗಳಲ್ಲಿ ಭಿನ್ನತೆ ಕಂಡುಬರುವುದು.

ಮಧ್ಯ ಕರ್ನಾಟಕದ ಜಿಲ್ಲೆಗಳಲ್ಲೊಂದಾದ ಚಿತ್ರದುರ್ಗ ಜಿಲ್ಲೆಗೆ ಬಂದರೆ ಅಲ್ಲಿಯ ದೈವಾಚರಣೆಗಳೇ ಭಿನ್ನವಾಗಿವೆ. ವಿಶೇಷವಾಗಿ ಮ್ಯಾಸನಾಯಕ, ಕಾಡುಗೊಲ್ಲರಿಂದ ಕೂಡಿದ

ಹಟ್ಟಿಗಳು, ಆ ಸಮುದಾಯಗಳಿಗೇ ಸೇರಿದ ದೈವಗಳು, ಸಾಂಸ್ಕೃತಿಕ ನಾಯಕರನ್ನು ಕಾಣುತ್ತೇವೆ. ಇಲ್ಲಿಯ ಜಾತ್ರೆ, ಆಚರಣೆಗಳೇ ವಿಶೇಷವಾಗಿವೆ. ಇದರಲ್ಲಿ ಚಳ್ಳಕೆರೆ ತಾಲೂಕಿನ ದೊಡ್ಡಉಳ್ಳಾರ್ತಿಯ ಗೌರಿದೇವಿಯ ಜಾತ್ರೆಯು ಹಲವು ವಿಶೇಷತೆಗಳಿಂದ ಕೂಡಿದೆ.

ಮಾನವನು ಸಂಘಜೀವಿಯಾಗಿದ್ದು ತನ್ನ ಜೀವನ ನಡೆಸಲು ಆಹಾರ, ನೀರು, ಗಾಳಿ, ಉಡುಪು, ವಸತಿ ಇದರ ಜೊತೆ ಜೊತೆಗೆ ನಿಧಾನವಾಗಿ ಸಂಸ್ಕೃತಿಯ ಬೆಳೆಸಿಕೊಂಡು ಬಂದಿದ್ದಾನೆ. ತನ್ನ ಜೀವನದಲ್ಲಿ ಐಕ್ಯತೆಯ ಭಾವನೆಯನ್ನು ಸಾರಲು ಹಬ್ಬ, ಆಚರಣೆಗಳು, ಜಾತ್ರೆಗಳು ಬಯಸಿದನು. ಜನಪದರು ಅವಿಭಾಜ್ಯ ಅಂಗವಾಗಿರುವಂತಹ ಜನಪದರ ಸಂಸ್ಕೃತಿಯ ವಿಕಾಸಕ್ಕೂ ಚೈತನ್ಯದಾಯಕವಾಗಿದೆ. ಜಾತ್ರೆಗಳು ಪ್ರಪಂಚದ ಎಲ್ಲಾ ಜನ ಸಮುದಾಯಗಳ ಆಚರಣೆಯಲ್ಲಿದ್ದು ಸಂಸ್ಕೃತಿಯ ಮರುಹುಟ್ಟಿಗೆ ಕಾರಣವಾಗಿದೆ. ಜಾತ್ರೆಗಳು ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿರದೆ ಎಲ್ಲ ಜನ ಸಮುದಾಯಗಳಲ್ಲಿ ವೈವಿಧ್ಯಮಯವಾಗಿ ಆಚರಿಸುವಂತಹ ಆಚರಣೆಯಾಗಿದೆ. ಜಾತ್ರೆಯು ಜನರ ಆರ್ಥಿಕ ಸಂಪತ್ತು ಕ್ಷೇಮಾಭಿವೃದ್ಧಿಗಾಗಿ ಸಾಮಾಜಿಕ ಉದ್ದೇಶವಾಗಿ ಈಡೆರಿಸುವುದರ ಜೊತೆಗೆ ಗ್ರಾಮೀಣ ಜನರ ಸಂಸ್ಕೃತಿ, ನಂಬಿಕೆ, ಸಂಪ್ರದಾಯ, ಆಚರಣೆ, ಕಲೆ, ಸಾಹಿತ್ಯ, ಜೀವನವನ್ನು ಪ್ರತಿನಿಧಿಸುತ್ತದೆ. ಜಾತ್ರೆಗಳು ಗ್ರಾಮೀಣ ಜನರ ಕಲಾ ಪ್ರದರ್ಶಿಸಲು ಅವಕಾಶ ಕಲ್ಪಿಸುವುದರ ಜೊತೆಗೆ ಗ್ರಾಮೀಣ ಜೀವನಕ್ಕೆ ಎಡೆ ಮಾಡಿಕೊಟ್ಟಿದೆ. ಜಾತ್ರೆಗಳ ಆಚರಣೆಯ ನಡುವೆ ಮನುಷ್ಯನ ಸಂಸ್ಕೃತಿಯ ಸಂಬಂಧಗಳು ಬೆಳೆಯುತ್ತವೆ. ಭಾರತೀಯ ಗ್ರಾಮೀಣ ಸಂಸ್ಕೃತಿಯ ವೈಭವದಿಂದ ಕೂಡಿದ್ದು ಗ್ರಾಮೀಣ ಜನರ ಉತ್ಸಾಹದ ಆಚರಣೆಗಳ ಮೂಲಕ ಧಾರ್ಮಿಕ ನೆಲೆಕಟ್ಟಿನಿಂದ ಮೈದಳಿದ್ದು ಜನಪದರ ಜೀವನಾಡಿಯಾಗಿವೆ.

೧.೧ ಜಾತ್ರೆಯ ಅರ್ಥ ಮತ್ತು ಪದನಿಷ್ಪತ್ತಿ

ಯಾತ್ರೆ ಎಂಬುದು ಜನಪದರ ಬಾಯಲ್ಲಿ ಜಾತ್ರೆಯಾಗಿ ಮಾರ್ಪಟ್ಟಿದೆ. ಜಾತ್ರೆಯು ಜನಪದರ ಜೀವನದಲ್ಲಿ ಬೆಸೆದುಕೊಂಡಿದೆ. ಸುಖ ದುಃಖಗಳು ಜೀವನದುದ್ದಕ್ಕೂ ಮಾನವನ ಹುಟ್ಟಿನಿಂದ ಸಾವಿನವರೆಗೂ ಅವನ ಜೀವನದೊಂದಿಗೆ ಬೆಸೆದುಕೊಂಡೇ ಬಂದಿರುತ್ತವೆ. ಕಷ್ಟ ಕಾರ್ಪಣ್ಯಗಳು ದುಃಖ ಶಮನಗಳನ್ನು ಮರೆಯಲು ಜನಪದರು ಬಿಡುವಿನ ಸಮಯದಲ್ಲಿ ಕೊಂಚ ಕಾಲ ಕೆಲವು ಹಬ್ಬ ಹರಿದಿನಗಳಿಗೆ ಮೀಸಲಿಡುವರು. ಸುಗ್ಗಿಯ ಕಾಲದ ನಂತರ ಬಿಡುವಿನ ಸಮಯದಲ್ಲಿ ಕಷ್ಟ, ನೋವುಗಳನ್ನು ಮರೆಯಲು ಕೆಲವು ಹಬ್ಬ ಜಾತ್ರೆಗಳನ್ನು ಆಚರಿಸುವುದು ಕಂಡುಬರುತ್ತದೆ. ಇದರಿಂದ ಜನಸಮೂಹದ ಗುಂಪು ಒಗ್ಗೂಡುವುದರ ಜೊತೆಗೆ ಪರಸ್ಪರ ಸಂಬಂಧಗಳು ಗಟ್ಟಿಯಾಗಿ ಸ್ನೇಹ ಭ್ರಾತೃತ್ವಕ್ಕೆ ಕಾರಣವಾಗುತ್ತವೆ. ಮನುಷ್ಯನು ಪುನರ್ ಮನೋಲ್ಲಾಸಗೊಳ್ಳಲು ಜಾತ್ರೆ, ಹಬ್ಬಗಳು ಸಹಕಾರಿಯಾಗಿವೆ. ಜಾತ್ರೆ

ಹಬ್ಬಗಳು ಕೇವಲ ಮನೋಲ್ಲಾಸ ನೀಡುವಷ್ಟಕ್ಕೇ ಸೀಮಿತಗೊಳ್ಳದೆ ಅವನ ಸಂಸ್ಕೃತಿಯ ಅದರಲ್ಲೂ ಗ್ರಾಮೀಣ ಜೀವನದ ಸಂಸ್ಕೃತಿಯ ಭಾಗವಾಗುವುದರೊಂದಿಗೆ ಅದರ ಪ್ರತಿಬಿಂಬವಾಗಿವೆ.

ಜನರು ಹಿಂದೆ ವಾಹನ ಸೌಕರ್ಯಗಳ ಕೊರತೆಯ ಕಾಲಕ್ಕೆ ಕಾಲ್ನ ಜಾತ್ರೆಗಳಿಗೆ ಬಹುದಿನಗಳ ಹಿಂದೆ ಎತ್ತಿನ ಗಾಡಿಯ ಮುಖಾಂತರ ಹೋಗುವುದು ಸರ್ವೇಸಾಮಾನ್ಯವಾಗಿತ್ತು. ಬಹು ದಿನಗಳ ಹಿಂದೆ ಪ್ರಸ್ತುತ ದಿನಮಾನಗಳಲ್ಲಿ ಇರುವ ಹಾಗೆ ಬಸ್ಸು, ಲಾರಿ, ಆಧುನಿಕ ಯಂತ್ರೋಪಕರಣಗಳ ವ್ಯವಸ್ಥೆ ಇಲ್ಲ. ಇದರ ಬದಲಾಗಿ ರೈತರು ತಮ್ಮ ಜೀವನದ ಒಂದು ಭಾಗವಾಗಿ ಪ್ರತಿಬಿಂಬಿತವಾಗಿರುವ ಬಸವನೆ ಅವರ ವಾಹನವಾಗಿರುವುದು ಗಮನಾರ್ಹ ಸಂಗತಿಯಾಗಿ ಕಂಡುಬರುತ್ತದೆ. ಇದು ಜನಸಾಮಾನ್ಯರ ವಾಹನ ಜನಪದರ ಅತಿಮುಖ್ಯ ವಾಹನ ಎತ್ತಿನ ಗಾಡಿ. ಈ ಸಂಸ್ಕೃತಿಯು ಬಹು ಸಂಕೀರ್ಣವಾದದ್ದಾಗಿದೆ. ಇದು ಪರಿಸರಕ್ಕೆ ಯಾವ ಹಾನಿಯನ್ನುಂಟುಮಾಡದು ಇದು ಪರಿಸರ ಸ್ನೇಹಿಯಾಗಿ ಜನಪದರ ಸ್ನೇಹಿಯಾಗಿ ಬಳಕೆಯಾಗುತ್ತಿದೆ. ಇಂತಹ ವಾಹನಗಳ ಸಮೂಹ ಈ ಗ್ರಾಮಕ್ಕೆ ಶ್ರೀ ಗೌರಿದೇವಿ ಜಾತ್ರೆಗೆ ಸಾಲು ಸಾಲಾಗಿ ಬರುವುದರ ಹಿನ್ನೆಲೆಯಲ್ಲಿ ಯಾತ್ರೆ ಎನ್ನುವುದು ಜಾತ್ರೆಯಾಗಿ ಬದಲಾವಣೆಯಾಗಿರಬಹುದು. ಇಂತಹ ಯಾತ್ರೆಗಳು ಅನೇಕ ಅದರಲ್ಲಿ ಪಾದಯಾತ್ರೆ, ಎತ್ತಿನ ಗಾಡಿ ಯಾತ್ರೆ ಇನ್ನೂ ಮೊದಲಾದವುಗಳು. ಒಂದು ಪವಿತ್ರ ಸ್ಥಳಕ್ಕೆ ಯಾತ್ರೆ ಬೆಳೆಸುವುದು ಸಾಮಾನ್ಯವಾಗಿ ನಮ್ಮ ಗ್ರಾಮೀಣ ಜನಜೀವನದಲ್ಲಿ ಕಂಡುಬರುತ್ತದೆ. ಜನಪದರ ಭಾಷೆಯಲ್ಲಿ ಜಾತ್ರೆಗೆ ಬದಲಾಗಿ ಪರೀಕ್ಷೆ, ವರ್ಷ, ಇವು ಸಂಸ್ಕೃತ ಪದಗಳಾಗಿದ್ದು ಇದಕ್ಕೆ ಜಾತ್ರೆ ಎಂಬ ಹಳೆಗನ್ನಡದ ಪದವಾಗಿದೆ. ಹೀಗೆ ಜಾತ್ರೆ ಎನ್ನುವುದು ಒಂದು ಧಾರ್ಮಿಕ ಸಂಪ್ರದಾಯಗಳನ್ನೊಳಗೊಂಡಿರುವುದಾಗಿದೆ. ಕನ್ನಡ ನಿಘಂಟಿನಲ್ಲಿ ಪುಣ್ಯಕ್ಷೇತ್ರ, ದರ್ಶನ, ಯಾತ್ರೆ ಎಂಬ ಅರ್ಥ ಇದೆ. ದೇವರ ರಥೋತ್ಸವದ ಸಂದರ್ಭದಲ್ಲಿ ಸೇರುವ ಜನರ ಗುಂಪು ಸಮೂಹ ಪರಿಷೆ ಎಂಬ ಅರ್ಥವನ್ನು ಕಲ್ಪಿಸಿಕೊಡಲಾಗಿದೆ.

ಮಲ್ಲಿಕಾರ್ಜುನ್ ಲಠ್ಠೆರವರ ಪ್ರಕಾರ "ಜನ ಪ್ರಾಚೀನ ಕಾಲದಿಂದಲೂ ನಂಬಿಕೊಂಡು ಬಂದಿದ್ದ ದೇವಾನುದೇವತೆಗಳನ್ನು ಭಯ ಭಕ್ತಿಗಳಿಂದ ಸಾಮೂಹಿಕವಾಗಿ ಪೂಜಿಸಿ ಪ್ರಾರ್ಥಿಸುವ ಸಂಭ್ರಮದ ಜನ ಸಮೂಹವೇ ಜಾತ್ರೆ ಎಂದು ಹೇಳಿದ್ದಾರೆ."[೧] ಎಂ.ಜಿ. ಈಶ್ವರಪ್ಪ ಅವರು "ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಗಳು ಮತ್ತು ಜಾತ್ರೆಗಳು, ಒಟ್ಟೊಟ್ಟಿಗೆ ನೆಡೆಯುತ್ತವೆ. ಹಬ್ಬ ಮತ್ತು ಜಾತ್ರೆಗಳನ್ನು ಬೇರೆ ಬೇರೆ ಎಂದು ಪರಿಗಣಿಸುವುದು ಕಷ್ಟ ಎಂದಿದ್ದಾರೆ"[೨]

ಜಾತ್ರೆಗಳು, ಸಾಮಾಜಿಕ ಸಾಂಸ್ಕೃತಿಕ ವಿಶಿಷ್ಟ ಪ್ರಕಾರವಾಗಿದ್ದು, ಸಾಮಾನ್ಯವಾಗಿ ಜಾತ್ರೆ ಎಂಬ ಪದವನ್ನು ಪರಿಷೆ, ತೇರು, ರಥೋತ್ಸವ, ಉಚ್ಚಾಯ, ಪಲ್ಲಕ್ಕಿ, ಬಂಡಿ ಇತ್ಯಾದಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲಾಗುವುದು.

೧.೨ ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಸಮಾಜಶಾಸ್ತ್ರೀಯ ಅಧ್ಯಯನವಾಗಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ದೊಡ್ಡಉಳ್ಳಾರ್ತಿ ಗ್ರಾಮದ ಗೌರಾದೇವಿಯ (ಗೌರಿ) ಜಾತ್ರೆಯ ಕುರಿತು ಅಧ್ಯಯನ ಮಾಡಲಾಗಿದೆ. ನಾನಾ ಜಾತಿ, ಸಮುದಾಯಗಳು ಒಂದೇ ಕಡೆ ಸೇರುವ ವಿಶಿಷ್ಟ ಆಚರಣೆಯಾಗಿ ಗಮನ ಸೆಳೆಯುವುದು. ಈ ಜಾತ್ರೆಯ ಕುರಿತು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಇರುವ ಉದ್ದೇಶಗಳನ್ನು ಈ ಕೆಳಗೆ ನೀಡಲಾಗಿದೆ.

೧. ಜಾತ್ರೆಯ ಜನಸಾಮಾನ್ಯರ ಸಂಸ್ಕೃತಿಯನ್ನು ಹೇಗೆ ಪ್ರತಿನಿಧಿಸುವುದು ಎಂಬುದನ್ನು ನೋಡುವ ಉದ್ದೇಶವನ್ನು ಹೊಂದಿದೆ.

೨. ದೇವಿಯ ಕುರಿತಾಗಿ ಜನಸಾಮಾನ್ಯರಲ್ಲಿ ಯಾವ ರೀತಿಯ ನಂಬಿಕೆ, ವಿಧಿನಿಷೇಧಗಳು ಇವೆ ಎಂಬುದನ್ನು ಕಾಣುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

೩. ಸ್ತ್ರೀ ದೈವವಾದ ಗೌರಾದೇವಿಯ ಜಾತ್ರೆಗೂ ಹಾಗೂ ಮಹಿಳೆಯರ ಪಾಲ್ಗೊಳ್ಳುವಿಕೆಯ ಮಹತ್ವದ ಮಧ್ಯ ಯಾವ ರೀತಿಯ ಸಂಬಂಧಗಳಿವೆಯಂಬುದನ್ನು ಅಧ್ಯಯನವು ತಿಳಿಸಿಕೊಡುವುದು.

೪. ತುಂಬಾ ಹಿಂದೆ ಜರಗುತ್ತಿದ್ದ ಜಾತ್ರೆಗೂ ಪ್ರಸ್ತುತ ಜರಗುತ್ತಿರುವ ಜಾತ್ರೆಗಳ ಮಧ್ಯದಲ್ಲಿ ಉಂಟಾಗಿರುವ ವ್ಯತ್ಯಾಸಗಳನ್ನು ಈ ಅಧ್ಯಯನದಲ್ಲಿ ಕಾಣುವ ಉದ್ದೇಶವನ್ನು ಹೊಂದಿದೆ.

೫. ಸಾಮಾಜಿಕ ಸಂರಚನೆಗೂ ಜಾತ್ರೆಗಳ ಮಧ್ಯ ಇರುವ ಅಂತರ್ ಸಂಬಂಧವನ್ನು ಗುರುತಿಸುವ ಪ್ರಯತ್ನ ಈ ಅಧ್ಯಯನದ್ದಾಗಿದೆ.

೬. ಜಾತ್ರೆಗಳ ಮೇಲೆ ಆಧುನೀಕರಣದ ಪ್ರಭಾವ ಯಾವ ರೀತಿ ಉಂಟಾಗಿದೆ ಎಂಬುದನ್ನು ಗುರುತಿಸುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ.

೧.೩ ಅಧ್ಯಯನದ ಮಹತ್ವ

ಭಾರತೀಯ ಸಮಾಜದಲ್ಲಿ ಪ್ರಸ್ತುತ ದಿನಮಾನಗಳಲ್ಲಿ ಗಮನಾರ್ಹವಾದ ಬದಲಾವಣೆ ಆಗುತ್ತಿದೆ. ಬದಲಾವಣೆಯು ಜಗದ ನಿಯಮ. ಇಂತಹ ಬದಲಾವಣೆಗೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಶಿಕ್ಷಣ, ಕೈಗಾರೀಕರಣ, ನಗರೀಕರಣ, ಆಧುನೀಕರಣ, ಜಾಗತೀಕರಣ

ಇತ್ಯಾದಿ ಅಂಶಗಳು ಕಾರಣವಾಗಿವೆ. ಇವುಗಳ ಪ್ರಭಾವದಿಂದ ಜಾತ್ರೆಗಳ ಆಚರಣೆಯಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ.

ಪ್ರಸ್ತುತ ದೊಡ್ಡ ಉಳ್ಳಾರ್ತಿಯ ಗೌರಾದೇವಿಯ ಜಾತ್ರೆಯ ಕುರಿತು ಸಮಾಜಶಾಸ್ತ್ರೀಯ ಹಿನ್ನೆಲೆಯನ್ನು ಯಾವೊಂದು ಅಧ್ಯಯನಗಳೂ ನಡೆದಿರುವುದಿಲ್ಲ. ಗೌರಾದೇವಿಯ ಜಾತ್ರೆಯ ಕುರಿತು ಸ್ಥಳೀಯ ಪತ್ರಿಕೆಗಳಲ್ಲಿ ಚಿಕ್ಕಪುಟ್ಟ ಲೇಖನಗಳಷ್ಟೇ ಬಂದಿವೆ. ಗೌರಾದೇವಿಯ ಜಾತ್ರೆಯನ್ನು ಮುಖ್ಯವಾಗಿ ಸಮಾಜಶಾಸ್ತ್ರೀಯ ಹಿನ್ನೆಯಲ್ಲಿ ಅಧ್ಯಯನ ಮಾಡಿದ್ದು ಗೌರಾದೇವಿಯ ಜಾತ್ರೆಯ ಕುರಿತು ಈ ಅರ್ದಯಯನವು ಒಂದು ಹೊಸ ಕೊಡಬಲ್ಲದ್ದಾದ್ದರಿಂದ ಈ ಅಧ್ಯಯನವು ಮಹತ್ವವಾದುದಾಗಿದೆ.

೧.೪ ಅಧ್ಯಯನದ ವ್ಯಾಪ್ತಿ

ಚಿತ್ರದುರ್ಗ ಜಿಲ್ಲೆಯ ಎಷ್ಟೋ ನೆಲೆಗಳು ಆದಿಮಾನವ ವಾಸದ ನೆಲೆಗಳಾಗಿದ್ದವು ಎಂಬುದನ್ನು ಪ್ರಾಗೈತಿಹಾಸಿಕಕಾರರು ಈಗಾಗಲೇ ಗುರುತಿಸಿರುವರು. "ಚಿತ್ರದುರ್ಗ ಪರಿಸರದಲ್ಲಿ ಲಭ್ಯವಿರುವ ಶಿಲೆಗಳು ಸುಮಾರು ೨೫೦ ಕೋಟಿ ವರ್ಷಗಳಷ್ಟು ಪ್ರಾಚೀನವಾದವುಗಳಾಗಿರಬಹುದೆಂದು ಅಂದಾಜಿಸಲಾಗಿದೆ"[೩] ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ದೊಡ್ಡ ಉಳ್ಳಾರ್ತಿ ಎಂಬ ಗ್ರಾಮಕ್ಕೆ ಮಾತ್ರ ಈ ಅಧ್ಯಯನವು ಸೀಮಿತಗೊಂಡಿದೆ.

ಚಳ್ಳಕೆರೆ ತಾಲೂಕಿನ ಭೌಗೋಳಿಕ ಹಿನ್ನೆಲೆ

ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮುರು, ಹಿರಿಯೂರು, ಹೊಳಲಕೆರೆ, ಹೊಸದುರ್ಗ ತಾಲೂಕಗಳಾಗಿವೆ. ಈ ಆರು ತಾಲೂಕುಗಳಲ್ಲಿ ಒಂದಾಗಿರುವ ಚಳ್ಳಕೆರೆಯು ಜಿಲ್ಲೆಯಲ್ಲಿಯೇ ಅತ್ಯಂತ ಹಿಂದುಳಿದ ತಾಲೂಕೆಂದು ಗುರುತಿಸಲಾಗಿದೆ. ಅತಿ ಕಡಿಮೆ ಮಳೆ ಹಾಗೂ ಹೆಚ್ಚು ಉಷ್ಣಾಂಶದಿಂದ ಕೂಡಿದ, ಬರಡಾದ ಭೂ ಪ್ರದೇಶವನ್ನು ಒಳಗೊಂಡಿರುವ ಬರದ ನಾಡಾಗಿದೆ. ಹೀಗಿದ್ದರೂ ವಾಣಿಜ್ಯ ಕ್ಷೇತ್ರದಲ್ಲಿ ಜನಪ್ರಿಯತೆಗಳಿಸುವ ಮೂಲಕ ರಾಜ್ಯ ಮಟ್ಟದಲ್ಲಿ ಹೆಸರಾಗಿದೆ. ಈ ತಾಲೂಕಿನ ವಿಸ್ತೀರ್ಣ ೨೧೦೦ ಚ.ಕಿ.ಮೀ ಗಳಾಗಿದ್ದು ಒಟ್ಟು ೪ ಹೋಬಳಿಗಳಿಗಳನ್ನೊಳಗೊಂಡಿದೆ. ಇಡೀ ತಾಲೂಕು ಗ್ರಾಮೀಣ ಪ್ರದೇಶಗಳನ್ನೊಳಗೊಂಡಿದ್ದು ಚಳ್ಳಕೆರೆ ಮಾತ್ರ ತಾಲ್ಲೂಕಿನ ಪ್ರಮುಖ ನಗರವಾಗಿದೆ.

ತಾಲ್ಲೂಕಿನ ಒಟ್ಟು ಜನಸಂಖ್ಯೆ ३,೧೦,೫೯೦ ಜನಸಂಖ್ಯೆ ಇದೆ. ೧೯೫ ಗ್ರಾಮಗಳಿಂದ ಕೂಡಿದೆ. ಚಳ್ಳಕೆರೆ ತಾಲೂಕಿನ ಸಾಕ್ಷರತೆಯ ಪ್ರಮಾಣ ಶೇಕಡ ೭३.೭೧ ರಷ್ಟಿದೆ. ಕೃಷಿಯೇ ಇಲ್ಲಿಯ ಬಹುಮುಖ್ಯ ವೃತ್ತಿಯಾಗಿದ್ದು ಈ ಭಾಗದಲ್ಲಿ ೫೦% ರಷ್ಟು ಕೃಷಿಕರು ವ್ಯವಸಾಯದಲ್ಲಿ ತೊಡಗಿದ್ದಾರೆ. ಈ ಭಾಗದಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆ ಇದ್ದು ಬೇಸಗೆಯಲ್ಲಿ ಕಡು ಬಿಸಿಲಿನಿಂದ ಕೂಡಿರುತ್ತದೆ. ಮಳೆ ಆಧಾರಿತ ಬೇಸಾಯವನ್ನು

ಅವಲಂಬಿಸಿರುವ ಈ ಭಾಗದ ಜನರ ಬಹುಮುಖ್ಯ ಬೆಳೆಗಳೆಂದರೆ ಶೇಂಗಾ ಮತ್ತು ಈರುಳ್ಳಿ ನೀರಾವರಿ ಸೌಲಭ್ಯ ಈ ಭಾಗದಲ್ಲಿ ಅಷ್ಟಕಷ್ಟೆ. ಆದರೂ ತಾಲ್ಲೂಕಿನಲ್ಲಿ ಬೆಳೆಯುವ ಈರುಳ್ಳಿ ಬೆಳೆಗೆ ರಾಜ್ಯವಷ್ಟೇ ಅಲ್ಲದೆ ಹೊರರಾಜ್ಯದಲ್ಲೂ ವಿಶೇಷ ಬೇಡಿಕೆ ಮತ್ತು ಮನ್ನಣೆಗಳಿವೆ.

ಚಳ್ಳಕೆರೆ ತಾಲೂಕಿಗೆ ಉತ್ತರದಲ್ಲಿ ಮೊಳಕಾಲ್ಮೂರು ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆ, ದಕ್ಷಿಣದಲ್ಲಿ ಹಿರಿಯೂರು ತಾಲ್ಲೂಕು, ಪಶ್ಚಿಮದಲ್ಲಿ ಚಿತ್ರದುರ್ಗ ತಾಲ್ಲೂಕು, ಪೂರ್ವದಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲೂಕು ಗಡಿಗಳಾಗಿವೆ.

ಚಳ್ಳಕೆರೆ ತಾಲ್ಲೂಕು ವಾಣಿಜ್ಯ ಕ್ಷೇತ್ರವಷ್ಟೆ ಅಲ್ಲದೆ ವ್ಯಾಪಾರ ಮತ್ತು ವ್ಯವಸಾಯೋತ್ಪನ್ನ ಕ್ಷೇತ್ರಗಳಲ್ಲೂ ಹೆಸರಾಗಿದೆ. ಚಳ್ಳಕೆರೆ ಪಟ್ಟಣದಲ್ಲಿ ಬೃಹತ್ ವ್ಯವಸಾಯೋತ್ಪನ್ನ ಮಾರುಕಟ್ಟೆ ಇದೆ. ಇಲ್ಲಿ ಈ ಭಾಗದ ಮುಖ್ಯ ಬೆಳೆಗಳಾದ ಶೇಂಗಾ, ಈರುಳ್ಳಿ ಜೊತೆಗೆ ಹುಣಸೆಹಣ್ಣು ಬೇಸಿಗೆ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉತ್ಪನ್ನವಾಗುತ್ತವೆ. ಪಕ್ಕದ ಆಂಧ್ರಪ್ರದೇಶ ರಾಜ್ಯದಿಂದಲೂ ವ್ಯಾಪಾರಿಗಳು ಬರುತ್ತಾರೆ.

ಚಳ್ಳಕೆರೆ ತಾಲೂಕು ಎಲ್ಲಾ ಧರ್ಮ, ಜಾತಿ, ಸಮುದಾಯಗಳ ನೆಲೆಯಾಗಿದೆ. ಇಲ್ಲಿ ಗೊಲ್ಲ, ನಾಯಕ, ಆದಿಕರ್ನಾಟಕ ಜಾತಿಯವರು ಹೆಚ್ಚಾಗಿ ಕಂಡುಬರುತ್ತಾರೆ. ಕಾಡುಗೊಲ್ಲ ಮತ್ತು ನಾಯಕ ಸಮುದಾಯಗಳು ವಿಶಿಷ್ಟ ಬುಡಕಟ್ಟು ಲಕ್ಷಣಗಳನ್ನು ಒಳಗೊಂಡಿವೆ. ಈ ಸಮುದಾಯಗಳ ಸಂಸ್ಕೃತಿ, ಅದನ್ನು ಪ್ರತಿನಿಧಿಸುವ ಜಾತ್ರೆಗಳು ತಾಲ್ಲೂಕಿನಾದ್ಯಂತ ಆಚರಣೆಯಲ್ಲಿವೆ.

ಈ ತಾಲೂಕಿನ ಧಾರ್ಮಿಕ ಕ್ಷೇತ್ರಗಳಾಗಿ ಪ್ರಸಿದ್ಧಿಯನ್ನು ಹೊಂದಿದ ನಾಯಕನಹಟ್ಟಿ, ಗೌರಸಮುದ್ರ, ಕುದಾಪುರ, ಗೌರಿಪುರ, ದೊಡ್ಡುಳ್ಳಾರ್ತಿ, ಪರುಶುರಾಂಪುರ, ಚನ್ನಮ್ಮನಾಗತಿಹಳ್ಳಿ ಇತ್ಯಾದಿ ಕ್ಷೇತ್ರಗಳು ಇಲ್ಲಿವೆ. ತಾಲ್ಲೂಕಿನಲ್ಲಿ ಕಾಣದೊರೆಯುವ ಏಕೈಕ ಪ್ರಕೃತಿ ವಿಸ್ಮಯ ತಾಣ ನನ್ನಿವಾಳ ಮಾತ್ರ. ಇನ್ನೂ ಸಾಹಿತ್ಯ ಕ್ಷೇತ್ರಕ್ಕೆ ತಾಲ್ಲೂಕಿನ ಯಲಗಟ್ಟಿ ಗೊಲ್ಲರಹಟ್ಟಿ, ತಳುಕು, ಬೆಳೆಗೆರೆಗಳ ಕಾಣಿಕೆ ಅಭೂತಪೂರ್ವ ಮತ್ತು ಅವಿಸ್ಮರಣೀಯ. ಈ ಕ್ಷೇತ್ರದಲ್ಲಿ ಟಿ.ಎಸ್.ವೆಂಕಣ್ಣಯ್ಯ, ತ.ರಾ.ಸು., ತ.ಸು.ಶಾಮರಾಯ, ಜನಪದ ಹಾಡುಗಾರ್ತಿ ನಾಡೋಜ ಪುರಸ್ಕೃತೆ ಸಿರಿಯಜ್ಜಿ ಅವರ ಸಾಹಿತ್ಯ ಕೃಷಿ ತಾಲ್ಲೂಕಿಗೆ ಹೆಮ್ಮೆಯ ಗರಿಯಾಗಿರುವರು. ಈ ಭಾಗದ ಕುದಾಪುರ ಪ್ರದೇಶದಲ್ಲಿ ರಾಜ್ಯದ ವೈಮಾನಿಕ ಪರೀಕ್ಷಾ ಕೇಂದ್ರವನ್ನು ಪ್ರಾರಂಬಿಸಲು ಸೂಕ್ತ ಪರಿಶೀಲನೆಗಳು, ಹಲವು ಸುತ್ತಿನ ಮಾತುಕತೆಗಳು ನಡೆದಿದ್ದು ಕಾರ್ಯಚಟುವಟಿಕೆಗಳಿಗೆ ಭರದಿಂದ ಸಿದ್ದತೆಗಳು ನಡೆಯುತ್ತಿರುವುದು ಈ ತಾಲ್ಲೂಕಿಗೊಂದು ಕಿರೀಟ.

ಮಹತ್ವವಾದ ಐತಿಹಾಸಿಕ ಪರಂಪರೆಯನ್ನು ಹೊಂದಿರುವಂತಹ ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲೂಕು. ಒಂದು ಧಾರ್ಮಿಕ ಸಾಂಸ್ಕೃತಿಕವಾಗಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಪ್ರಾಚೀನ ಕಾಲದಿಂದ ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿರುವ ದೊಡ್ಡಉಳ್ಳಾರ್ತಿ ಗ್ರಾಮದಲ್ಲಿ ಗೌರಿದೇವಿಯ ಜಾತ್ರೆ ಅಕ್ಟೋಬರ್ ನವೆಂಬರ್ ಗಳ ಮಧ್ಯ ಬರುವ ದೊಡ್ಡ ಗೌರಿಹುಣ್ಣುಮೆಯಂದು ಜರಗುವುದು. ಈ ಗ್ರಾಮವು ಚಳ್ಳಕೆರೆ ತಾಲೂಕು ಕೇಂದ್ರದಿಂದ ೧೪ ಕಿಲೋಮೀಟರ ದೂರದಲ್ಲಿದೆ. ಗೌರಾದೇವಿಯ ಜಾತ್ರೆಯ ಹೊರತಾಗಿ ನಾಯಕನಹಟ್ಟಿ ತಿಪ್ಪೇಸ್ವಾಮಿ, ಗೌರಸಮುದ್ರದ ಮಾರಮ್ಮ (ಗೌಸಂದ್ರ ಮಾರಮ್ಮ), ಚಳ್ಳಕೆರೆ ನಗರದ ಹೊರಭಾಗದಲ್ಲಿರುವ ಚಳ್ಳಕೇರಮ್ಮ ಹಾಗೂ ವೀರಭದ್ರೇಶ್ವರನ ಜಾತ್ರೆಗಳು ತುಂಬಾ ಪ್ರಸಿದ್ಧಿಯನ್ನು ಪಡೆದಿವೆ. ಪ್ರಸ್ತುತ ದೊಡ್ಡ ಉಳ್ಳಾರ್ತಿಯ ಗೌರಾದೇವಿಯ ಜಾತ್ರೆಯ ಕುರಿತು ಮಾತ್ರ ಈ ಅಧ್ಯಯನದಲ್ಲಿ ನೋಡಲಾಗಿದೆ. ದೊಡ್ಡ ಉಳ್ಳಾರ್ತಿಯು ತಳುಕು ಹೋಬಳಿಗೆ ಸೇರಿದೆ.

೧.೫ ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವನ್ನು ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನಗಳನ್ನು ಹಾಗೂ ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸಲಾಗಿದೆ. ಹಾಗೆ ನಕ್ಷೆಗಳು, ಚಿತ್ರಗಳು, ಛಾಯಾಚಿತ್ರಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಜಾತ್ರೆಗಳ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟೆಯರಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ಈ ಜಾತ್ರೆಗೆ ಸಂಬಂಧಿಸಿದಂತೆ ಸ್ಥಳೀಯ ಹಿರಿಯರನ್ನು, ಮಹಿಳೆಯರನ್ನು ಸಂದರ್ಶನ ನಡೆಸಲಾಯಿತು. ಅವರೊಂದಿಗೆ ಚರ್ಚಿಸಿ ಜಾತ್ರೆಯ ಹಿನ್ನೆಲೆಯನ್ನು ಅರಿಯಲಾಯಿತು. ಜಾತ್ರೆಯ ಕುರಿತಾಗಿ ಮಾಹಿತಿ ಪಡೆಯಲು ಸ್ಥಳೀಯ ಪೂಜಾರಿ ಹಾಗೂ ನಾನಾ ಜಾತಿ, ಸಮುದಾಯದ ಜನರು ಹಾಗೂ ಮಹಿಳೆಯರನ್ನು ಸಂದರ್ಶನ ಮಾಡಲಾಯಿತು. ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಚಾರಿತ್ರಿಕ ವಿಧಾನ, ಸಂಖ್ಯಾ ಶಾಸ್ತ್ರೀಯ ವಿಧಾನ, ಸಹಭಾಗಿತ್ವ ವಿಧಾನಗಳಿಂದ ಕ್ರೋಢಿಕರಿಸಿದ ಅಂಶಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೧.೬ ಅಧ್ಯಯನದ ಸ್ವರೂಪ

ಈ ಅಧ್ಯಯನವು ಒಟ್ಟು ನಾಲ್ಕು ಅಧ್ಯಾಯಗಳನ್ನು ಒಳಗೊಂಡಿದ್ದು ಕೊನೆಯಲ್ಲಿ ಸಮಾರೋಪ ಹಾಗೂ ಅನುಬಂಧಗಳಿವೆ.

ಅಧ್ಯಾಯ ಒಂದು ಪ್ರವೇಶವಾಗಿದ್ದು ಇದರಲ್ಲಿ ಜಾತ್ರೆಯ ಅರ್ಥ ಹಾಗೂ ಪದನಿಷ್ಪತ್ತಿ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಅಧ್ಯಯನ ಕೈಗೊಂಡ ವಿಧಾನಗಳು, ಅಧ್ಯಾಯಗಳ ರೂಪುರೇಷೆಗಳು ಹಾಗೂ ಇಲ್ಲಿಯವರೆಗೆ ನಡೆದ ಅಧ್ಯಯನಗಳ ವಿವರಗಳನ್ನು ನೀಡಲಾಗಿದೆ.

ಅಧ್ಯಾಯ ಎರಡು ಗೌರಿ ಜಾತ್ರೆ ಎಂದಿದ್ದು ಇದರಲ್ಲಿ ಗೌರಿ ಪದದ ನಿಷ್ಪತ್ತಿ, ಜನಪದರ ಕಥೆಯಲ್ಲಿ ಗೌರಿಯ ಹಿನ್ನೆಲೆ, ಗೌರಿ ಜಾತ್ರೆಯ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ ಹಿನ್ನೆಲೆ, ಹಬ್ಬಗಳು, ಜಾತ್ರೆಯ ವಿಧಗಳು, ಜಾತ್ರೆಗಳ ಪ್ರ್ಯೋಜನಗಳು, ಗೌರಿಹುಣ್ಣಿಮೆ ಹಾಗೂ ಜಾತ್ರೆಗಳಲ್ಲಿ ಯಾವ ಯಾವ ಪ್ರದರ್ಶನ ಕಲೆಗಳು ನಡೆಯುವವು ಎಂಬುದರ ಕುರಿತು ತಿಳಿಸಲಾಗಿದೆ.

ಅಧ್ಯಾಯ ಮೂರು ಗೌರಿದೇವಿಗೆ ಹರಕೆ ಸಲ್ಲಿಸುವ ಆಚರಣೆಗಳು ಎಂದಿದ್ದು ಇದರಲ್ಲಿ ಜಾತ್ರೆಯ ಪೂರ್ವ ಸಿದ್ದತೆ, ಜಾತ್ರೆಯ ಪವಾಡಗಳು, ಅವಿವಾಹಿತರ ಹರಕೆಗಳು, ಜಾತ್ರೆಯ ಸಂದರ್ಭದಲ್ಲಿ ಮಹಿಳೆಯ ಮಡಿ ಮೈಲಿಗೆ ಆಚರಣೆ, ಒಂದೇ ವಂಶದವರಿಂದ ಪೂಜೆ, ಜಾತ್ರೆಯ ಕುರಿತಾಗಿರುವ ನಂಬಿಕೆಗಳು, ಭಕ್ತಾದಿಗಳಲ್ಲಿರುವ ನಂಬಿಕೆಗಳು, ಪೂಜಾ ವಿಧಾನ, ದಾಸೋಹ, ಪೂಜಾರಿ ಕಾರ್ಯ, ಜಾತ್ರೆಯ ಪ್ರಯೋಜನ, ಜಾತ್ರೆಯ ಪ್ರಮುಖ್ಯತೆ, ಗೌರಿ ದೇವಿಯ ಪ್ರಸಿದ್ಧತೆ ಮುಂತಾದವುಗಳ ಕುರಿತು ನೋಡಲಾಗಿದೆ

ಅಧ್ಯಾಯ ನಾಲ್ಕು ಜಾತ್ರೆಗೆ ಸಂಬಂಧಿಸಿದ ಆಚರಣೆಗಳೆಂದಿದ್ದು ಇದರಲ್ಲಿ ಜಾತ್ರೆಗಳ ಆಚರಣೆ, ಸಂಘಟನಾ ಆಚರಣೆ, ಸಮಷ್ಠಿ ಹಿತರಕ್ಷಣೆಯ ಆಚರಣೆ, ಸಾಮಾಜಿಕ ಆಚರಣೆ, ಸಾಂಸ್ಕೃತಿಕ ಆಚರಣೆ, ರಾಜಕೀಯ ಆಚರಣೆ, ಮನೋರಂಜನಾ ಆಚರಣೆ, ಆರ್ಥಿಕ ಆಚರಣೆ, ಧಾರ್ಮಿಕ ಆಚರಣೆ, ಆಚರಣೆಗಳಲ್ಲಿನ ಬದಲಾವಣೆಗಳು, ಹರಕೆಗಳು, ಉಪವಾಸ, ದೇವರಿಗೆ ಉಡುಗೊರೆಗಳು, ಪೂಜಾ ಆಚರಣೆಗಳು, ವ್ಯಾಪಾರ ವಹಿವಾಟನ ಬದಲಾವಣೆ, ಮಕ್ಕಳ ಆಟಿಕೆಗಳು, ಸ್ತ್ರೀಯರಿಗೆ ಅವಶ್ಯವಾದ ವಸ್ತುಗಳು, ಗೃಹ ಬಳಕೆ ವಸ್ತುಗಳು, ಮನೋರಂಜನೆಗಳಲ್ಲಿನ ಬದಲಾವಣೆ, ಸ್ಪರ್ಧೆಗಳು, ಸಂಘಟನೆಗಳಲ್ಲಿ ಉಂಟಾಗಿರುವ ಬದಲಾವಣೆ ಕುರಿತು ನೋಡಲಾಗಿದೆ. ಕೊನೆಯಲ್ಲಿ ಸಮಾರೋಪವಿದ್ದು ಅದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಹಾಗೆಯೇ ಅನುಬಂಧಗಳಿದ್ದು ಅನುಬಂಧ ಒಂದರಲ್ಲಿ ಪರಾಮಾರ್ಶನ ಗ್ರಂಥಗಳು, ಅನುಬಂಧ ಎರಡರಲ್ಲಿ ಚಳ್ಳಕೆರೆ ತಾಲೂಕಿನಲ್ಲಿ ಬರುವ ಗ್ರಾಮಗಳು, ಅನುಬಂಧ ಮೂರರಲ್ಲಿ ಜಾತ್ರೆಗೆ ಸಂಬಂಧಿಸಿದಂತೆ ಭಕ್ತಾದಿಗಳು ಸೇರುವ ಗ್ರಾಮಗಳ ಹೆಸರು, ಅನುಬಂಧ ನಾಲ್ಕರಲ್ಲಿ

ಮಾಹಿತಿದಾರರ ವಿವರಗಳು, ಅನುಬಂಧ ಐದರಲ್ಲಿ ನಕ್ಷೆಗಳು, ಅನುಬಂಧ ಆರರಲ್ಲಿ ಛಾಯಾಚಿತ್ರಗಳನ್ನು ನೀಡಲಾಗಿದೆ.

೧.೭ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ಜಾತ್ರೆಗಳ ಕುರಿತು ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಎಂ ಜಿ ಈಶ್ವರಪ್ಪನವರ 'ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜನಪದ'[೪] (೧೯೮೪) ಎಂಬ ಮಹಾಪ್ರಬಂಧ ರಚಿಸಿರುವರು. ಇದರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಗಳು ಮತ್ತು ಜಾತ್ರೆಗಳು ಒಟ್ಟೊಟ್ಟಿಗೆ ನಡೆಯುತ್ತವೆ. ಹಬ್ಬ ಮತ್ತು ಜಾತ್ರೆ ಬೇರೆ ಬೇರೆ ಎಂದು ಪರಿಗಣಿಸುವುದು ಕಷ್ಟ ಎಂದುಹೇಳಿದ್ದಾರೆ.

ಎಸ್ ಎಸ್ ಹಿರೇಮಠ ಅವರ ಹಬ್ಬಗಳು- ಜಾತ್ರೆಗಳು[೫] (೧೯೯೮) ಎಂಬ ಕೃತಿಯಲ್ಲಿ ಹಬ್ಬ ಜಾತ್ರೆಗಳು ಎರಡು ಭಿನ್ನವಾದವುಗಳು. ಇವು ಆಯಾ ಜನವರ್ಗದ, ಪ್ರದೇಶದ ಸಂಸ್ಕೃತಿಗೆ ಸಂಬಂಧಿಸಿದ್ದು ತದನಂತರದಲ್ಲಿ ಅವುಗಳು ಸಂಯೋಗವಾಗಿರುವ ಸಾಧ್ಯತೆ ಇದೆ. ಹೀಗಿದ್ದೂ ಹಬ್ಬ, ಜಾತ್ರೆಗಳು ಪ್ರತ್ಯೇಕತೆ ಹಾಗೂ ವೈಶಿಷ್ಟಗಳನ್ನು ಉಳಿದುಕೊಂಡು ಬಂದಿವೆ ತಿಳಿಸಿದ್ದಾರೆ.

ಚಂದ್ರಶೇಖರ ಕಂಬಾರರು ಸಂಪಾದಿಸಿರುವ ಕನ್ನಡ ಜಾನಪದ ವಿಶ್ವಕೋಶ[೬] (೧೯೭೮) ದಲ್ಲಿ ತಿಳಿಸಿರುವಂತೆ ಬಹುಶಃ ಹಬ್ಬ ಮೂಲತಃ ವಿಜಯೋತ್ಸವಗಳಾಗಿರಬೇಕು. ದುಷ್ಟಶಕ್ತಿಯನ್ನು ದಮನ ಮಾಡಿದುದರ ಜ್ಞಾಪಕಾರ್ಥವಾಗಿ ಇವುಗಳ ಆಚರಣೆ ಬಂದಿರಬೇಕು ಎಂದು ಅಭಿಪ್ರಾಯ ಪಡಲಾಗಿದೆ.

ಆರ್ ಬಿ ದಿವಾಕರ್ ಹಾಗೂ ಆರ್ ಬಿ ಕುಮಾರ್ ಅವರ ಕುಮಾರರಾಮನ ಹಬ್ಬ- ಜಾತ್ರೆಗಳು[೭] (೨೦೦೫) ಕರ್ನಾಟಕದಲ್ಲಿ ವಿಶೇಷವಾಗಿ ಆಚರಣೆ ಮಾಡಲಾಗುವ ಕುಮಾರರಾಮನ ಹಬ್ಬ-ಜಾತ್ರೆಗಳ ಕುರಿತು ಹೊಸ ಬೆಳಕನ್ನು ಚಲ್ಲುವ ಕೃತಿಯಾಗಿದೆ. ಕುಮಾರರಾಮನ ಹಬ್ಬ- ಜಾತ್ರೆಗಳಲ್ಲಿ ಪ್ರಾದೇಶಿಕವಾಗಿರುವ ಭಿನ್ನತೆ, ಭಿನ್ನತೆಯ ಮಧ್ಯದಲ್ಲಿಯೂ ಆ ಹಬ್ಬ-ಜಾತ್ರೆಗಳ ಮಧ್ಯ ಇರುವ ಏಕತೆಯ ಕುರಿತು ಸವಿವರವಾಗಿ ತಿಳಿಸಿಕೊಡುವುದು.

ಚಿದಾನಂದಮೂರ್ತಿ ಎಂ ಅವರು ಶೂಲದ ಹಬ್ಬದ ಕುರಿತು ತಮ್ಮ ಗ್ರಾಮೀಣ[೮] (೧೯೯೫)ಕೃತಿಯಲ್ಲಿ ವಿವರಿಸಿರುವರು.

ಡಿ ಆರ್ ನಾಗರಾಜ್ ಅವರು ಸಂಸ್ಕೃತಿ ಕಥನ್ (೧೯೯೭) ಕೃತಿಯಲ್ಲಿ ಹಬ್ಬ ಜಾತ್ರೆಗಳ ಮಹತ್ವವನ್ನು ತಿಳಿಸಿರುವರು.

ನೇಗಿನಹಾಳ್ ಎನ್ ಅವರ ಮೈಲಾರ-ಖಂಡೋಬ[೧೦] (೧೯೯೦) ಕೃತಿಯಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿರುವ ಮೈಲಾರ ಹಾಗೂ ಖಂಡೋಬರ ಜಾತ್ರೆ ಹಬ್ಬಗಳ ಕುರಿತಾದ ಮಾಹಿತಿ ದೊರೆಯುವುದು.

ಕೊನೆ ಟಿಪ್ಪಣಿ

೧. ಈಶ್ವರಪ್ಪ ಎಂ.ಜಿ., ಚಿತ್ರದುರ್ಗ ಜಿಲ್ಲೆಯ ವ್ಯವಸಾಹಯ ಜನಪದ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು-೫೧.

೨. ಅದೇ, ಪು-೫೮.

೩. ಅದೇ, ಪು-೧೭೮.

೪. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು, ಪು-೮೭.

೫. ಅದೇ, ಪು-೭೮.

೬. ಅದೇ, ಪು-೮೯.

೭. ಶಿವಕುಮಾರಸ್ವಾಮಿ, ೧೯೮೮, ಕರ್ನಾಟಕ ಜಾತ್ರೆಗಳು, ಸ್ನಾತಕೋತ್ತರ ಕೇಂದ್ರ, ಬಿ ಆರ್ ಪ್ರಾಜೆಕ್ಟ್, ಶಿವಮೊಗ್ಗ, ಪು-೭೮.

೮. ಅದೇ, ಪು-೮೯.

೯. ಹಿರೇಮಠ ಎಸ್ ಎಸ್, ೧೯೯೨, ಜಾತ್ರೆಗಳು, ಸಮತಾ ಪ್ರಕಾಶನ, ಹರಪ್ಪನಹಳ್ಳಿ, ಪು-೯೭.

೧೦. ಅದೇ, ಪು-೧೧೦.

❖❖❖

ಅಧ್ಯಾಯ : ಎರಡು

ಗೌರಿದೇವಿ ಜಾತ್ರೆ

೨.೧ ಗೌರಿ ಪದ ನಿಷ್ಪತ್ತಿ
೨.೨ ಜನಪದರ ಕಥೆಯಲ್ಲಿ ಗೌರಿಯ ಹಿನ್ನೆಲೆ
೨.೩ ಗೌರಿ ಜಾತ್ರೆ (ಸ್ವರ್ಣಗೌರಿ)
೨.೪ ಗೌರಿದೇವಿ ಜಾತ್ರೆಯ ಚಾರಿತ್ರಿಕ ಹಿನ್ನೆಲೆ
೨.೫ ಭೌಗೋಳಿಕ ಹಿನ್ನೆಲೆ
೨.೬ ಹಬ್ಬಗಳು
೨.೭ ಜಾತ್ರೆಗಳ ವಿಧಗಳು
೨.೮ ಜಾತ್ರೆಗಳ ಪ್ರಯೋಜನಗಳು
೨.೯ ಗೌರಿ ಹುಣ್ಣಿಮೆ
೨.೧೦ ಜಾತ್ರೆಯಲ್ಲಿನ ಪ್ರದರ್ಶನ ಕಲೆಗಳು

ಅಧ್ಯಾಯ: ಎರಡು

ಗೌರಿದೇವಿ ಜಾತ್ರೆ

ಗೌರಿ ಹಬ್ಬವು ವಿಶೇಷವಾಗಿ ಮಹಿಳೆಯರ ಹಬ್ಬವೆಂದೇ ಕರೆಯಲ್ಪಡುತ್ತದೆ. ಕರ್ನಾಟಕದ ಕರಾವಳಿ ಪ್ರದೇಶದ ಹೊರತಾಗಿ ಮಧ್ಯ ಕರ್ನಾಟಕ, ಹೈದರಾಬಾದ-ಕರ್ನಾಟಕ, ಹಳೆ ಮೈಸೂರು ಪ್ರಾಂತ್ಯ ಇತ್ಯಾದಿ ಕಡೆ ಗೌರಿಹಬ್ಬ ನಾನಾ ರೂಪದಲ್ಲಿ ಪ್ರಚಲಿತವಿದೆ. ಗೌರಿ ಶಿವನ ಹೆಂಡತಿ. ಶೈವ ಸಂಸ್ಕೃತಿಯ ಪ್ರಧಾನ ದೈವ. ಗೌರಿಯ ಕುರಿತಾಗಿ ಪೌರಾಣಿಕ ಹಾಗೂ ಜನಪದ ಕಥೆ ಹಾಡುಗಳು ಕರ್ನಾಟಕದಾದ್ಯಂತ ದೊರೆಯುತ್ತವೆ. ಗೌರಿ ಹಬ್ಬಕ್ಕೂ ವಿಜಯನಗರ ಅರಸರ ಆಳ್ವಿಕೆಯ ಪ್ರದೇಶಗಳಿಗೂ ಸಂಬಂಧವಿರುವುದಾಗಿ ಹೇಳುವರು. ಪಾಂಡವರ ತಾಯಿ ಕುಂತಿಯು ತನ್ನ ಮಕ್ಕಳಿಗೆ ಒಳಿತಾಗಲೆಂದು ನೋಂಪಿಯ ಗೌರಿಯ ವ್ರತವನ್ನು ಮಾಡುವಳು. ಅದರ ಪ್ರತೀಕವಾಗಿ ಗೌರಿಹಬ್ಬ ಜನ್ಮ ತಾಳಿದೆ ಎಂಬ ಮಾತುಗಳೂ ಕೇಳಿಬರುತ್ತವೆ.

೨.೧ ಗೌರಿ ಪದದ ನಿಷ್ಪತ್ತಿ

ಗೌರಿ ಪದದ ನಿಷ್ಪತ್ತಿ ಬಗ್ಗೆ ಪುರಾಣ ಕಾವ್ಯಗಳಲ್ಲಿ ವ್ಯಕ್ತವಾಗಿರುವ ಹೇಳಿಕೆ ಮತ್ತು ಕಥೆಗಳು ನಮಗೆ ಸಾಕಷ್ಟು ಸಿಗುತ್ತವೆ.

ಗ್ರಾಮೀಣ ಭಾಗದ ಜನಪದರು ಗೌರಿಯನ್ನು ಪಾರ್ವತಿಯ ರೂಪಾಂತರವಾಗಿ ಪೂಜಿಸುತ್ತಾರೆ. ವರ್ಷದ ಹನ್ನೆರಡು ಮಾಸಗಳಲ್ಲಿ ಬರುವ ಶುಕ್ಲ ತೃತೀಯ ಮತ್ತು ಕೃಷ್ಣ ತೃತೀಯ ತಿಥಿಗಳಲ್ಲಿ ಗೌರಿಯನ್ನು ಬೇರೆ ಬೇರೆ ಹೆಸರುಗಳಿಂದ ಪೂಜಿಸುವ ವಿಧಾನ ಪುರಾಣಗಳಲ್ಲಿ ಉಲ್ಲೇವಾಗಿದೆ. ಶಿವನ ಪತ್ನಿಯು ಹಳದಿ-ಬಿಳುಪುಗಳಿಂದ ಕೂಡಿದ ಮಿಶ್ರ ವರ್ಣದ ಶರೀರವನ್ನು ಹೊಂದಿದ ಪಾರ್ವತಿಯನ್ನು ಅವಳ ದೇಹದ ವರ್ಣದ ಕಾರಣಕ್ಕಾಗಿಯೇ ಗೌರಿ ಎಂಬ ಹೆಸರಿನಿಂದ ಕರೆಯಲಾಯಿತು ಎಂದು ಹೇಳಲಾಗುವುದು.

"ಪೌರಾಣಿಕ ಕಥೆಯಲ್ಲಿ ದಕ್ಷ ಬ್ರಹ್ಮನಿಗೆ ಕಾಳೀ ಎಂಬ ಮಗಳಿದ್ದಳು ಆಕೆ ಕನ್ಯೆದಿಲೆಯಂತೆ ಕಪ್ಪು ಬಣ್ಣದಿಂದ ಕೂಡಿದ್ದಳು. ದಕ್ಷ ಆಕೆಯನ್ನು ಈಶ್ವರನಿಗೆ ಕೊಟ್ಟು ವಿವಾಹ ಮಾಡಿದ್ದನು. ಶಿವನು ಆಕೆಯೊಂದಿಗೆ ಸಂತೋಷದಿಂದ ಒಮ್ಮೇ ಆಸ್ಥಾನ ಮಂಟಪದಲ್ಲಿ ವಿಷ್ಣು ಮತ್ತು ದೇವತೆಗಳೊಡನೆ ಈಶ್ವರ ತನ್ನ ಪತ್ನಿಯನ್ನು ಕೃಷ್ಣವರ್ಣದವಳಾದ ಕಾಳಿಯೇ ಬಾ. ನಿನ್ನ ಬಣ್ಣ ಕಪ್ಪಾಗಿದ್ದರೂ ಸೌಂದರ್ಯದಿಂದ ನಿನ್ನ ರೂಪ ನನಗೆ ಪ್ರಿಯವಾಗಿರುವೆ ಎಂದು ಹೇಳಿದ. ಈ ಮಾತನ್ನು ಕೇಳಿದ ಕಾಳಿ ಲಜ್ಜಿತಳಾಗಿ ದುಃಖಿಸಿ ತನ್ನ ಕಪ್ಪುದೇಹವನ್ನು ನೀಗಲು ದೇವ ಸಮುದಾಯದ ಎದುರಿನಲ್ಲಿಯೇ ಅಗ್ನಿ ಪ್ರವೇಶ ಮಾಡಿ ಮತ್ತೆ ಪರ್ವತರಾಜನಿಗೆ ಮಗಳಾಗಿ ಗೌರವರ್ಣ ಶರೀರದಿಂದ ಕೂಡಿದವಳಾಗಿ ಹುಟ್ಟಿ ಈಶ್ವರನನ್ನೇ ವಿವಾಹವಾದಳು."[೧]

ಇನ್ನೊಂದು ಪುರಾಣ ಕಥೆಯಲ್ಲಿ "ಶುಂಭ-ನಿಶುಂಭರೆಂದು ದೈತ್ಯರು ಲೋಕ ಕಂಟಕರಾಗಿ ದೇವತೆಗಳನ್ನು ತೊಂದರೆ ಪಡಿಸುತ್ತಿದ್ದರು. ದೇವತೆಗಳೆಲ್ಲ ಪಾರ್ವತಿಯನ್ನು ಮೊರೆ ಹೋದರು. ಆಗ ಪಾರ್ವತಿಯ ಶರೀರದಿಂದ ಕೌಶಿಕಿ ಎಂಬ ಸುಂದರಿ ಅವಿರ್ಭವಿದೆ. ಆ ರಾಕ್ಷಸರನ್ನು ಸಂಹರಿಸಿದಳು. ಕೌಶಿಕಿ ಆರ್ಭಟಿಸಿದ ಮೇಲೆ ಪಾರ್ವತಿ ಕಪ್ಪಾಗಿ ಕಂಡಳು. ಶಿವ ಆಕೆಯನ್ನು ಕಾಳಿ ಎಂದು ಕರೆದಾಗ ಆಗ ಪಾರ್ವತಿ ತಪಸ್ಸು ಮಾಡಿ ಗೌರಿಶರೀರವನ್ನು ಪಡೆದಳು."[೨]

ಗೌರಿದೇವಿಯನ್ನು ಸ್ವಾಗತಿಸಲು ಊರಿನ ಪಟೇಲರು (ಗೌಡರು), ಶಾನುಭೋಗರು, ಗೊಂಚಿಗಾರರು, ತೋಟಿ, ತಳವಾರರು, ಕಹಳೆಯವರು, ಆಯಾಗಾರರು, ಮಡಿವಾಳರು ಮುಂತಾದ ಹಲವಾರು ಕೋಮಿನ ಜನರು ಒಂದೆಡೆ ಸೇರಿ ಭಕ್ತಿಯಿಂದ ಜಾತ್ರೆಯ ಆಚರಣೆಯನ್ನು ಮಾಡುತ್ತಾರೆ.

ಸೇವಾ ಕೈಂಕಾರ್ಯಗಳನ್ನು ಮಾಡುವರು ಒಂದು ಹೊತ್ತಿನಿಂದ ಸೇವೆ ಮಾಡುತ್ತಾರೆ. ಪಂಜು ಹಿಡಿದು ನಡೆ ನುಡಿ ಹಾಸುವವರು ಗ್ರಾಮದ ಮಡಿವಾಳರು, ಕಲ್ಲುಮುಳ್ಳು ಹೊಯ್ಯುವವರು ಗ್ರಾಮದ ಕಮ್ಮಾರರು. ಅರಿಶಿನ ಕಡಲೆ ಬೀಸುವವರು ಹರಕೆ ಇದು. ಯಾರೇ ಬೀಸುವ ಕಲ್ಲನ್ನು ಬೀಸಲಿ ಒಂದೊತ್ತಿನಿಂದ ಬೀಸಬಹುದು. ಉಳಿದಂತೆ ಗ್ರಾಮದ ತಳವಾರರದು ಮಾತ್ರ ಬೀಸುವ ಸಂಪ್ರದಾಯವಾಗಿದೆ.

ಗೌರಿಯ ಮುಖವಾಡ ಮಾಡುವರು ಮೊಗಲಹಳ್ಳಿ ಆಚಾರ್ಯ ಹಿಂದೆ ಚೋಳೂರಿನ ಆಚಾರ್ಯರು ಗೌರಿದೇವಿಯ ಮುಖವಾಡ ಮಾಡುತ್ತಿದ್ದರು. ಈಗ ಅವರ ಸಂತತಿ ಇಲ್ಲದಿರುವುದರಿಂದ ಹೆಣ್ಣು ಸಂತತಿಯಿಂದ ಬಂದು ಮೊಗಲಹಳ್ಳಿಯವರು ಮಾಡುವ ಸಂಪ್ರದಾಯ ಇಂದಿಗೂ ನಡೆದುಬಂದಿದೆ. ಗೌರಮ್ಮನಿಗೆ ಉಡಿಯನ್ನು ಚೆನ್ನಮ್ಮನಾಗತಿಹಳ್ಳಿ ತುಪ್ಪದವರ ಮನೆಯಿಂದ ತರುವ ಪದ್ಧತಿ ಇದೆ. ಹಾಲು, ತುಪ್ಪ, ತಾಳೆಗರಿ, ಗುಲಗಂಜಿ,

ಜೇನುತುಪ್ಪ, ಬಳೆ, ಮರಳು ಇವುಗಳನ್ನು ತರುವವರು ನಾಯಕ ಜನಾಂಗದವರು ಕವಲೂರು ಬಳೆ ತೊಡಿಸುವವರು ಗ್ರಾಮದ ಬಳೆಗಾರರು.

ದೇವಿ ಪೂಜಾರಿಗಳು ನಾಗಪ್ಪನ ಸಂತತಿಯವರಿಂದ ವಂಶಪಾರಂಪರ್ಯವಾಗಿ ನಡೆದುಬಂದಿದ್ದು ಅವರ ಸಂತತಿ ನಿಂತು ಹೋದ ಪ್ರಯುಕ್ತ ಹೆಣ್ಣಿನ ಸಂತತಿಯವರೇ ಪೂಜೆಯನ್ನು ಮಾಡುವ ಸಂಪ್ರದಾಯವಿದೆ. ಮಠದವರು ಸಹ ವಂಶಪಾರಂಪರ್ಯವಾಗಿ ಬಂದವರೆ ಅವರ ಸಂತತಿಯೂ ನಷ್ಟವಾದ ಕಾರಣ ಈಗಿನ ಮಠದವರು ಹೆಣ್ಣು ಸಂತತಿಯವರೇ ಆಗಿರುತ್ತಾರೆ.

ಹೊಸ ಮೊರ, ವಸ್ತ್ರ, ಅರಿಶಿಣ ಮುಂತಾದ ಪರಿಕರಗಳನ್ನು ಕೊಡುವ ಪದ್ಧತಿ ಗ್ರಾಮದ ಗೌಡರು ನಡೆಸಿಕೊಂಡುಬಂದಿದ್ದಾರೆ.

ದೇವಿಯನ್ನು ವೀರಶೈವರು ಮಾತ್ರ ಹೊರುವ ಪದ್ಧತಿ ಇದೆ. ಹುಣ್ಣಿಮೆಯ ದಿನ ಏಳು ಜನ ಮುತ್ತೈದೆಯರು ಪಂಚಾಮೃತದಿಂದ ಗೌರಮ್ಮನ ಕಳಸವನ್ನು ತೊಳೆಯುತ್ತಾರೆ. ಗೌರಮ್ಮನ ಆರತಿಗೆ ಎಣ್ಣೆ ಹಾಕುವವರು ತಳವಾರರ ಸಂಪ್ರದಾಯ ಪದ್ಧತಿಯಾಗಿದೆ. ಗೌರಿದೇವಿಯ ಮೆರವಣಿಗೆಯು ಮೈಲಾರ ದೇವರ ದೇವಾಲಯದಿಂದ ವೀರಭದ್ರಸ್ವಾಮಿಯ ದೇವಾಲಯಕ್ಕೆ ಬಂದು ತನ್ನ ಮಗನಾದ ವೀರಭದ್ರಸ್ವಾಮಿಯೊಂದಿಗೆ ಗೌರಿದೇವಿಯು ತನ್ನ ತವರು ಮನೆಗೆ ಬರುವ ಸಂಪ್ರದಾಯ ನಡೆದುಬಂದಿರುತ್ತಾರೆ.

ಹೀಗೆ ಗೌರಿದೇವಿಯು ಬರುವಾಗ ಶುಭ ಸೂಚಕವಾಗಿ ಮುತ್ತೈದೆ ಹೆಣ್ಣು ಮಕ್ಕಳು ಅಪರಿಮಿತ ಸಂಖ್ಯೆಯಲ್ಲಿ ಇಕ್ಕಲುಗಳಲ್ಲಿ ಆರತಿಗಳನ್ನು ಹಿಡಿದು ಸಡಗರದಿಂದ ಎದುರುಗೊಳ್ಳುತ್ತಿರುವುದನ್ನು ನೋಡುವುದು ಮನಸ್ಸಿಗೆ ಆನಂದವನ್ನು ಉಂಟು ಮಾಡುತ್ತದೆ. ಅನೇಕ ಭಕ್ತಾಧಿಗಳು ದಿಂಡು ಉರುಳುವ ಪದ್ಧತಿ ಇದೆ.

ಗೌರಿದೇವಿಗಿಂತ ಮುಂದೆ ಮಠದಯ್ಯನವರು ಬರುತ್ತಾರೆ. ಮಠದಯ್ಯನವರೆಂದರೆ ಗುರುವು. ಗುರುವಿನ ಮಾರ್ಗದರ್ಶನವೇ ಹರನನ್ನು ಕಾಣುವುದಕ್ಕೆ ದಾರಿದೀಪ ಎಂಬ ಅರ್ಥವನ್ನು ಇದರಿಂದ ನಾವು ತಿಳಿಯಬಹುದು. ಗುರುವಿಲ್ಲದೆ ಹರನಿಲ್ಲ ಎಂಬ ಸತ್ಯ ತಿಳಿದುಬರುತ್ತದೆ. ಮಾನವನು ಗುರುವಿನಿಂದಲೇ ಮುಕ್ತಿ ಮಾರ್ಗವನ್ನು ಪಡೆಯುತ್ತಾನೆ. ಈ ದಿನ ನಾವು ಗುರುವಿನ ದಯದಿಂದ ಗುರುವಿನ ಮಾರ್ಗದರ್ಶನದಿಂದ ಸಾಗಿ ಗೌರಿದೇವಿಯನ್ನು ನಮ್ಮ ಗ್ರಾಮಕ್ಕೆ ಕರೆ ತಂದಿದ್ದೇವೆ. ಇದೆಲ್ಲದಕ್ಕೂ ಮೂಲ ಗುರು ಎಂಬುದನ್ನು ಅರಿಯಬಹುದು. ಗೌರಿದೇವಿಯು ಬರುವಾಗ ಗ್ರಾಮದ ಹೆಣ್ಣು ಮಕ್ಕಳು ಸೋಬಾನೆ ಪದಗಳನ್ನು ಹಾಡುತ್ತಾರೆ. ಗೌರಿಯ ಜೊತೆಯಲ್ಲಿ ಬರುವ ಪದ್ಧತಿ ಹಿಂದಿನಿಂದಲೂ ನಡೆದುಬಂದಿದೆ. ಕರಡಿ ವಾದ್ಯ, ನಂದಿಧ್ವಜ, ಓಲಗ ಮುಂತಾದ ಮಂಗಳವಾದ್ಯಗಳೊಂದಿಗೆ ಗೌರಿದೇವಿಯನ್ನು ಸ್ವಾಗತಿಸುತ್ತಾರೆ.

ದೇವಿಯ ಜಾತ್ರೆಯ ಸಮಯದಲ್ಲಿ ಕೋಲಾಟ ನಾಟಕಗಳು, ಮನರಂಜನೆ ಕಾರ್ಯಕ್ರಮಗಳು ನಡೆಯುತ್ತವೆ.

೨.೨ ಜನಪದರ ಕಥೆಯಲ್ಲಿ ಗೌರಿಯ ಹಿನ್ನೆಲೆ

ಜನಪದ ಕಥೆಯಲ್ಲಿ ಗೌರಿಯ ಕುಟುಂಬ ಭಿನ್ನವಾಗಿದೆ. ಕುಟುಂಬದವರ ವಾಹನ, ಸಿಂಹ, ನಂದಿ, ಹಾವು, ನವಿಲು, ಇಲಿ, ಹೀಗೆ ಪರಸ್ಪರ ಶತ್ರುಗಳಾದರೂ ಸೌಹಾರ್ದತೆಯಿದೆ. ಶಿವ, ಗಣಪ, ಷಣ್ಮುಖರ ನಡುವಿನ ಸಂಬಂಧ ಗಟ್ಟಿಗೊಳಿಸುವಲ್ಲಿ ಗೌರಿ ತೋರುವ ಚತುರತೆ ಅನುಕರಣೀಯವಾಗಿದೆ.

ಪುರಾಣ ಮೂಲದ ಪ್ರಕಾರ "ಗೌರಿಯ ತನ್ನ ಸುಪ್ರಶಕ್ತಿಯನ್ನು ಪ್ರಕಟಿಸಿದ ಪ್ರಸಂಗವೊಂದಿದೆ. ರಾವಣನು ಆತ್ಮಲಿಂಗವನ್ನು ಬೇಡಿ ಶಿವನನ್ನು ಕುರಿತು ತಪಸ್ಸು ಮಾಡುವ ನಾರದನ ಕುಟಿಲತೆಯ ಪ್ರಭಾವದಿಂದ ಗೌರಿಯನ್ನು ತನ್ನಗೆ ಕೊಡೆಂದು ಕೇಳುವನು. ಶಿವ, ಮೊದಲೇ ಕೇಳಿದ್ದನ್ನು ಕೊಡುವ ಗೌರಿಯನ್ನು ರಾವಣನ ಜೊತೆ ಹೊಗೆಂದು ಹೇಳುವನು. ಗಂಡನ ಮರ್ಯಾದೆ ಕಾಪಾಡಲು ಗೌರಿಯು ರಾವಣನ ಜೊತೆ ಹೋಗುವಳು. ಆಗ ಗೌರಿ ತನ್ನ ಸುಪ್ರಶಕ್ತಿ ಪ್ರಕಟಿಸಿ ನೀಲಿ ಬಣ್ಣದ ದೇಹ ದೊಡ್ಡ ರುಂಡ ಹೊಂದಿ ಕಾಳಿಯ ರೂಪ ತಾಳಿ ರಾವಣನಿಗೆ ಗಾಬರಿ ಹುಟ್ಟಿಸುವಳು. ಪುರುಷ ಪ್ರಧಾನ್ಯತೆಯನ್ನು ಒಪ್ಪಿಕೊಳ್ಳುತ್ತಲೇ ವಿಶ್ವವೆಲ್ಲ ಸ್ತ್ರೀ ಸೃಷ್ಟಿ ನಿಯಮವಾದುದೆಂಬುದನ್ನು ತನ್ನ ಆಗಾಧ ರೂಪದಿಂದ ತೋರಿಸಿಕೊಟ್ಟಳು.

ಅಸಹಾಯಕಳಾದ ಗೌರಿಯ ಸ್ವಯಂರಕ್ಷಣೆಯ ತಂತ್ರಗಾರಿಕೆ ಮೃದುತನದ ಹೆಣ್ಣೆ ಕಠಿಣ ಹೃದಯಿಯಾಗುವುದು. ಗಂಡ ಮರ್ಯಾದೆ ಕಾಪಾಡುವ ನೆಪದಲ್ಲಿ ತನ್ನತನವನ್ನು ಉಳಿಸಿಕೊಳ್ಳುವ ಆತ್ಮಸ್ಥೈರ್ಯ ಇವೆಲ್ಲವೂ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಸಬಲೆಯಾಗಿಸಿದ ಘಟನೆಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರವಲ್ಲದೇ ನಗರಗಳಲ್ಲಿ ಗೌರಿ ಗಣೇಶನ ಹಬ್ಬದ ಆಚರಣೆ ಸಮೃದ್ಧಿ ಮತ್ತು ನೆಲ ಜಲತತ್ವಗಳ ಸಮನ್ವಯತೆ ಸಂಕೇತವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಮಳೆಗಾಲದ ತುಂಬೆಲ್ಲ ಹೊಲದಲ್ಲಿ ಪೈರು ಮೊಳೆತು ಬೆಳೆ ಬಿಡುವುದರ ಆರಂಭದ ಕಾಲ ಜನಪದರ ದೃಷ್ಟಿಯಲ್ಲಿ ಗೌರಿ ಜಲತತ್ವದ ಸಂಕೇತವಾಗಿ, ಹೆಣ್ತನದ ಫಲವಂತಿಕೆಯ ಮಾತೃದೇವತೆಯಾಗಿ, ಜಲಸಂಸ್ಕೃತಿ ಕೃಷಿಯಾಗಿ ಆಧರಿಸಿದ ಸಂಸ್ಕೃತಿಯಾಗಿ ಜನಪದರ ದೃಷ್ಟಿಯಲ್ಲಿ ಕಂಡುಬರುತ್ತಾಳೆ.

ಕೃಷಿ ಆಚರಣೆಗಳು ಹೆಚ್ಚಾಗಿ ಫಲವಂತಿಕೆಯ ಆಚರಣೆಗಳಾಗಿವೆ. ಫಲವಂತಿಕೆ ಆರಾಧನೆಯಲ್ಲಿಯ ಪ್ರಮುಖ ತತ್ವವೆಂದರೆ ಹೆಣ್ಣಿನ ಫಲವಂತಿಕೆಯೊಂದಿಗೆ ಪ್ರಕೃತಿಯ ಫಲವಂತಿಕೆಯನ್ನು ಸಮೀಕರಣ ಗೊಳಿಸುವಂತಹದ್ದಾಗಿದೆ.

೨.೩ ಗೌರಿ ಜಾತ್ರೆ (ಸ್ವರ್ಣಗೌರಿ)

ಗೌರಿಹಬ್ಬವನ್ನು ಗಣೇಶ ಚತುರ್ಥಿಯ ಮುನ್ನ ದಿನ ಶ್ರಾವಣ ಮಾಸದಲ್ಲಿ ಆಚರಿಸುತ್ತಾರೆ. ಅಂದು ಗೌರಿಯು ಮಣ್ಣಿನಿಂದ ತಯಾರಿಸಿದ ಮೂರ್ತಿ ರೂಪದಲ್ಲಿ ಪೂಜಿಸಲ್ಪಡುತ್ತಾಳೆ. ಗೌರಿಯ ಜೊತೆ ಗಣಪ ಇಂತಿಷ್ಟ ದಿನವೆಂದು ಪೂಜಿಸಲ್ಪಡುತ್ತಾನೆ ಅಂತಿಮವಾಗಿ ಗೌರಿಗೆ ಬುತ್ತಿಕಟ್ಟಿ ಉಡಿ ತುಂಬಿ ಗಣಪನೊಂದಿಗೆ ನೀರಿನಲ್ಲಿ ವಿಸರ್ಜಿಸುತ್ತಾರೆ ಅಂದು ತವರಿನಿಂದ ಹೆಣ್ಣು ಮಕ್ಕಳು ಮುತ್ತೈದೆಯರು ಧಾನ್ಯರೂಪದ ಬಾಗಿನ ಪಡೆಯುತ್ತಾರೆ. ಬಾಗಿನದ ಮೂಲಕ ಧಾನ್ಯಗಳ ವಿನಿಮಯವಾಗುವುದಲ್ಲದೆ ಕುಟುಂಬಗಳ ನಡುವಿನ ಸಾಮರ್ಥ್ಯ ಬೆಳೆಯಲು ಸಹಾಯಕವಾಗುವುದು ಧಾನ್ಯರೂಪವಾಗಿ ಬಾಗಿನ ನೀಡುವಿಕೆ ಗೌರಿ ಕೃಷಿಕರ ಮಗಳೆಂಬುದರ ಸಂಕೇತವಾಗಿದೆ. ಇತ್ತೀಚಿಗೆ ವಸ್ತುರೂಪದ ಬಾಗಿನ ನೀಡಿರುವುದನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡಿದ್ದೇನೆ.

ಬಾಗಿನದ ಪ್ರತಿಯೊಂದು ವಸ್ತುವು ಗೌರಿಯ ಪ್ರತೀಕವೆಂಬ ನಂಬಿಕೆಯಿದೆ. ಬಾಗಿನದಲ್ಲಿಯ ವಸ್ತುಗಳ ಬಳಕೆಯೊಂದಿಗೆ ಗೌರಿ ಸ್ವರೂಪದ ಗುಣಗಳನ್ನು ಅರ್ಥೈಸಿಕೊಂಡು ಅನುಸರಿಸುವುದು ಇದರ ಆಶಯವಾಗಿದೆ.

ಗೌರಿಯನ್ನು ಬೀಳ್ಕೊಡುವಾಗ ಶುಭದಿನ ನೋಡಿ ಉಡಿ ತುಂಬಿ ಮೊಸರನ್ನದ ಬುತ್ತಿ ಕಟ್ಟಿ ಕಳುಹಿಸುವರು ಆಹಾರ ಮೂಲವಾದ ಅಕ್ಕಿಗೆ ಜನಪದರ ಆಚರಣೆಯಲ್ಲಿ ಪ್ರಮುಖ ಸ್ಥಾನವಿದೆ.

ಮೊಸರು ಹೈನುಗಾರಿಕೆಯ ಸಮೃದ್ಧಿಯನ್ನು ಸೂಚಿಸುತ್ತದೆ. ದೈವೀರೂಪದ ಗೌರಿಯನ್ನು ಜನಪದರ ತಮ್ಮ ಮನೆಮಗಳೆಂದು ಭಾವಿಸುತ್ತಾರೆ. ಮಗಳ ಹೊಟ್ಟೆ ತಣ್ಣಗಿರಲೆಂದು ಆಶಯದಿಂದ ಮೊಸರನ್ನದ ಬುತ್ತಿ ಕಟ್ಟುತ್ತಾರೆ. ಗೌರಿ ಮಣ್ಣಿನ ಮಗಳು ಕೃಷಿಕರಿಗೆ ಹತ್ತಿರವಳೆಂಬ ಭಾವನೆಯಿಂಧ ಗೌರಿಯನ್ನು ಮಣ್ಣಿನಿಂದ ಮಾಡಿ ನೀರಿಗೆ ಬಿಡುತ್ತಾರೆ. ಇದು ನೆಲ ಹಾಗೂ ಜಲತತ್ವಗಳ ಸಮನ್ವಯತೆಯಾಗಿದೆ. ಗಂಗೆ ಗೌರಿಯರಿಬ್ಬರು ಶಿವನ ಪತ್ನಿಯರು ಅವರಲ್ಲಿ ಸವತಿ ಮಹತ್ತರವಿರುವುದು ಸಹಜ. ಆದರೆ ಆಚರಣೆಯಲ್ಲಿ ಅವರನ್ನು ಒಂದು ಗೂಡಿಸುವ ಮೂಲಕ ಇಬ್ಬರಿಗೂ ಪ್ರಧಾನ್ಯತೆ ನೀಡಿದ್ದಾರೆ. ಹೆಚ್ಚಾಗಿ ಕಳಶದಲ್ಲಿ ನೀರು ತುಂಬಿ ಅದಕ್ಕೆ ಅವಾಹಿಸಿಕೊಂಡು ಗೌರಿ ಪೂಜೆ ಮಾಡುವ ಸಂಪ್ರದಾಯವಿದೆ.

ಮಲೆನಾಡ ಕಡೆ ಗೌರಿಹಬ್ಬದಲ್ಲಿ ವಿಶೇಷವಾಗಿ ನಡೆಯುವ ನೀರಿನ ಪೂಜೆ ಇದಕ್ಕೊಂದು ಉದಾಹರಣೆ ಹಬ್ಬದ ದಿನ ಮುತ್ತೈದೆಯರು ಬಾವಿಗೆ ಹೋಗಿ ಪೂಜಿಸಿ ಎಡೆ ಇಟ್ಟು

ನಂತರ ಆ ಎಡೆಯನ್ನು ನೀರಿಗೆ ತೇಲಿ ಬಿಡುವುದು ನೀರು ಮತ್ತು ಜೀವಿಗಳು ಸಂಬಂಧವನ್ನು ಸಂಕೇತಿಸುತ್ತದೆ.

ಈ ರೀತಿಯ ಆಚರಣೆಗಳು ಗೌರಿಯು ಜಲದೇವತೆಯೇಂಬುದನ್ನು ಸಮರ್ಥಿಸುತ್ತಾರೆ ಮಣ್ಣಿನ ಮಗನಾದ ಗಣಪನೊಂದಿಗೆ ಜಲದೇವತೆಯಾದ ಗೌರಿಯು ಪೂಜಿಸಲ್ಪಡುತ್ತಾರೆ. ಗೌರಿ ಮತ್ತು ಗಣಪನ ಆರಾಧನೆಯ ಹಿನ್ನಲೆಯನ್ನು ಅವಲೋಕಿಸಿದಾಗ ಹಲವು ಸತ್ಯ ಸಂಗತಿಗಳು ತಿಳಿಯುತ್ತವೆ. ಶಿವನ ಪಾರ್ವತಿಯನ್ನು ಹೆಂಡತಿಯನ್ನಾಗಿಸಿಕೊಂಡದ್ದು ಪಿತೃ ಪ್ರಧಾನ ಮೂಲದಿಂದ ಸ್ತ್ರೀ ಸೃಷ್ಟಿ ಸಾಮರ್ಥ್ಯದ ಸಂಕೇತ ಆದರೆ ಗಣಪನ ಹುಟ್ಟಿನಲ್ಲಿ ಪುರುಷನ ಅಸ್ತಿತ್ವ ಇಲ್ಲವಾಗಿರುವುದು ಗಮನಾರ್ಹ ಸಂಗತಿ, ರೂಪ ಭಗ್ನತೆಯ ಕಾರಣದಿಂದ ಗಣಪನ ಹುಟ್ಟನ್ನು ಬಹಿಷ್ಕರಿಸುವ ಪ್ರಧಾನ ಸಂಸ್ಕೃತಿ ಒಂದೆಡೆ ಮತ್ತೊಂದೆಡೆ ಪ್ರಕೃತಿ ಗುಡ್ಡ ಬೆಟ್ಟ, ಪ್ರಾಣಿಗಳಲ್ಲಿ ದೈವತ್ವ ಕಾಣುವ ಜನಪದರು ಗಣಪವನ್ನು ಪ್ರಕೃತಿ ಸಂಕೇತವಾಗಿ ಸ್ವೀಕರಿಸಿದ್ದಾರೆ.

ಜನದಪರಿಗೆ ಸುಂದರವಾದದ್ದು ಎಂದರೆ ಬದುಕಿಗೆ ಹತ್ತಿರವಾಗಿರುವುದೇ ಹೊರತು ಬಾಹ್ಯರೂಪದ ಲಕ್ಷಣವಲ್ಲ. ಬೀಜ ಸಹಾಯವಿಲ್ಲದೆ ಜೀವ ಸೃಷ್ಟಿ ಸಾಧ್ಯತೆವೇಂಬುದನ್ನು ಲೋಕಕ್ಕೆ ಸಾರಿ ಹೇಳುವ ಗೌರಿಯ ದಿಟ್ಟತನವನ್ನು ಜನಪದರು ಸ್ವಾಗತಿಸಿದ್ದಾರೆ. ಜನಪದರ ದೃಷ್ಟಿಯಲ್ಲಿ ಆಕೆ ಸೃಷ್ಟಿಕರ್ತೆ, ಶಕ್ತಿಯ ಸಂಕೇತ ಹಾಗಾಗಿ ಜನಪದರ ಆರಾಧನೆಗೆ ಗೌರಿದೇವಿ ಭಾಜನಳಾಗಿದ್ದಾಳೆ.

"ಗಣಪ ಭೂಮಿ ಮತ್ತು ಪ್ರಕೃತಿಯನ್ನು ಪ್ರತಿನಿಧಿಸಿದರೆ ಗೌರಿಯು ಜಲದ ಪ್ರತೀಕ ಕೆರೆ ಬಾವಿಯಲ್ಲಿ ಗಂಗೆ ಪೂಜೆ ಮಾಡುವಾಗ ನೀರೊಳಗಿನ ಒಂದು ಹಿಡಿ ಮರಳನ್ನು ತಂದು ಮರಳು ಗೌರಮ್ಮನೆಂದು ಪೂಜಿಸುತ್ತಾರೆ. ಆನಪದರ ದೃಷ್ಟಿಯಲ್ಲಿ ಮಣ್ಣು ಅವರಿಗೆ ಕಂಡುಬರುತ್ತದೆ. ಅರಿಶಿಣದ ಪ್ರತಿಯಿಂದ ಮಾಡಿದ ಮೂರ್ತಿಯೊಂದಿಗೆ ಒನಕೆ, ಒರಳು ಬೀಸುವ ಕಲ್ಲು ಒಲೆಯನ್ನು ಗೌರಿಯೆಂದು ಪೂಜಿಸುತ್ತಾರೆ. ವಾಸ್ತವವಾಗಿ ಧಾನ್ಯದೇವತೆಯಾದ ಗಣಪನಿಗೆ ಜಲದೇವತೆಯಾದ ಗೌರಿಯು ತಾಯಿಯಾಗಿರುವಳು.ಜನಪದರ ನಂಬಿಕೆಯ ಪ್ರಕಾರ ತವರುಮನೆಗೆ ಬರುವ ಗೌರಿಯನ್ನು ಜನಪದರ ಹಿನ್ನಲೆಯನ್ನು ತಿಳಿಸಿದ್ದಾರೆ."[೩]

೨.೪ ಗೌರಿದೇವಿ ಜಾತ್ರೆಯ ಚಾರಿತ್ರಿಕ ಹಿನ್ನೆಲೆ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಪೂರ್ವದಲ್ಲಿ ಬರುವ ದೊಡ್ಡುಳ್ಳಾರ್ತಿಯು ಬಯಲುಸೀಮೆಯಾಗಿದ್ದು, ಇಲ್ಲಿಯ ಜನರು ಮಳೆಯನ್ನೇ ನಂಬಿ ಜೀವನವನ್ನು ಸಾಗಿಸುತ್ತಾರೆ. ಇವರು ಗೌರಿದೇವಿಯ ಜಾತ್ರೆಯು ಆಚರಣೆಯಲ್ಲಿ ಯಾವುದೇ ಜಾತಿ ಮತಗಳ ಬೇಧ ಭಾವಗಳಿಲ್ಲದೆ, ಒಗ್ಗೂಡಿ ಭಾವೈಕ್ಯತೆಯಿಂದ ಜಾತ್ರೆಯನ್ನು ಆಚರಿಸುತ್ತಾರೆ. ಈ ದೇವತೆಯ

ಮೂಲ ಸ್ಥಾನ ಹಿರಿಯೂರು ತಾಲ್ಲೂಕಿನ ತಾವಂದಿ ಗ್ರಾಮದಿಂದ ಒಂದು ದೊಡ್ಡ ಉಳ್ಳಾರ್ತಿ ಎಂಬ ಗ್ರಾಮದಲ್ಲಿ ನೆಲೆಸಿ ಪ್ರಸಿದ್ಧಿ ಪಡೆದಿದ್ದಾಳೆ ಎಂದು ಹೇಳುತ್ತಾರೆ.

ಗೌರಿದೇವಿಯ ಕುರಿತು ಅನೇಕ ಸೋಬಾನೆ ಪದಗಳು ಜನಪದ ಗೀತೆಯನ್ನು ಹಾಡಿಸುವುದು ಜನಪದರಲ್ಲಿ ಕಂಡುಬರುತ್ತವೆ.

ದೊಡ್ಡ ಉಳ್ಳಾರ್ತಿ ಗೌರಿದೇವಿಯ ಜಾತ್ರೆ ವರ್ಷಕೊಮ್ಮೆ ನಡೆಯುತ್ತದೆ. ಈ ಜಾತ್ರೆ ಮೂರು ದಿನಗಳ ಕಾಲ ಅತ್ಯಂತ ವಿಜೃಂಬಣೆಯಿಂದ ನಡೆಯುವಂತಹ ವಿಶೇಷ ಜಾತ್ರೆಯಾಗಿದೆ. ಈ ಜಾತ್ರೆಯಲ್ಲಿ ಪ್ರಮುಖವಾಗಿ ಮೊದಲಿಗೆ ಕಳಸ ಸ್ಥಾಪನೆ ಮಾಡಿ, ಮತ್ತು ಮೊದಲನೆಯ ದಿನದಲ್ಲಿ ಗೌರಿದೇವಿಯನ್ನು ಗುಡಿ ತುಂಬುತ್ತಾರೆ. ಅಂದರೆ ಗೌರಿದೇವಿಯು ಬರುವಾಗ ಮುತ್ತೈದೆಯರು ಆರತಿಯನ್ನು ಹಿಡಿದು ಸ್ವಾಗತಿಸುವುದು. ದಿಂಡುಉರುಳುವುದು ಮುಂತಾದ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ಜನಪದರು ಗೌರಿದೇವಿಯನ್ನು ಗುಡಿ ತುಂಬುತ್ತಾರೆ.

ಎರಡನೇ ದಿನದಂದು ವಿಶಿಷ್ಟ ಪೂಜೆಗಳನ್ನು ಸಲ್ಲಿಸುತ್ತಾರೆ. ಗೌರಿದೇವಿಗೆ ಹಲವಾರು ಹರಕೆಗಳನ್ನು ಕಟ್ಟಿಕೊಂಡಿರುತ್ತಾರೆ. ಅವುಗಳಲ್ಲಿ ಎಲ್ಲಿಯೂ ಸಹ ಈ ಜಾತ್ರೆಯಲ್ಲಿ ತೀರಿಸುತ್ತಾರೆ. ನಂತರ ಮೂರನೇಯ ದಿನವೂ ಗೌರಿದೇವಿಯ ವೈಭವದ ಮೆರವಣಿಗೆ ದಿಂಡುರುಳು ಆರತಿ ಸೇವೆಯೊಂದಿಗೆ ಕೆರೆಯಲ್ಲಿ ವಿಸರ್ಜಿಸುತ್ತಾರೆ.

ಒಟ್ಟಾರೆಯಾಗಿ ಗೌರಿದೇವಿಯ ಜಾತ್ರೆಯು ಅದ್ದೂರಿಯಾಗಿ ನಡೆಯುತ್ತದೆ. ಈ ಜಾತ್ರೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ಸಂಕೇತವಾಗಿ ಎಲ್ಲಾ ಸಮುದಾಯದವರು ತಮ್ಮ ತಮ್ಮ ಪಾಲಿನ ಎಲ್ಲಾ ಕೆಲಸ ಕಾರ್ಯಗಳನ್ನು ಜಾತ್ರೆಯಲ್ಲಿ ಮಾಡುತ್ತಾರೆ. ಪ್ರತಿ ವರ್ಷವೂ ಕಾರ್ತೀಕ ಶುದ್ದ ಪೌರ್ಣಿಮೆಯ ದಿನದಂದು ಐದು ದಿನಗಳ ಕಾಲ ಗೌರಿಯನ್ನು ಕರೆತಂದು ಪೂಜಿಸಿ ಆರಾಧಿಸುವ ಕಾರ್ಯಕ್ರಮವೂ ನಡೆಯುತ್ತದೆ ಎಂದು ಹೇಳಬಹುದು.

೨.೫ ಭೌಗೋಳಿಕ ಹಿನ್ನೆಲೆ

ಅತೀ ಪ್ರಾಚೀನ ನಿವೇಶನ ಮತ್ತು ಚರಿತ್ರೆ ಹೊಂದಿದ ಜಿಲ್ಲೆ ಚಿತ್ರದುರ್ಗ ಮಧ್ಯಕರ್ನಾಟಕದಲ್ಲಿ ಇರುವ ಚಿತ್ರದುರ್ಗ ಉತ್ತರ ಕರ್ನಾಟಕ ದಕ್ಷಣ ಕರ್ನಾಟಕಕ್ಕೆ ರಾಯಭಾರಿಯಂತಿದೆ ಆಂಗ್ಲರ ಕಾಲದಲ್ಲಿ ಬೆಟ್ಟಲ್, ಥ್ರೊಗ್ ಎಂದು ಹೆಸರಿದೆ. ಅದಕ್ಕೂ ಹಿಂದೆ ಚಿತ್ರದುರ್ಗ ಚಿತ್ರಾರಕಲುದುರ್ಗ ಸಿದ್ಧರ ಕಲ್ಲು ಚಿತ್ತಮೆಲ್ಲೈ ಗುಡ್ಡ ಎಂದು ಕರೆಯುತ್ತಾರೆ. ಈ ಚಿತ್ರದುರ್ಗ ಜಿಲ್ಲೆಯಲ್ಲಿ ಚಳ್ಳಕೆರೆ ತಾಲೂಕಿನ ದೊಡ್ಡ ಉಳ್ಳಾರ್ತಿಯು ಸಹ ಗೌರಿದೇವಿಯ ಜಾತ್ರೆಗೆ ಪ್ರಸಿದ್ಧಿಯನ್ನು ಹೊಂದಿರುವಂತಹ ಒಂದು ಸ್ಥಳವಾಗಿದೆ.

ಚಿತ್ರದುರ್ಗ ಜಿಲ್ಲೆ ಕೇಂದ್ರದಿಂದ ಚಳ್ಳಕೆರೆ ತಾಲ್ಲೂಕಿನ ಪೂರ್ವದಲ್ಲಿ ೧೪ ಕಿ.ಮೀ. ಈಶಾನ್ಯ ಮಾಲೆಯಲ್ಲಿ ದೊಡ್ಡ ಉಳ್ಳಾರ್ತಿ ಗ್ರಾಮವಿದೆ. ಈ ಗ್ರಾಮಕ್ಕೆ ಸಮೀಪದಲ್ಲಿಯೇ ಜನವಸತಿ ಇಲ್ಲದ ಚಿಕ್ಕ ಉಳ್ಳಾರ್ತಿ ಎಂಬ ಮತ್ತೊಂದು ಗ್ರಾಮವಿದೆ. ಈಗ ದೊಡ್ಡ ಉಳ್ಳಾರ್ತಿ ಎಂದು ಕರೆಸಿಕೊಳ್ಳುತ್ತಿರುವ ಗ್ರಾಮಕ್ಕೆ ಮೊದಲು ಉಳ್ಳಾರತಿ ಎಂಬ ಹೆಸರಷ್ಟೇ ಇದ್ದಿರಬೇಕು. ಈಗಿರುವ ಚಿಕ್ಕ ಉಳ್ಳಾರತಿ ಜಾಗದ ಬಳಿ ಕೆಲವು ಜನ ಒಂದು ವಾಸಿಸಲು ಪ್ರಾರಂಭಿಸಿದ್ದರಿಂದ ಮೊದಲಿನ ಉಳ್ಳಾರತಿಯನ್ನು ಗುರುತಿಸಲು ದೊಡ್ಡ ಎಂಬ ವಿಶೇಷಣ ಅದರ ಹಿಂದೆ ಸೇರಿಕೊಂಡಿರಬೇಕು. ಈ ಊರು ಈ ಹೆಸರುಗಳಿಸಲು ಕಾರಣ ಇಲ್ಲಿ ನೆಲೆಸಿರುವ ಗೌರಿದೇವಿ ಈಕೆಗೆ ಉರುಳು ಮತ್ತು ಆರತಿ ಸೇರಿ ಉರುಳಾರತಿಯಾಗಿದೆ. ಉರುಳು ಆಡು ನುಡಿಯಲ್ಲಿ ಉಳ್ಳು ಆಗಿ ಆರತಿಯೊಂದಿಗೆ ಸೇರಿದಾಗ ಉಳ್ಳು+ಆರತಿ ಉಳ್ಳಾರತಿಯಾಗಿದೆ. ಇದು ಮತ್ತೆ ಸಂಕೀರ್ಣಗೊಂಡು ಉಳ್ಳಾರ್ತಿ ಎಂದೂ ಕರೆಸಿಕೊಳ್ಳುತ್ತದೆ.

ಗೌರಿದೇವಿ ಗ್ರಾಮಕ್ಕೆ ನುಡಿಯಲ್ಲಿ ಗೌರಮ್ಮಳಾಗಿದ್ದಾಳೆ. ಶಕ್ತಿಯ ಅವತಾರವಾದ ಈಕೆಯದು. ಇಲ್ಲಿ ಪ್ರಸನ್ನ ಸೌಮ್ಯ ರೂಪ ಪರಮೇಶ್ವರನ ಹೆಂಡತಿ ಪಾರ್ವತಿಯ ಈ ಕತೆ ಕುತೂಹಲಕರ ಆಚರಣೆಗಳಿಂದ ಕೂಡಿದೆ.

ಜನಪದರ ಜೀವನಕ್ಕೂ ಜಾತ್ರೆಗೂ ಇರುವ ಸಂಬಂಧವನ್ನು ಅವರಲ್ಲಿರುವ ಧಾರ್ಮಿಕ ಶ್ರದ್ಧೆಯನ್ನು ಜಾತ್ರೆ ಎಂಬ ಪದವು ಒಳಗೊಂಡಿದೆ.

೧) ಸಾಂಸ್ಕೃತಿಕ ಕಾರ್ಯಕ್ರಮಗಳು

a. ಪ್ರದರ್ಶನ ಕಲೆಗಳು

- ಭಜನೆಗಳು
- ಕೋಲಾಟ ಪ್ರದರ್ಶನ
- ಹಲಗೆ ಮೇಳ
- ನಂದಿಕೋಲು ಕುಣಿತ

b. ನಾಟಕಗಳ ಪ್ರದರ್ಶನಗಳು

- ಕ್ರೀಡೆಗಳ ಪ್ರದರ್ಶನಗಳು
- ಸಾಹಿತ್ಯ
- ಹೆಜ್ಜೆ ವೇಷ

ಬಯಲಾಟ (ಯಕ್ಷಗಾನ ನಾಟಕ): ಜಾತ್ರೆಯ ಆಚರಣೆಗಳಲ್ಲಿ ಗ್ರಾಮ, ನಗರಗಳಲ್ಲಿ ನಾಟಕ ಪ್ರದರ್ಶನದ ಉತ್ಸಾಹವಿರುತ್ತದೆ. ಸಮುದಾಯಗಳು ತಮ್ಮ ದೇವತೆಗಳ ಜಾತ್ರೆಯ ಉತ್ಸವ ಸಂದರ್ಭದಲ್ಲಿ ವಿರಾಮ ಸಂದರ್ಭದಲ್ಲಿ ಬಯಲಾಟ ನಾಟಕ ಪ್ರದರ್ಶನ ಮಾಡುತ್ತಾರೆ. ನಾಟಕ ವ್ಯವಸ್ಥೆಯ ಸಂಪೂರ್ಣ ಒಂದು ಗ್ರಾಮದ ವ್ಯಕ್ತಿಗಳಿಂದ ಅದರಲ್ಲಿ ರಾಮಾಯಣ, ಮಹಾಭಾರತಗಳಿಂದ ಆಯ್ದುಕೊಂಡ ಕಥೆಗಳು, ಪ್ರಸಂಗಗಳು ನಾಟಕದ ವಸ್ತುಗಳಾಗಿರುತ್ತವೆ. ಜಾತ್ರೆಯ ಆಚರಣೆಯಲ್ಲಿ ದ್ರೌಪದಿಯ ಸ್ವಯಂವರ, ಅಭಿಮನ್ಯು ಕಾಳಗ, ಕರ್ಣ ಅರ್ಜುನ ಕಾಳಗ, ಗಜಗೌರಿ ವಧೆ, ದುರ್ಯೋಧನನ ಗರ್ವಭಂಗ, ದುಶ್ಯಾಸನನ ವಧೆ, ಪಾಂಡವರ ವನವಾಸ, ಕುರುಕ್ಷೇತ್ರ, ರತಿ ಕಲ್ಯಾಣ, ಗಿರಿಜಾ ಕಲ್ಯಾಣ ಇನ್ನು ಮುಂತಾದ ನಾಟಕಗಳ ಪ್ರದರ್ಶನ ಹೊಂದಿರುವುದು ತಿಳಿಯಬಹುದು.

೨.೬ ಹಬ್ಬಗಳು

ಎಲ್ಲಾ ಹಬ್ಬಗಳಲ್ಲಿ ಜಾತ್ರೆ ನೆಡೆಯಬೇಕಾಗಿಲ್ಲ ಜಾತ್ರೆ ನಡೆದಾಗಲೇ ಹಬ್ಬದ ಸಂಭ್ರಮವಿದ್ದೇ ಇರುತ್ತದೆ. ಆದ್ದರಿಂದ ಹಬ್ಬ ಮತ್ತು ಜಾತ್ರೆಗಳ ಪರ್ಯಾಯ ಪದಗಳಲ್ಲಿ ಎಂಬುದನ್ನು ಮರೆಯಬಾರದು ಎಂದು ದೇ.ಜ.ಗೌ.ರವರು (೨೨-೧೪೫) ಹೇಳಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜನಪದರ ಕುರಿತು ಬರೆದಿರುವ ಮಹಾಪ್ರಬಂಧದಲ್ಲಿ ಡಾ.ಜಿ. ಈಶ್ವರಪ್ಪ ಅವರು ವ್ಯವಸಾಯ ಸಂಬಂಧಿ ಹಬ್ಬಗಳ ಕುರಿತು ಮಾಹಿತಿ ಕಲೆಹಾಕುತ್ತಾರೆ. (೮೭-೪೧೭) ಹತ್ತಾರು ಆಚರಣೆಗಳನ್ನು ಅವರು ವರ್ಷ ಪರ್ಯಂತ ಆಚರಿಸುತ್ತಿದ್ದರು. ನಿಗಧಿಯಾದ ದಿವಸದ ಆಚರಣೆಗಳು ಹಬ್ಬವಾಗಿ ಮಾರ್ಪಟ್ಟಿವೆ. ಜಿಲ್ಲೆಯಲ್ಲಿ ಅಂತಹ ನಿಗಧಿಯಾದ ೧೨ ಹಬ್ಬಗಳು ನಡೆಯುತ್ತಾವೆ.

೧. ಯುಗಾದಿ ಹಬ್ಬ

೨. ಬಸವನ ಹಬ್ಬ

೩. ಕಾರಹಬ್ಬ

೪. ನಾಗರ ಪಂಚಮಿ

೫. ಗೌರಿಹಬ್ಬ

೬. ಮಹಾನವಮಿ

೭. ಹಟ್ಟಿ ಹಬ್ಬ

೮. ಕಾರ್ತಿಕ

೯. ಶೂನ್ಯದ ಮಾರಮ್ಮನ ಹಬ್ಬ

೧೦. ಸಂಕ್ರಾಂತಿ ಹಬ್ಬ

೧೧. ಕಾಳವ್ವನ ಹಬ್ಬ

೧೨. ಶಿವರಾತ್ರಿ ಹಬ್ಬ

ಅಪ್ಪಟ ಜೀವನದೀಯವಾದ ವ್ಯವಸಾಯ ಸಂಬಂಧಿಯಾದ ರೊಟ್ಟಿ ಬಸಪ್ಪನ ಹಬ್ಬ, ಉಣ್ಣೆ, ಬಸ್ಸದಿಬ್ಬ ಹಟ್ಟಿ ಹಬ್ಬಗಳು ಮುಂತಾದವುಗಳು ನೆಡೆಯುತ್ತವೆ. ಇದಕ್ಕೆ ಸಾರ್ವತ್ರಿಕತೆ ಬಂದಿಲ್ಲದಿರುವುದುರಿಂದ ಇವು ದೊಡ್ಡ ಹಬ್ಬಗಳು ಎಂದು ಕರೆಯಿಸಿಕೊಳ್ಳದೆ ಪೂಜೆಗಳಾಗಿ, ಆಚರಣೆಗಳಾಗಿ ಮಾತ್ರ ಉಳಿದಿವೆ.

ಎಲ್ಲಾ ಹನ್ನೆರಡು ಹಬ್ಬಗಳು ಕೃಷಿಯ ವೇಳಾಪಟ್ಟಿಗೆ ಅನುಗುಣವಾಗಿ ಮತ್ತು ವ್ಯವಸಾಯಗಾರರ ಬದುಕಿನ ಹಿತವನ್ನು ಕಾಪಾಡುವ ಕಾಲಗಳಂತೆ ನಡೆಯುತ್ತವೆ. ಕಾಲಗಣನೆ ಸರಿಯಾಗಿ ಬಾ ದೇವರು ನಮ್ಮ ಬೆಳೆಯ ಬಿತ್ತು, ಆರೈಕೆ, ಮುಂತಾದವುಗಳನ್ನು ಹಬ್ಬಗಳಿಗೆ ಅನುಗುಣವಾಗಿ ಹೇಳುವುದನ್ನು ಈಗಲೂ ಕಾಣಬಹುದಾಗಿದೆ.

ವರುಷದ ಮೊದಲ ಬೇಸಾಯವನ್ನು ಉಗಾದಿಯೆಂದು ಆರಂಭಿಸಿದರೆ ಬೇಸಾಯಕ್ಕೆ ಬೇಕಾಗುವ ಎತ್ತುಗಳು ಪೂಜೆಯನ್ನು ಬಸವನ ಹಬ್ಬದಂದು ಮಾಡುತ್ತಾರೆ. ಬಿತ್ತನೆ ಬೀಜಗಳನ್ನು ಕಾರ ಹಬ್ಬದಲ್ಲಿ ಕಂಡು ಕೊಂಡು ಮಳೆಗಾಲದಲ್ಲಿ ಹರಿದಾಡುವ ಹಾವುಗಳ ಪೂಜೆ ಮತ್ತು ಬೆಳೆಯಿತ್ತಿರುವ ಬೆಳೆಗಳ ಸಂಭ್ರಮವನ್ನು ನಾಗರ ಪಂಚಮಿಯಲ್ಲಿ ಅನುಭವಿಸುತ್ತಾರೆ.

ಮಳೆ ತರುವ ಜೋಕುಮಾರನನ್ನು ಮತ್ತು ತಾಯಿ ಎಳೆ ಗೌರಿಯನ್ನು ಗೌರಿಹಬ್ಬದಲ್ಲಿ ಪೂಜಿಸಿದರೆ ಹೊಡೆ ಹೊಡೆದ ಬೆಳೆಗಳ ವಿಜಯವನ್ನು ಮನ್ಮೊಮಿಯಲ್ಲಿ ಕಂಡುಕೊಳ್ಳುತ್ತಾರೆ.

ಕೊನೆಯಲ್ಲಿ ನಡೆಸುವ ಸಂದರ್ಭದಲ್ಲಿ ಹಟ್ಟಿ ಹಬ್ಬದಲ್ಲಿ ಪೂಜಿಸಿದರೆ ದವಸ ಧಾನ್ಯಗಳು ಮನೆಗೆ ಬಂದ ಸಂದರ್ಭದಲ್ಲಿ ದೀಪಹಚ್ಚಿಡುವುದರ ಮೂಲಕ ಕಾರ್ತಿಕ ಆಚರಿಸುತ್ತಾರೆ. ಮಾಘ ಮಾಸದಲ್ಲಿ ಎಲೆಗಳೆಲ್ಲ ಉದುರುತ್ತಿದ್ದರೆ. ಅದು ಶೂನ್ಯಮಾಸವೆಂದು ಭೂಮಿತಾಯಿಗೆ ಪುನಃ ಫಲವಂತಿಕೆ ಬರಲೆಂದು ಚರಗದ ಜಾತ್ರೆಗಳನ್ನು ಮಾಡಿ ಕೋಣ, ಆಡು, ಕುರಿ, ಕೋಳಿ ಮುಂತಾದ ಪ್ರಾಣಿಗಳನ್ನು ಬಲಿಕೊಡುತ್ತಾರೆ. ಸಂಕ್ರಾಂತಿಯಂದು ದನಕರುಗಳಿಗೆ ರೋಗಬರುವ ಕಾಲವಾದುದರಿಂದ ಅವುಗಳಿಗೆ ಸ್ನಾನ ಮಾಡಿಸಿ ಬರೆ ಹಾಕುತ್ತಾರೆ. ಊರು ಸುತ್ತಿಸುತ್ತಾರೆ. ಮುಂದಿನ ಹಂಗಾಮಿಗೆ ಬೇಕಾಗುವ ಬಿತ್ತಾನೆ ಬೀಜಗಳ ಆಯ್ಕೆಯನ್ನು ಕಾಳಮ್ಮನ ಹಬ್ಬದಲ್ಲಿ ಮಾಡಿಕೊಂಡು ಬಿಡುವಿನ ಹಂಗಾಮಿನ ಶಿವರಾತ್ರಿಯಲ್ಲಿ ದೇವರ ಭಜನೆ ಮಾಡಿ ಪುರಾಣ ಶ್ರವಣದೊಂದಿಗೆ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುತ್ತಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಗಳು ಮತ್ತು ಜಾತ್ರೆಗಳು ಒಟ್ಟೊಟ್ಟಿಗೆ ನಡೆಯುತ್ತವೆ. ಹಬ್ಬ ಮತ್ತು ಜಾತ್ರೆಯನ್ನು ಬೇರೆ ಬೇರೆಯೆಂದು ಪರಿಗಣಿಸುವುದು ಕಷ್ಟ ಎಂದು ಎಂ.ಜಿ.ಈಶ್ವರಪ್ಪ ರವರು ತಿಳಿಸಿದ್ದಾರೆ.

ಹಬ್ಬದ ಅಂಗವಾಗಿ ಜಾತ್ರೆ ನಡೆಯುತ್ತದೆ ಎಂದು ಅವರ ಅಭಿಮತ. ಹಬ್ಬ, ಜಾತ್ರೆಗಳು ಎರಡು ಭಿನ್ನ ಸಂಸ್ಕೃತಿ ಜನವರ್ಗಗಳ ಪರಂಪರೆಗಳಾಗಿದ್ದು ತದನಂತರದಲ್ಲಿಷ್ಟು ಅವುಗಳ ಸಂಯೋಗವಾಯಿತಾದರೂ ಪ್ರತ್ಯೇಕ, ವೈಶಿಷ್ಟ್ಯಗಳು ಉಳಿದುಕೊಂಡುಬಂದಿದೆ.

೨.೭ ಜಾತ್ರೆಗಳ ವಿಧಗಳು

ಮೇಲ್ನೋಟಕ್ಕೆ ಎಲ್ಲಾ ಜಾತ್ರೆಗಳು ಏಕ ಪ್ರಕಾರವಾಗಿ ಕಂಡುಬರುತ್ತವೆಯಾದರೂ ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಜಾತ್ರೆಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಹಲವಾರು ಕಾರಣಗಳ ಆಧಾರದ ಮೇಲೆ ಅವುಗಳ ಸಾಮಾಜಿಕ ಆಚರಣೆಯ ಆಧಾರದ ಮೇಲೆ ಪ್ರಮುಖವಾಗಿ ೬ ವಿಧಗಳಾಗಿ ವಿಂಗಡಿಸಿ ಆಚರಿಸುತ್ತಿರುವುದು ಕಂಡುಬರುತ್ತದೆ.

ವಿಧಗಳು

೧. ಮೋಜಿನ ಜಾತ್ರೆಗಳು

೨. ವಸ್ತು ಪ್ರದರ್ಶನದ ಜಾತ್ರೆಗಳು

೩. ಸಾಂಸ್ಕೃತಿಕ ಜಾತ್ರೆಗಳು

೪. ಧಾರ್ಮಿಕ ಜಾತ್ರೆಗಳು

೫. ದನದ ಜಾತ್ರೆಗಳು

೬. ದೇವ-ದೇವಿಯರ ಆರಾಧನ ಜಾತ್ರೆಗಳು

೧. ಮೋಜಿನ ಜಾತ್ರೆಗಳು

ಸ್ಪರ್ದೆ ಮತ್ತು ಸಾಹಸ ಪ್ರದರ್ಶನವೂ ಪ್ರಧಾನವಾಗಿರುತ್ತವೆ. ದನಗಳ ಓಟವಿರಬಹುದು, ಕಂಬಳ ಜಾತ್ರೆಯಲ್ಲದಂತ ಕೋಣಗಳ ಓಟದ ಸ್ಪರ್ಧೆ ಇರಬಹುದು. ಯುವಕರು ತಮ್ಮ ದೈಹಿಕ ಬಲ ಸಹಾಸವನ್ನು ಮೆರೆಯುವುದಕ್ಕೆ 'ದವಕಾಶವಾದರು ಇಂತಹ ಜಾತ್ರೆಗಳು ಸಾಂಸ್ಕೃತಿಕ ಕಾರಣದಿಂದ ಕೂಡಿರುತ್ತದೆ.

೨. ವಸ್ತು ಪ್ರದರ್ಶನದ ಜಾತ್ರೆಗಳು

ವಸ್ತು ಪ್ರದರ್ಶನವೂ ಕೆಲವೊಂದು ಜಾತ್ರೆಗಳಲ್ಲಿ ಪ್ರಧಾನ ಅಂಶವಾಗಿರುತ್ತದೆ. ಇಂತಹ ಜಾತ್ರೆಗಳಲ್ಲಿ ಜನರಿಗೆ ಅಗತ್ಯವಾದ ದಿನಬಳಕೆಯ ವಸ್ತುಗಳನ್ನು ಪದರ್ಶನಕ್ಕಿಟ್ಟು ರಿಯಾಯಿತಿಯ

ದರದಲ್ಲಿ ಮಾರಾಟ ಮಾಡಲಾಗುತ್ತದೆ. ಇಂತಹ ಸಮಯದಲ್ಲಿ ಜನರು ಬಹು ಸಂಖ್ಯೆಯಲ್ಲಿ ನಗದು ವ್ಯಾಪಾರವು ಬಿರುಸಾಗಿ ಸಾಗುತ್ತದೆ. ವಾಸ್ತವವಾಗಿ ಜನರು ತಮ್ಮ ವಾರ್ಷಿಕ ಉತ್ಪನ್ನಗಳನ್ನು ಸಾಮಾನ್ಯವಾಗಿ ಸುಗ್ಗಿ ಕಳೆದ ತಕ್ಷಣವೇ ಆರಂಭವಾಗುವ ಇಂತಹ ಬೇಸಿಗೆಯ ಜಾತ್ರೆಗಳನ್ನು ಮಾಡಿ ತಮ್ಮ ಒಕ್ಕಲುತನಕ್ಕೆ ಅಗತ್ಯವಾದ ಸಲಕರಣೆಗಳನ್ನು ದಿನನಿತ್ಯ ಬಳಕೆಯ ವಸ್ತುಗಳನ್ನು ಕೊಳ್ಳುತ್ತಾರೆ. ಆದುದರಿಂದ ಇಂತಹ ಬಗೆಯ ಜಾತ್ರೆಯನ್ನು ಗ್ರಾಮೀಣ ಪ್ರದೇಶಗಳ ಮುಖ್ಯ ವ್ಯಾಪಾರ ಕೇಂದ್ರ ಎಂದು ಕರೆಯುತ್ತಾರೆ.

೩. ಸಾಂಸ್ಕೃತಿಕ ಜಾತ್ರೆಗಳು

ಸಾಂಸ್ಕೃತಿಕ ಜಾತ್ರೆಗಳು ನಮ್ಮ ನಾಡಿನ ಸಂಸ್ಕೃತಿಯನ್ನು ಬೆಳಗುವಂತಹ ವಿಶಿಷ್ಟ ಆಚರಣೆಗಳನ್ನು ಒಳಗೊಂಡಿರುತ್ತದೆ ಈ ಜಾತ್ರೆಗಳ ಮೂಲಕ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳನ್ನು ಕಾಣಬಹುದು.

ಈ ಸಾಂಸ್ಕೃತಿಕ ಜಾತ್ರೆಗಳು ನಮ್ಮ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಕಾರಣವಾಗುತ್ತವೆ ಎಂದು ಹೇಳಬಹುದು.

೪. ಸಂಘಟನ ಕಾರ್ಯ

ಜಾತ್ರೆಗಳ ಸಮಯದಲ್ಲಿ ಎಲ್ಲಾ ಜಾತಿ ವರ್ಗಗಳಲ್ಲಿ ತಾರತಮ್ಯ ಬೇಧ ಬಾವವಿಲ್ಲದೆ, ಎಲ್ಲರು ಬೆರೆತು ದೇವತೆಗಳಿಗೆ ಸಲ್ಲಿಸಬೇಕಾದ ಸೇವೆಗಳನ್ನು ಸಲ್ಲಿಸುತ್ತಾರೆ. ಜಾತ್ರೆಗಳಲ್ಲಿನ ತೇರಳವಿಕೆ, ಅನ್ನ ಸಂತರ್ಪಣೆ, ಪಾನಕ ಸೇವೆ ಇತ್ಯಾದಿ ಕಾರ್ಯಕ್ರಮಗಳು ಎಲ್ಲರನ್ನು ಒಂದು ಗೂಡಿಸಿ ಸಾಂಘಿಕ ಬದುಕು ಸಾಗಿಸುವತ್ತ ಪ್ರೇರಣೆ ನೀಡುತ್ತದೆ. ದೇವರ ಸೇವೆ ಎಂಬ ಹೆಸರಿನಲ್ಲಿ ಪರಸ್ಪರ ಸಹಕಾರ ಮನೋಭಾವನೆಯನ್ನು ಬೆಳೆಸುತ್ತದೆ.

೫. ನೈತಿಕ ಪ್ರಜ್ಞೆ ಮೂಡಿಸುವ ಕಾರ್ಯ

ಡಾ॥ ಅಂಬಳಿಕೆ ಹಿರಿಯಣ್ಣನವರು ಜಾತ್ರೆಗಳ ನಿಜವಾದ ಕಾರ್ಯವೆಂದರೆ ಜನರಲ್ಲಿ ನೈತಿಕ ಪ್ರಜ್ಞೆ ಮೂಡಿಸಿ, ಶೀಲಗಳು ಉತ್ತಮಗೊಳ್ಳುವಂತೆ ಮಾಡಿ ಬದುಕಿನ ಭರವಸೆ, ಸ್ಫೂರ್ತಿಯನ್ನು ಒದಗಿಸಿ, ಜಡತೆಯನ್ನು ಹೋಗಲಾಡಿಸಿ ಅವರನ್ನು ಜಾಗೃತಗೊಳಿಸುವುದೇ ಆಗಿದೆ ಎಂದಿದ್ದಾರೆ.

೬. ಧಾರ್ಮಿಕ ಕಾರ್ಯ

ತಮ್ಮ ಇಷ್ಟ ದೇವರುಗಳನ್ನು ಸಂತೃಪ್ತಿಗೊಳಿಸುವುದರಿಂದ ತಮ್ಮ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ ಎಂಬ ಭಾವನೆ ಜನರಲ್ಲಿ ಅಪಾರವಾಗಿದೆ. ಅದಕ್ಕಾಗಿ ಜನರು ಜಾತ್ರೆಯ ಸಮಯದಲ್ಲಿ ಕಟ್ಟು-ನಿಟ್ಟಿನ ಸಾಂಪ್ರದಾಯಿಕ ನಿಯಮಗಳನ್ನು ಚಾಚು ತಪ್ಪದೇ ಪಾಲಿಸುತ್ತಾ

ತನು, ಮನ, ಧನವನ್ನು ಪೂರ್ವಕವಾಗಿ ಶ್ರದ್ಧಾ ಭಕ್ತಿಗಳಿಂದ ಧಾರ್ಮಿಕ ಪೂಜಾ ಕಾರ್ಯದಲ್ಲಿ ತೊಡಗುತ್ತಾರೆ.

೭. ಧಾರ್ಮಿಕ ಜಾತ್ರೆಗಳು

ಧಾರ್ಮಿಕ ಜಾತ್ರೆಗಳು ಹಲವಾರು ದೇವರುಗಳನ್ನು ಆರಾಧನೆಯ ಮಾಡುತ್ತಾ ಜೊತೆಗೆ ಕೋಲಾಟ ಬಯಲಾಟ ಮುಂತಾದ ವಿಶಿಷ್ಟ ಆಚರಣೆಗಳು ವಿಜೃಂಭಣೆಯಿಂದ ಈ ಜಾತ್ರೆಗಳನ್ನು ಮಾಡಲಾಗುತ್ತದೆ. ಈ ಜಾತ್ರೆಗಳು ನಮ್ಮ ನಾಡಿನ ಧಾರ್ಮಿಕತೆಯನ್ನು ಎತ್ತಿಹಿಡಿಯುತ್ತವೆ. ಹಾಗೂ ಧಾರ್ಮಿಕತೆಯ ಪ್ರತೀಕವಾಗಿವೆ ಎಂದು ಹೇಳಬಹುದು.

೮. ದನದ ಜಾತ್ರೆಗಳು

ಈ ಬಗೆಯ ಜಾತ್ರೆಗಳು ವ್ಯಾಪಾರ ವ್ಯವಹಾರ ಮತ್ತು ವಾಣಿಜ್ಯ ವ್ಯವಹಾರಗಳಿಗೆ ಮಹತ್ವ ಉಳ್ಳವುಗಳಾಗಿರುತ್ತವೆ. ದನಗಳ ಪ್ರದರ್ಶನ ಹಾಗೂ ಮಾರಾಟವೇ ಇಲ್ಲಿನ ಪ್ರಧಾನ ಅಂಶವಾಗಿರುವುದನ್ನು ಈ ಸಂದರ್ಭದಲ್ಲಿ ನಾವು ಗಮನಿಸಬಹುದು.

೯. ದೇವ-ದೇವಿಯರ ಆರಾಧನ ಜಾತ್ರೆಗಳು

ಈ ರೀತಿಯ ಜಾತ್ರೆಗಳಲ್ಲಿ ದೇವರ ಸೇವೆ ಎಂಬ ಹೆಸರಿನಲ್ಲಿ ಪರಸ್ಪರ ಸಹಕಾರ ಧನ್ಯತೆಯ ಭಾವದ ಜೊತೆ ಜೊತೆಗೆ ಗ್ರಾಮಾಭಿವೃದ್ಧಿಯ ಕನಸೂ ಕೂಡ ಇರುತ್ತದೆ. ಸಾಮಾನ್ಯವಾಗಿ ಭಕ್ತಿಯ ಕಾರಣದಿಂದಾಗಿ ಇಂತಹ ಜಾತ್ರೆಗಳು ಆಚರಣೆಯಲ್ಲಿವೆ.

೧೦. ಸಾಂಪ್ರದಾಯಕ ವಿಧಿ ಆಚರಣೆಗಳ ಕಾರ್ಯ

ಇವುಗಳಲ್ಲಿ ಹರಕೆ, ಸಿಡಿ, ಮಡೆ ಹೋರುವುದು. ನಡೆಮುಡಿ, ಬೇವಿನುಡುಗೆ, ಬಾಯಿಬೀಗ, ಉರುಳು ಸೇವೆ, ಕೊಂಡ ಹಾಯುವುದು, ತೇರನ್ನು ಎಳೆಯುವುದು ಮುಂತಾದ ಸಂಪ್ರದಾಯಿಕ ವಿಧಿ ಆಚರಣೆಗಳನ್ನು ಕಾಣಬಹುದು.

೧೧. ಮನೋರಂಜನಾ ಕಾರ್ಯ

ಜಾತ್ರೆಗಳು ಒಂದು ರೀತಿಯಲ್ಲಿ ಮನೋರಂಜನಾ ಕೇಂದ್ರಗಳಾಗಿದ್ದು. ಇಲ್ಲಿ ಬಯಲಾಟ, ನಾಟಕ, ನೃತ್ಯ, ಸಂಗೀತ, ಗೊಂಬೆಯಾಟ, ಭಜನೆ, ವೀರಗಾಸೆ, ಕುಸ್ತಿ, ಕೋಲಾಟ ಹಾಗೂ ವಿವಿಧ ಬಗೆಯ ವೇಷಭೂಷಣಗಳಿಂದ ಜಾತ್ರೆ ಮನೋರಂಜಕವಾಗಿರುತ್ತದೆ.

೨.೮ ಜಾತ್ರೆಗಳ ಪ್ರಯೋಜನಗಳು

ಜಾತ್ರೆಗಳನ್ನು ನೆಡೆಸಿಕೊಂಡು ಬರುತ್ತಿರುವುದಿಂದ ಅನೇಕ ಪ್ರಯೋಜನಗಳು ಜನರಿಗೆ ಆಗುತ್ತವೆ. ಜಾತ್ರೆಯು ಪ್ರತಿಯೊಬ್ಬನ ಮನಸ್ಸನ್ನು ಉಲ್ಲಾಸ, ಸಂತೋಷ ಸಂಭ್ರಮದಿಂದ

ಇರುವಂತೆ ಮಾಡುತ್ತದೆ. ಸಾಮಾಜಿಕ ಬದುಕಿನಲ್ಲಿ ಬಡತನ, ಜಾತೀಯತೆ ಮತ್ತು ಮೇಲು ಕೀಳುಗಳೆಂಬ ಬಡವ, ಬಲ್ಲಿದರನ್ನದೆ ಸಣ್ಣವರು, ದೊಡ್ಡವರೆನ್ನದೆ, ಸ್ತ್ರೀ-ಪುರುಷರೆನ್ನದೆ ಹರ್ಷದಿಂದ ಕಾಲ ಕಳೆಯುವುದಕ್ಕೆ ಮಾನವನ ಮನಸ್ಸು ಬಯಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಜಾತ್ರೆಗಳು ಬಹು ಜನಪ್ರಿಯತೆಯನ್ನು ಪಡೆದುಕೊಂಡಿವೆ. ಜಾತ್ರೆ ದೇವರ ಹೆಸರಿನಲ್ಲಿ ನಡೆದರೂ ಸಂತೋಷದ ಜೊತೆಗೆ ಭಕ್ತಿಯನ್ನು ಮೂಡಿಸುತ್ತದೆ.

- ಜಾತ್ರೆ ನೆಡೆಯುವುದರಿಂದ ಪ್ರತಿಯೊಂದು ಜಾತಿ, ಜನಾಂಗ, ವರ್ಣದ ಜನರು ಭಾಗವಹಿಸುತ್ತಾರೆ.
- ಜಾತ್ರೆಯಲ್ಲಿ ನಡೆಯುವ ಆಚರಣೆ, ನಂಬಿಕೆ, ಸಂಪ್ರದಾಯಗಳೆಲ್ಲವೂ ಫಲವಂತಿಕೆ ಮತ್ತು ಸಮೃದ್ಧಿಯನ್ನು ಕುರಿತ ಅಂಶವಾಗಿದೆ.
- ಜಾತ್ರೆಗಳು ವಿವಿಧ ವರ್ಗಗಳ ನಡುವಿನ ಸಂಘರ್ಷದಿಂದ ನಡೆದರೂ ಇಲ್ಲಿ ಐಕ್ಯತಾ ಭಾವನೆಯನ್ನು ಬೆಳೆಸುತ್ತದೆ.
- ಧಾರ್ಮಿಕ ಭಾವನೆಯನ್ನು ಬೆಳೆಸುವುದರ ಮೂಲಕ ವೈಚಾರಿಕ ಮತ್ತು ವೈಜ್ಞಾನಿಕತೆಯನ್ನು ಬೆಳೆಸುತ್ತದೆ.
- ಸ್ತ್ರೀ ದೇವತೆಯನ್ನು ಕುರಿತು ನಡೆಸುವ ಆಚರಣೆಗಳೆಲ್ಲವೂ ಪುರುಷ ಪ್ರಾಧನ್ಯತೆಯನ್ನು ವಿರೋಧಿಸುವುದು.
- ಜಾತ್ರೆಗಳಲ್ಲಿ ಗಂಡು ಹೆಣ್ಣುಗಳು ಮುಕ್ತವಾಗಿ ಬೆರೆಯುವುದರಿಂದ ಸಾಮಾಜಿಕ ಕಟ್ಟುಪಾಡುಗಳನ್ನು ಮುರಿದು ಅಂತರ ಜಾತಿಯ ಸಂಬಂಧಗಳಿಗೆ ಅವಕಾಶ ಕಲ್ಪಿಸಿಕೊಡುತ್ತವೆ.

  ಆದರೆ ಯಾವ ಅಧ್ಯಯನವು ಜಾತ್ರೆಗಳ ಆಚರಣೆಯ ವಿಧಿವಿಧಾನಗಳನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ವಿಚಾರವಾದ ಮಾಹಿತಿಯನ್ನು ನೀಡಿಲ್ಲ ಈ ಕಾರಣದಿಂದಾಗಿ ಪ್ರಸ್ತುತ ಅಧ್ಯಯನವು ಈ ಕೊರತೆಯನ್ನು ನೀಗಿಸುತ್ತದೆ.

- ಜಾತ್ರೆಯ ಆಚರಣ ವಿಧಿ-ವಿಧಾನಗಳಲ್ಲಿ ಮಹಿಳೆಯರ ಪಾತ್ರ.
- ಬುಡಕಟ್ಟು ಮಹಿಳೆಯರ ಧಾರ್ಮಿಕ ಜೀವನದ ಸ್ಥಿತಿಗತಿಗಳ ವಿಶ್ಲೇಷಣೆ.
- ಜಾತ್ರೆಯ ಆಚರಣೆಯ ದಿನಗಳಲ್ಲಿ ಸಾರ್ವಜನಿಕ ಭಕ್ತಿ, ಸಮುದಾಯ ಅವರ ಸಂಬಂಧಗಳ ಸ್ವರೂಪ ವಿವರಣೆ.

- ಹಿಂದೆ ಜಾತ್ರೆಗಳು ಹೇಗಿದ್ದವು ಈಗ ಹೇಗೆ ಪರಿವರ್ತನೆಗೊಂಡಿವೆ ಎಂಬುದನ್ನು ತಿಳಿಸುತ್ತದೆ.
- ಜಾತ್ರೆಗಳು ಕಣ್ಮರೆಯಾಗುವ ಅಂಚಿನಲ್ಲಿರುವ ಸಾಂಸ್ಕೃತಿಕ ಅಂಶಗಳನ್ನು ಸಂಗ್ರಹಿಸಿ ಮುಂದಿನ ಪೀಳಿಗೆಯವರಿಗೆ ರವಾನಿಸುವುದು.
- ಆಧುನಿಕತೆಯ ಮಧ್ಯದಲ್ಲಿಯು ಜಾತ್ರೆಗಳ ಸಮಾಜಶಾಸ್ತ್ರೀಯ ಪ್ರಾಮುಖ್ಯತೆಯನ್ನು ವರದಿಪಡಿಸುತ್ತದೆ.
- ಸಮುದಾಯಗಳ ಅತೀ ಸೂಕ್ಷ್ಮ ಮತ್ತು ಸಂಕೀರ್ಣವಾದಂತಹ ಸಾಮಾಜಿಕ ನಂಬಿಕೆಗಳು, ಕ್ರಿಯಾವಿಧಿಗಳು, ಆಚರಣೆಗಳು, ಸಂಪ್ರದಾಯಗಳು ಇವರ ಸಮುದಾಯಗಳ ಈ ಅಂಶಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬ ಅಂಶವನ್ನು ಗುರುತಿಸಿ, ದಾಖಲಿಸಿ ಈ ಮೇಲಿನ ಸಂಶಯಗಳನ್ನು ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಪ್ರಾಮುಖ್ಯತೆ ಕೊಟ್ಟು ಸಂಶೋಧನೆ ಮಾಡಲಾಗುತ್ತದೆ.

೨.೯ ಗೌರಿ ಹುಣ್ಣಿಮೆ

ಕಾರ್ತಿಕ ಶುಕ್ಲ ಹುಣ್ಣಿಮೆಯ ದಿನ ಗೌರಿ ಹುಣ್ಣಿಮೆ, ತ್ರಿಪುರಿ ಪೂರ್ಣಿಮೆ ಹಬ್ಬ ದೇವರ ದೀಪಾವಳಿ ಎಂದು ಈ ಹಬ್ಬಕ್ಕೆ ಹೆಸರಿದೆ. ಈ ದಿನ ಪುರಾಣ ಯುಗದಲ್ಲಿ ತ್ರಿಪುರಾಸುರನನ್ನು ಶಂಕರನು ಕೊಂದನೆಂದು ಹೇಳುತ್ತಾರೆ. ತ್ರಿಪುರ ವಧೆಯ ಕಾರಣ ತ್ರಿಪುರಿ ಪೂರ್ಣಿಮೆ ಎಂಬ ಹೆಸರಿದೆ. ಅಂದು ದೇವಾಲಯಗಳಲ್ಲಿ ದೀಪೋತ್ಸವವಿರುತ್ತದೆ. ಹೆಂಗಸರು ಗೌರಿಪೂಜೆಯನ್ನು ಮಾಡುತ್ತಾರೆ. ಕಾರ್ತಿಕ ಮಾಸದಲ್ಲಿ ಭಾರತದ ಹಲವು ದೇವಾಲಯಗಳಲ್ಲಿ ದೀಪೋತ್ಸವ ಇರುವುದು ಸಾಮಾನ್ಯವಾಗಿದೆ.

ವ್ರತಗಳ ಆಚರಣೆಗಳು

ವ್ರತಗಳನ್ನಾನ್ನು ಆಚರಿಸುವುದೆಂದರೆ ಸ್ತ್ರೀಯರಿಗೆ ಬಲು ಪ್ರಿಯಗುತ್ತದೆ. ವ್ರತಗಳಲ್ಲಿ ಉಪವಾಸ ಮತ್ತು ಪ್ರಾರ್ಥನೆಗಳು ಮುಖ್ಯವಾಗುತ್ತವೆ. ಕಲಿಯುಗದಲ್ಲಿ ದಂಪತಿಗಳು ಒಟ್ಟಿಗೆ ಕುಳಿತು ಮಾಡುವ ಸತ್ಯನಾರಾಯಣ ವ್ರತ ಶ್ರೇಷ್ಠವಾದುದಾಗಿರುತ್ತದೆ. ಹೆಚ್ಚು ಮಕ್ಕಳಿಗೆ ವಿವಾಹವಾದ ಮೊದಲ ಐದು ವರ್ಷಗಳು ಮಂಗಳ ಗೌರಿವ್ರತ ಮಾಡುವ ಪರಿವಾರವಿರುತ್ತದೆ. ನಮ್ಮ ಸೌಮಾಂಗಲ್ಯಕ್ಕಾಗಿ ಈ ವ್ರತವನ್ನು ಅವರು ಆಚರಿಸುವರು.

೧. ಚೈತ್ರ ಗೌರಿವ್ರತ

ಚೈತ್ರ ಗೌರಿವ್ರತ ಶುಕ್ಷ ಪಕ್ಷದ ತದಿಗೆಯಿಂದ ವೈಶಾಖ ಶುಕ್ಲ ತದಿಗೆಯವರೆಗೆ ಚೈತ್ರಗೌರಿವ್ರತ ನಡೆಯುತ್ತದೆ. ಇದು ಹೆಣ್ಣು ಮಕ್ಕಳ ಆಚರಿಸುವ ವ್ರತವಾಗಿದೆ. ಸ್ತ್ರೀಯರು

ವಸ್ತ್ರಭೂಷಣಗಳಿಂದ ಅಲಂಕೃತರಾಗಿ ಮುತ್ತೈದೆಯರೊಡನೆ ಬೆರೆಯುವ ಉದ್ದೇಶ ಈ ವ್ರತವಾಗಿದೆ.

ಗೌರಿದೇವಿಯನ್ನು ಪೂಜಿಸಿ ಸ್ತ್ರೀಯರು ನೆರೆ ಒರೆಯ ಮುತ್ತೈದೆಯರನ್ನು ಮನೆಗೆ ಕರೆದು ಪಾನಕ, ಕೋಸಂಬರಿ, ಅರಿಶಿನ, ಕುಂಕುಮ ನೀಡುವರು. ಸಂಘ-ಸಂಸ್ಥೆಗಳು, ಚೈತ್ರ, ಗೌರಿ ಹೆಸರಿನಲ್ಲಿ ಹೂ, ವೀಳ್ಯ ಸಮಾರಂಭಗಳ ವ್ಯವಸ್ಥೆ ಮಾಡುವರು. ವೈಶಾಖ ಶುಕ್ಲ ತದಿಗೆಯಂದು ಈ ವ್ರತ ಮುಗಿಯುವುದು.

೨. ಸ್ವರ್ಣ ಗೌರಿ ವ್ರತ

"ಭಾದ್ರಪದ ಶುಕ್ಲ ತದಿಗೆಯಂದು ವಿಶೇಷವಾಗಿ ಸ್ತ್ರೀಯರು ಸೌಭಾಗ್ಯ ತೃತೀಯಾ, ಕುಮಾರೀ, ತೃತೀಯಾ ಹರಿತಾಲಿಕಾ ವ್ರತಗಳೆಂದೂ ಹೇಳುವರು. ಭಾರತದಲ್ಲಿ ಎಲ್ಲೆಡೆಗಳಲ್ಲಿಯೂ ಈ ವ್ರತಗಳು ಆಚರಣೆಯಲ್ಲಿದೆ.

ಗೌರಿ ಶಿವನ ಅರ್ಧಾಂಗಿ ಹಿಮವಂತನ ಮಗಳು, ಭಾದ್ರಪದ ಶುಕ್ಲ ತದಿಗೆಯ ದಿನದಂದು ಗೌರಿಯು ಶಿವಲಿಂಗವನ್ನು ಮಾಡಿ ಭಕ್ತಿಯಿಂದ ಪೂಜಿಸಿದಳು. ಶಿವ ಪ್ರತ್ಯಕ್ಷನಾಗಿ ವರವನ್ನು ಕೇಳಿದಾಗ ನೀನು ನನಗೆ ಪತಿಯಾಗಬೇಕು ಎಂದು ಗೌರಿ ಕೇಳಿಕೊಂಡಳು. ಇಬ್ಬರಿಗೂ ಹಿಮವಂತ ವೈಭಾವದಿಂದ ಮದುವೆ ಮಾಡಿದನು. ಶಿವ ಪಾರ್ವತಿಯರ ವಿವಾಹ ಕುರಿತು ಪುರಾಣಗಳಲ್ಲಿ ಸುದೀರ್ಘ ಪ್ರಸ್ತಾಪವಿದೆ. ಈ ಸೌಭಾಗ್ಯ ವ್ರತವನ್ನಾಚರಿಸಬೇಕೆಂದು ಪುರಾಣಗಳಲ್ಲಿ ಹೇಳಲಾಗಿದೆ. ಮದುವೆಯಾದವರು ಈ ವ್ರತವನ್ನು ತಪ್ಪದೇ ಆಚರಿಸುವರು.

ಗೌರಿ ಹಬ್ಬದಂದು ಸ್ತ್ರೀಯರು ವ್ರತ ಕಾಲದಲ್ಲಿ ಎದ್ದು ಮಂಗಳ ಸ್ನಾನಮಾಡಿ ಮಡಿ ವಸ್ತ್ರಧಾರಿಸಿ (ಜರತಾರಿಸೀರೆ) ಗೌರಿಪೂಜೆ ಮಾಡುವರು. ಪರಶಿವನ ಅರ್ಧಾಂಗಿಯಾದ ಪಾರ್ವತಿ ಅಂದು ತೌರುಮನೆಗೆ ಬರುವ ಹೆಣ್ಣು ಮಗಳಂತೆ ಬರುವಳೆಂದೂ ಗಣೇಶನು ತಾಯಿಯನ್ನು ಕರೆತರಲು ಬರುವನೆಂದು ನಂಬಿಕೆಯಿಂದ ಸ್ತ್ರೀಯರು ಗೌರಿಪೂಜೆ ಮಾಡಿ ಕೈಗೆ ಪವಿತ್ರ ದಾರವನ್ನು ಕಟ್ಟಿಕೊಳ್ಳುತ್ತಾರೆ. ಗೌರಿ ವಿಗ್ರಹಕ್ಕಾಗಲಿ ಅಥವಾ ಮಣ್ಣಿನ ಗೌರಿಯನ್ನು ಪೂಜೆ ಮಾಡುವರು. ಪ್ರತಿಷ್ಠೆ, ಪಂಚಾಮೃತ, ಸ್ನಾನ, ಅಷ್ಟೋತ್ತರ ಸಹಸ್ರನಾಮಾದಿಗಳಿಂದ ಧೂಪ ದೀಪ, ನೈವೇದ್ಯಗಳಿಂದ ಅರ್ಚನೆ ಮಂಗಳಾರತಿ ಮಾಡಿ ಪ್ರದಕ್ಷಿಣೆ ನಮಸ್ಕಾರ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ.

ಮಂಗಳ ಗೌರಿ ವ್ರತ

ಶ್ರಾವಣ ಮಾಸದ ಪ್ರತಿ ಮಂಗಳವಾರವೂ ಗೌರಿಪೂಜೆ ಮಾಡುವ ವ್ರತಕ್ಕೆ ಮಂಗಳಗೌರಿ ವ್ರತ ಎಂದು ಕರೆಯುತ್ತೇವೆ. ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ಸತತವಾಗಿ

೫ ವರ್ಷ ಮಾತ್ರ ತವರುಮನೆಯಲ್ಲಿಯೇ ಈ ವ್ರತವನ್ನು ಮಾಡಬೇಕು. ಈ ವ್ರತದಲ್ಲಿ ಕೆಲವು ಕಟ್ಟುಪಾಡುಗಳಿರುತ್ತವೆ.

ಹದಿನಾರು ಬಗೆ ಪತ್ರೆಪುಷ್ಪಗಳು, ಹದಿನಾರು ಸುಮಂಗಳಿಗೆಯರಿಗೆ ಭೋಜನ ಮಾಡಿಸುವುದು. ಮೊದಲಾದವು ಕಟ್ಟುಪಾಡುಗಳಾಗಿವೆ. ದಕ್ಷಿಣ ಭಾರತದಲ್ಲಿ ಈ ಆಚರಣೆಯಲ್ಲಿದೆ ದೇವಿಯ ನೈವೇದ್ಯಕ್ಕೆ ತಂಬಿಟ್ಟು ಮಾಡುವರು. ತಂಬಿಟ್ಟಿನ ದೀಪಗಳನ್ನು ಹೊತ್ತಿಸುವ ಆಚರಣೆಗಳನ್ನು ತಿಳಿಯಬಹುದು.

ಶ್ರಾವಣಮಾಸದ ಪ್ರತಿ ಶುಕ್ರವಾರ ಸ್ತ್ರೀಯರು ಗೌರಿ ವ್ರತವೆಂದು ಆಚರಿಸುವರು. ಈಕೆ ಲಕ್ಷ್ಮೀಸಹಿತಳಾದ ಗೌರಿ ಎಂದು ತಿಳಿಯುವರು.

೧) ಹುಣ್ಣಿಮೆಗಳು

೨) ಅಮವಾಸ್ಯೆಗಳು

೩) ವ್ರತಗಳು

ಗೌರಿದೇವಿಯ ಜಾತ್ರೆಯ ಕಾರ್ಯಕ್ರಮಗಳು

- ಗೌರಿದೇವಿಯ ಕಲಶ ಸ್ಥಾಪನೆ ಮಾಡುವುದು.
- ಎಂದಿನಂತೆ ಪೂಜಾ ಕಾರ್ಯಕ್ರಮಗಳು
- ಅಂದಿನ ಭಜನಾ ಮಂಡಳಿ ವತಿಯಿಂದ ಭಜನೆಯ ಕಾರ್ಯಕ್ರಮಗಳು ಆ ದಿನದಲ್ಲಿ ರಾತ್ರಿ ಶ್ರೀ ಗೌರಿದೇವಿಯ ಆಗಮನ.
- ಶ್ರೀ ದೇವಿಯು ಗುಡಿ ತುಂಬಿದ ನಂತರ ಭಕ್ತಾದಿಗಳು ದರ್ಶನ ಪಡೆದು ಅನುಗ್ರಹಕ್ಕೆ ಪಾತ್ರಾರಾಗುತ್ತಾರೆ. ನಂತರ ದೇವಿಯ ಸ್ವಸ್ಥಾನಕ್ಕೆ ತೆರಳುವುದು.

ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಇರುತ್ತದೆ. ಸಾಯಂಕಾಲ ಎತ್ತಿನಹಬ್ಬ (ಬಸವನ ಹಬ್ಬ) ಆಚರಣೆಯನ್ನು ಸಹ ಮಾಡುತ್ತಾರೆ.

೨.೧೦ ಜಾತ್ರೆಯಲ್ಲಿನ ಪ್ರದರ್ಶನ ಕಲೆಗಳು

ಜಾತ್ರೆಯ ಸಮಯದಲ್ಲಿ ಜನರೆಲ್ಲಾ ಸೇರಿ ಸಂಗೀತ, ನೃತ್ಯ ಮತ್ತು ಅಭಿನಯದ ಮೂಲಕ ಹಾಡಿ, ಪಾಡಿ ಕುಪ್ಪಳಿಸುವ ವಿಧಾನಗಳು ಪ್ರದರ್ಶನ ಕಲೆ, ಭಜನೆ, ನಂದಿಕೋಲು ಕೋಲಾಟ, ನಾಟಕ, ಪ್ರದರ್ಶನಗಳು ಕಲೆಗಳ ವ್ಯಾಪ್ತಿಗೆ ಒಳಪಡುತ್ತದೆ. ಅವು ಮನೋರಂಜನೆವಾದವುಗಳು. ಮನಸ್ಸಿಗೆ ನೆಮ್ಮದಿಯನ್ನು ಕೊಡುತ್ತವೆ. ಸಾರ್ವಜನಿಕರ ಮನಸ್ಸಿನಲ್ಲಿರುವ ಕೌಟುಂಬಿಕ ಕಷ್ಟ ದುಃಖಗಳನ್ನು ದೂರಮಾಡಿ ಅವರಲ್ಲಿ ಶಾಂತಿ,

ಸಮಾಧಾನ, ಸಂತೃಪ್ತಿಯನ್ನು ತಂದು ಕೊಡುತ್ತದೆ. ಹೀಗಾಗಿಯೇ ಪ್ರದರ್ಶನ ಜನಪದ ಕಲೆಗಳು ಜಾತ್ರೋತ್ಸವಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ.

ಜಾತ್ರೆ ಸಮಿತಿಯವರು ಕಲಾ ತಂಡದವರಿಂದ ಹೋಗಲಾಡಿಸಲು ಜಾತಿ, ಸಮಾನತೆ, ಧರ್ಮ, ಸಹಬಾಳ್ವೆಯ ಬಗ್ಗೆ ಜಾತ್ರೆಗೆ ಬಂದ ಭಕ್ತರಲ್ಲಿರುವ ಮೂಢ ನಂಬಿಕೆಗಳು ಧರ್ಮ ಸಹಭಾಳ್ವೆ, ವಿದ್ವಾಂಸರಿಂದ ನೀತಿ ಭೋಧನೆಯ ಮುಖಾಂತರ ಅರಿವು ಮೂಡಿಸುವುದು ಈ ಸಂಪ್ರದಾಯವು ಪುರಾತನ ಕಾಲದಿಂದಲೂ ಬೆಳೆದುಬಂದಿದೆ.

೧. ಭಜನಾ ಪ್ರದರ್ಶನ

ತಾಳ, ದಮಡಿ, ಹಾರ್ಮೋನಿಯಂ ಮತ್ತು ಮಾಧ್ಯಮಗಳು ಭಜನಾ ಮೇಳದಲ್ಲಿರುತ್ತವೆ. ದೇವರ ಗುಡಿಗಳಲ್ಲಿ ಪ್ರತಿ ಸೋಮವಾರ, ಶನಿವಾರ ವಿಶೇಷವಾಗಿ ಹಬ್ಬ ಹರಿದಿನಗಳಂದು ಭಜನೆಯನ್ನು ಮಾಡುತ್ತಾರೆ. ಭಜನಾ ಮೇಳದಲ್ಲಿರುವ ಕಲಾವಿದರು ಸಾಮಾನ್ಯ ಉಡುಪುಗಳನ್ನು ಧರಿಸುತ್ತಾರೆ. ಹಣೆಗೆ ವಿಭೂತಿ ಬಳಿದುಕೊಳ್ಳುವರು. ನಾಯಕನೊಬ್ಬನೇ ತಾಳ ಹಾಕಿ ರಾಗ ಎತ್ತಿದ್ದಂತೆ ಹಿಮ್ಮೇಳದ ದಮರಿವಾದಕನು ರಾಗಕ್ಕೆ ತಾಳ ನೀಡುತ್ತಾನೆ. ದಮಡಿ, ವಾದಕ, ಹಾರ್ಮೋನಿಯ ವಾದಕ ಹಾಗೂ ಒಟ್ಟು ತಾಳಗಳ ವಾದಕರು ಹೀಗೆ ನಾಲ್ಕರು ಜನರು ಈ ಮೇಳದಲ್ಲಿರುತ್ತಾರೆ. ಹಿಮ್ಮೇಳನದ ಯಾವನೊಬ್ಬನು ನಾಯಕನಿಗೆ ಸ್ಫೂರ್ತಿಯೆಂಬಂತೆ ಒಬ್ಬರಿಂದೊಬ್ಬರು ರಂಗಲಾಟನೆ ಮಾಡುವರು. ಭಜನಾ ಹಾಡುಗಳನ್ನು ಪ್ರಾರಂಭ ಮಾಡುವಾಗ ಹಾಗೂ ಮುಕ್ತಾಯ ಮಾಡುವಾಗ ಜಯ ಜಯ ನಮಃ ಪಾರ್ವತಿ ಪತೇಃ ಎಂದು ಮುಖಂಡನಾದವನ್ನು ಹೇಳಿದರೆ, ಉಳಿದವರು ಹಾಗೇ ನುಡಿವರು ಜಾತ್ರೆಯಲ್ಲಿ ವಿಶೇಷವಾಗಿ ಭಜನಾ ಹೇಳಲು ಭಾಗವಹಿಸಿ ತಮ್ಮ ಹಿರಿಮೆ ಗರಿಮೆಯನ್ನು ತೋರಿಸುತ್ತಾರೆ.

ನಂದಿಕೋಲು ಕಲೆ ಪ್ರದರ್ಶನ

ಜಾತ್ರೆಯಲ್ಲಿ ನಂದಿಕೋಲು ಕುಣಿತ ವಿಶೇಷವಾಗಿರುತ್ತದೆ. ಉತ್ಸಾಹಿ ಯುವಕರು ನಂದಿಕೋಲನ್ನು ಹಿಡಿದುಕೊಂಡು ದಾರ್ ಧಕ್ಕ ಧಕ್ಕು ಎಂಬ ತಮಟೆಯ ನಾದಕ್ಕೆ ಲಯಬದ್ಧವಾಗಿ ಹೆಜ್ಜೆ ಹಾಕುತ್ತಾ ಆಗೊಮ್ಮೆ ಈಗೊಮ್ಮೆ ಕಂಬವನ್ನು ಮೇಲಕೆತ್ತಿ ಕುಲಕಿ ಝುಲಕ್ ಝುಲಕ್ ಸದ್ದು ಕೇಳಿಸುವಂತೆ ಮಾಡುತ್ತಾರೆ. ಆ ಸಂಬಾಳ ಬಡಿಯುತ್ತಾರೆ. ನುಡಿಸುವ ಕಲಾವಿದರು ಆಕಾಶಕ್ಕೆ ಧ್ವನಿ ಮುಟ್ಟುವಂತೆ ಸಂಬಾಳ ಬಡಿಯುತ್ತಾರೆ. ನಂದಿಕೋಲು ಜಾತ್ರೆ ಉತ್ಸವಗಳಲ್ಲಿ ಮಾತ್ರ ಹೊರಬಂದು ಮುಂದಿನ ಜಾತ್ರೆಯವರಿಗೆ ಅದೇ ದೇವಾಲಯಗಳ ಒಳಗೆ ಧೂಳು ಹೊದ್ದುಕೊಂಡು ಮೂಲೆಯಲ್ಲಿ ಇರುತ್ತವೆ.

ಕೋಲಾಟ ಪ್ರದರ್ಶನ ಕಲೆ

ಕೋಲುಗಳನ್ನು ಹೊಡೆಯುತ್ತ ಸೇರಿ ಆಡುವ ಆಟವೇ ಕೋಲಾಟ. ಇದು ದೈವೀ ಆರಾಧನೆಯ ಜನಪದ ಕಲೆ ಹಾಡು ಮತ್ತು ಸಂಗೀತಗಳನ್ನೊಳಗೊಂಡ ಆಕರ್ಷಕ ನೃತ್ಯ ಕೂಟ ಗೌರಿದೇವಿಯ ಜಾತ್ರೆಯಲ್ಲಿ ಭಕ್ತಾದಿಗಳಿಗೆ ಮನರಂಜನೆ ಕೊಡುವುದರ ಜೊತೆಗೆ ದೇವರ ಹೆಸರಿನಲ್ಲಿ ಕೋಲಾಟವಾಡಿ ಕೃತಾರ್ಥರಾದೇವು ಎಂದು ನಂಬಿ ಕೋಲು ಹಾಕುವ ವಿಶಿಷ್ಟ ಸಂಪ್ರದಾಯ ಈ ಜಾತ್ರೆಯಲ್ಲಿದೆ.

ಕೋಲಿಗೆ ತಕ್ಕ ಹೆಜ್ಜೆ ಹಾಕುವ ಕಾಲಿಗೆ ತಕ್ಕಂತೆ ಗೆಜ್ಜೆ ಕಟ್ಟಿ ಎಂಬ ಮಾತು ಕೋಲಾಟ ಕುರಿತು ಗಾದೆ ಇದೆ. ಕೋಲಾಟದಲ್ಲಿ ೮ ಇಲ್ಲವೇ ೨೪ ಜನರಿರುತ್ತಾರೆ. ಗಂಡಸರಾದವರು ಹೆಣ್ಣಿನ ವೇಷ ಹಾಕಿ ಮುಖಕ್ಕೆ ಬಣ್ಣ ಬಳೆದುಕೊಂಡು ತಲೆಗೆ ಕಿರೀಟ ಹಾಕಿಕೊಂಡು ಕೋಲಾಟವನ್ನು ಪ್ರಾರಂಭಿಸುತ್ತಾರೆ. ಭಕ್ತಾಧಿಗಳಿಗೆ ಇದು ಮನರಂಜನೆಯಾಗುವುದು.

ಹಾಡು ಆಡುವಾಗ ಕೋಲು ಆಡುವವರು ಕೈಕಾಲನ್ನು ನೋಡುವಂತಿರುತ್ತದೆ. ಹಾಡಿಗೆ ತಕ್ಕ ಸಂಗೀತ ಮತ್ತು ಸಂಗೀತಕ್ಕೆ ತಕ್ಕ ಕುಣಿತವಿರುತ್ತದೆ. ಜನರು ಜಾತ್ರೆಯಲ್ಲಿ ಪ್ರದರ್ಶನ ವೀಕ್ಷಿಸುವಂತೆ ಕೋಲಾಟದ ಲಯವನ್ನು ವೈವಿಧ್ಯದಿಂದ ನಾದ, ಕುಣಿತ, ಗತ್ತು, ನತ್ತು ಅದರ ಈ ಜಾತ್ರೆಯ ಕೋಲಾಟದಲ್ಲಿ ತಿಳಿಯಬಹುದಾಗಿದೆ.

ಕೊನೆ ಟಿಪ್ಪಣಿ

೧. ಸಿದ್ದೇಶ್ವರಿ ಎಂ ಎಸ್, ೨೦೦೪, ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪ್ರಭಾದೇವರ ಜನಕಲ್ಯಾಣ ಸಂಸ್ಥೆ, ಸಾಂಸ್ಥಾನ ಮಠ, ಸಂಡೂರ, ಪು-೫೬.

೨. ಕೌಶಲ್ಯಾ ಬಾಯಿ, ೨೦೧೧, ಭಾರತೀಯ ಹಬ್ಬಗಳು ಮತ್ತು ಜಾತ್ರೆಗಳು, ವಿಶ್ವಾಸ ಮುದ್ರಣಾಲಯ, ಬೆಂಗಳೂರು, ಪು-೬೪.

೩. ಶಿವಣ್ಣ ಮೀರಾಸಾಬಿಹಳ್ಳಿ, ೧೯೯೯, ಗೌರಸಮುದ್ರ ಮಾರಮ್ಮ ಮತ್ತು ಉಛ್ಛಾರ್ತಿ ಗೌರಮ್ಮ, ಪಟೇಲ್ ಪಬ್ಲಿಕೇಷನ್ಸ್, ಬೆಂಗಳೂರು, ಪು-೪೨.

❖❖❖

ಅಧ್ಯಾಯ : ಮೂರು

ಗೌರಿದೇವಿಗೆ ಹರಕೆ ಸಲ್ಲಿಸುವ ಆಚರಣೆಗಳು

ಅಧ್ಯಾಯ: ಮೂರು

ಗೌರಿದೇವಿಗೆ ಹರಕೆ ಸಲ್ಲಿಸುವ ಆಚರಣೆಗಳು

ಮಾನವನು ಸಂತೃಪ್ತಿಗಾಗಿ ದೇವರ ಧಾನ್ಯ, ಭಕ್ತಿ, ಪೂಜೆಗಳಿಂದ ದೇವರನ್ನು ಸಂತೃಪ್ತಿಯಾಗಿ ಇಡಬೇಕು ಎಂಬ ಭಾವನೆಯನ್ನು ಹೊಂದಿರುತ್ತಾನೆ. ಜಾತ್ರೆಗಳು ನಡೆಯುವ ಬಗ್ಗೆ ಅವುಗಳ ಆಚರಣೆಯ ಬಗ್ಗೆ ಅವರಲ್ಲಿ ತುಂಬ ನಂಬಿಕೆ ಇರುವುದು ಕಾಣುತ್ತೇವೆ. ಮನುಷ್ಯನು ತನ್ನಗೆ ಬಂದ ತೊಂದರೆಯ ನಿವಾರಣೆಗಾಗಿ ದೇವರನ್ನು ಭಕ್ತಿಯಿಂದ ಪೂಜಿಸುವ ಮೂಲಕ ತನ್ನಲ್ಲಿರುವಂತಹ ನೋವು ನಲಿವುಗಳನ್ನು ಹೊರಹಾಕುತ್ತಾನೆ.

ಕೆಲವೊಮ್ಮೆ ಭೀಕರ ಬರಗಾಲ, ಕ್ಷಾಮ, ಪ್ರಕೃತಿ ವಿಕೋಪ, ರೋಗ, ಸಾಂಕ್ರಮಿಕ ರೋಗ ಮುಂತಾದವುಗಳಿಂದ ತೊಂದರೆ ಆಗಬಹುದೆಂಬ ಭಯಭೀತಿಯಿಂದ ಜನರು ಹರಕೆ ಹೊತ್ತು ದೇವರನ್ನು ಸಂತೃಪ್ತಿಗೊಳಿಸುವ ಮೂಲಕ, ತಮ್ಮ ಇಷ್ಟಾರ್ಥಗಳ ಸಾಧನೆ ಮುಂತಾದವನ್ನು ಜನಪದೀಯರು ಜೀವನದುದ್ದಕ್ಕೂ ರೂಪಿಸಿಕೊಂಡು ಬಂದಿರುವುದನ್ನು ಪ್ರಸ್ತುತವಾಗಿರುವುದು ನಾವು ಕಾಣುತ್ತೇವೆ. ಈ ರೀತಿಯಾದ ರೂಢಿ ಸಾಂಪ್ರದಾಯಿಕ ಆಚರಣೆಗಳು ಇಂದು ಸಹ ಕಂಡುಬರುತ್ತವೆ. ಎಷ್ಟೇ ಆಧುನೀಕರಣ ಹೊಂದಿದ್ದರೂ ಇಂದಿಗೂ ಇಂತಹ ಆಚರಣೆಗಳನ್ನು ಕಾಣುತ್ತೇವೆ.

೩.೧ ಜಾತ್ರೆಯ ಪೂರ್ವ ಸಿದ್ದತೆ

ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ಪ್ರತಿವರ್ಷ ನಡೆಯುವ ಗೌರಿದೇವಿಯ ಜಾತ್ರೆ ವಿಶೇಷವಾದ ಮಹತ್ವವನ್ನು ಪಡೆದುಕೊಂಡಿದೆ. ಈ ಜಾತ್ರೆಯನ್ನು ನಡೆಸಬೇಕಾದರೆ ಗ್ರಾಮದ ಹಿರಿಯರು ಮತ್ತು ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳೆಲ್ಲರೂ ಸೇರಿ ನಿಗಧಿತ ದಿನವನ್ನು ನಿಗದಿಪಡಿಸುತ್ತಾರೆ. ನಿಗದಿಪಡಿಸಿದ ದಿನದಿಂದಲೇ ಜಾತ್ರೆಗೆ ಸಂಬಂಧಿಸಿದ ಯೋಜಿತ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗುತ್ತದೆ. ಜಾತ್ರೆ ಸಮೀಪಿಸುತ್ತಿದ್ದಂತೆ ಗ್ರಾಮಸ್ಥರಲ್ಲಿರೂ ಸೇರಿಕೊಂಡು ದೇವಸ್ಥಾನಕ್ಕೆ ಹಾಗೂ ತಮ್ಮ ತಮ್ಮ ಮನೆಗಳಿಗೂ ಸುಣ್ಣ

ಬಣ್ಣ ಬಳಿಯುವುದಕ್ಕೆ ಆರಂಭಿಸುತ್ತಾರೆ. ಜಾತ್ರೆಯ ಉದ್ದೇಶದಿಂದ ನೆಂಟರು ಬಂಧು ಬಳಗದವರನ್ನು ಕರೆಯುತ್ತಾರೆ. ಮನೆಗಳ ಮುಂದೆ ಹಸಿರು ತಳಿರು ತೋರಣ ಕಟ್ಟಿ ವಿದ್ಯುತ್ ದೀಪಗಳಿಂದ ಬೀದಿಗಳನ್ನು ಅಲಂಕರಿಸಿರುತ್ತಾರೆ.

೩.೨ ಜಾತ್ರೆಯ ಪವಾಡಗಳು

ಜಾತ್ರೆಗಳಲ್ಲಿ ದೇವರ ಮೂಲ ನೆಲೆ, ಹಿನ್ನಲೆ, ಐತಿಹಾಸಿಕ ಅಥವಾ ಇತಿಹಾಸ, ಪುರಾಣಗಳು, ಪವಾಡಗಳು ನಡೆಯುತ್ತಾ ಬಂದಿರುವುದು ನಾವು ಕಾಣುತ್ತೇವೆ. ಮನುಷ್ಯನು ಎಷ್ಟೇ ವೈಜ್ಞಾನಿಕವಾಗಿ ಬೆಳೆದರು ಸಹ ಪವಾಡಗಳನ್ನು ನಂಬುವುದು ಬಿಟ್ಟಿಲ್ಲ. ಯಾವುದೇ ವ್ಯಕ್ತಿ ಅನಾರೋಗ್ಯಕ್ಕೆ ತುತ್ತಾಗುದೇಗ ಆರೋಗ್ಯದಲ್ಲಿ ವ್ಯತ್ಯಾಸಗಳು ಉಂಟಾಗಾದ ಮೊದಲು ಹೋಗುವುದು ದೇವರ ಬಳಿ ನಂತರ ವೈದ್ಯರ ಬಳಿ ಹೋಗುತ್ತಾರೆ. ದೇವಿಯು ಬಲಭಾಗದಿಂದ ಹೂವನ್ನು ಕೊಟ್ಟರೆ ಜನರಿಗೆ ಒಳ್ಳೆಯದು ಎಂಬ ನಂಬಿಕೆ ಜನಪದರಲ್ಲಿ ಇಂದಿಗೂ ಬೇರೂರಿದೆ. ಇದ್ದು ದೇವರ ಹೇಳಿಕೆಯನ್ನು ತಪ್ಪದೇ ಎಷ್ಟೇ ಕಷ್ಟವಾದರೂ ಅನುಸರಿಸುವುದ ಗ್ರಾಮೀಣ ಜನಪದರೇ ಹೆಚ್ಚು ಎಂಬುದು ಈ ಸಮೀಕ್ಷೆಯ ಮೂಲಕ ತಿಳಿಯಲಾಗಿದೆ.

ಜನರ ಇಂದು ಪವಾಡಗಳ ಬಗ್ಗೆ ನಂಬಿಕೆ ಕಡಿಮೆಯಾಗಿ ಶೇ ೨೮ ರಷ್ಟಿದೆ. ಶೇ. ೭೨ ಜನರು ಪವಾಡಗಳನ್ನು ನಂಬದೇ ಅವರ ವೈಜ್ಞಾನಿಕ ವಿಚಾರಣೆಗೆ ಮುಂದಾಗುತ್ತಿದ್ದಾರೆ ಎಂದು ಸಮೀಕ್ಷೆಯ ವರದಿ.

೩.೩ ಅವಿವಾಹಿತರ ಹರಕೆಗಳು

ಕಂಕಣ ಬಲ ಕೂಡಿ ಬರಲೆಂದು ಯುವತಿಯರು ದಿಂಡುರುಳು ಮತ್ತು ಆರತಿ ಹಿಡಿಯುವ ಹರಕೆ ಅರ್ಪಿಸುತ್ತಾರೆ. ಮಕ್ಕಳ ಫಲ ಲಭಿಸಲಿ ಎಂದು ಮಕ್ಕಳಿಲ್ಲದವರು ಹೂವಿನ ತೊಟ್ಟಿಲು ಹರಕೆ ತೀರಿಸುತ್ತಾರೆ. ದೇವಿಗೆ ಹರಕೆ ಮತ್ತು ಆರತಿ ಹಿಡಿಯುವ ಮಹಿಳೆಯರೆಲ್ಲರೂ ಉಪವಾಸದಿಂದ ಹರಕೆಗಳನ್ನು ಅರ್ಪಿಸುವರು. ಹೆಣ್ಣು ದೇವತೆಯ ಜಾತ್ರೆಯಾದರೂ ಇಲ್ಲಿ ಯಾವುದೇ ಪ್ರಾಣಿಗಳನ್ನು ಬಲಿಕೊಡುವುದಿಲ್ಲ. ಬದಲಾಗಿ ಹಣ್ಣು ತರಕಾರಿಗಳನ್ನು ಮಾತ್ರ ಅರ್ಪಿಸುತ್ತಾರೆ. ಜಾತ್ರೆಗೆ ಪಕ್ಕದ ಆಂಧ್ರದ ಮಹಿಳೆಯರು ಪಾಲ್ಗೊಂಡು ಪೂಜೆ ಸಲ್ಲಿಸುವರು.

ಐನೋರಿಗೆ, ಪೂಜಾರಿಗಳಿಗೆ ನಮಸ್ಕಾರ: ದೇವರಿಗಿಂತ ಹೆಚ್ಚಾಗಿ ಐನೋರ ಕಾಲಿಗೆ ನಮಸ್ಕರಿಸುವುದೇ ಗೌರಿಯ ಉತ್ಸವ ಮೂರ್ತಿ ಹೊತ್ತವರ ಕಾಲಿಗೆ ಯಾವೊಬ್ಬ ಭಕ್ತನೂ ನಮಸ್ಕರಿಸುವುದಿಲ್ಲ. ಗೌರಿಯ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ನಂದಿಕೋಲು, ಕೋಲಾಟ, ಭಜನೆ, ಜನಪದವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಗುತ್ತದೆ.

೩.೪ ಜಾತ್ರೆಯ ಸಂದರ್ಭದಲ್ಲಿ ಮಹಿಳೆಯ ಮಡಿ ಮೈಲಿಗೆ ಆಚರಣೆ

ಗ್ರಾಮೀಣ ಭಾಗದ ಜನರಲ್ಲಿ ಇಂದಿಗೂ ಸಹ ಆಚರಣೆಗಳನ್ನು ಕಾಣುತ್ತೇವೆ. ಜಾತ್ರೆಗಳಲ್ಲಿ ಮಹಿಳೆಯರು ಕೆಲವು ನಿಯಮಗಳನ್ನು ಅನುಸರಿಸಬೇಕು. ಸ್ತ್ರೀಯರು ಮುಟ್ಟಾದಾಗ ದೇವಸ್ಥಾನಳಿಂದ ದೂರ ಇದು. ಪೂಜೆ ಕಾರ್ಯಕ್ರಮಗಳಿಗೆ ಅನರ್ಹರು.

ಜಾತ್ರೆಯ ಸಂಧರ್ಭದಲ್ಲಿ ಋತು ಚಕ್ರ ಒಳಗಾದ ಸ್ತ್ರೀಯರು ಮೈಲಿಗೆ ಎಂದು ಪರಿಗಣಿಸಿ ಅವರನ್ನು ಮೂರು ಅಥವಾ ಐದು ದಿನಗಳ ಕಾಲ ದೂರ ಇರುವಂತೆ ನಿಷೇಧಗಳಿವೆ.

ದೇವಸ್ಥಾನ ಹಾಗೂ ಇತರೆ ಸ್ಥಳಗಳಲ್ಲಿ ಮಹಿಳೆಯರು ಬರುವಂತಿಲ್ಲ ಜಾತ್ರೆಗಳಲ್ಲಿ ಇಂತಹ ಸ್ತ್ರೀಯರನ್ನು ಬರುವಂತಿಲ್ಲ. ಜಾತ್ರೆಯ ಆಚರಣೆ ಮುಗಿದ ನಂತರ ಒಳಗೆ ಬರಬಹುದು ನಿಷೇಧಗಗಳು ಇವೆ ಎಂದು ಈ ಸಂದರ್ಶನದ ಮೂಲಕ ತಿಳಿದುಬಂದಿದೆ.

ಮಹಿಳೆಯರ ದೇವಿಯ ನಂಬಿಕೆ ಆಚರಣೆ ಮುಖ್ಯವಾಗಿ ಪೂರ್ಣ ಬೆಳವಣಿಗೆಯಾಗಿ ಬಂದಿರುತ್ತವೆ. ಮೈಲಿಗೆಯ ಸಂದರ್ಭದಲ್ಲಿ ಯಾವುದೇ ಕಾರ್ಯಗಳು ಮತ್ತು ಆಚರಣೆಗಳು ಮಾಡುವಂತಿಲ್ಲ. ಮನೆಯಲ್ಲಿ ಕಷ್ಟ ದುಃಖ ಪರಿಸ್ಥಿತಿಗೆ ತಕ್ಕಂತೆ ಆಚರಣೆಗಳು ಮಹಿಳೆಯರಲ್ಲಿ ತಿಳಿಯಬಹುದು.

೩.೫ ಒಂದೇ ವಂಶದವರಿಂದ ಪೂಜೆ

ಗ್ರಾಮೀಣ ಜನರ ದೇವರ ಆಚರಣೆಗೆ ಇಂತವರೆ ವಂಶ ಪರಂಪರಾಗತವಾಗಿ ಪೂಜೆಗಳನ್ನು ಮಾಡಿಕೊಂಡು ಬಂದಿರುವುದು ಕಂಡು ಬರುತ್ತದೆ. ಹಾಗೇ ನಿಯಮಗಳು ಸಹ ಇವೆ. ಗೌರಿದೇವಿಗೆ ಲಿಂಗಾಯಿತರು ಪೂಜೆಯನ್ನು ವಂಶ ಪರಂಪರಾಗತವಾಗಿ ಮಾಡಿಕೊಂಡು ಬಂದಿದ್ದಾರೆ. ಏಕೆಂದರೆ ಗೌರಿದೇವಿಯು ಸಸ್ಯಾಹಾರಿ ದೇವರು ಆದ್ದರಿಂದ ಲಿಂಗಾಯಿತರು ಈ ದೇವಿಯ ಆರಾಧಕರು ಈವರೆಗೆ ಪೂಜೆಯನ್ನು ಅದೆ ಅವರೇ ವಂಶದವರು ಬಿಟ್ಟು ಬೇರೆ ಯಾರು ಸಹ ಪೂಜೆ ಮಾಡುವುದಿಲ್ಲ. ಇಲ್ಲಿಗೆ ದೇವರು ಬಂದು ನೆಲೆಸದ ಕ್ಷಣದಿಂದ ಇಂದಿನವರೆಗೆ ಅವರೇ ಮಾಡಿಕೊಂಡು ಬರುತ್ತಾರೆ.

ಗೌರಿದೇವಿಯ ಜಾತ್ರೆಯಲ್ಲಿ ತನ್ನದೇ ಯಾದ ಸಮುದಾಯಗಳು ಆಚರಣೆಗಳನ್ನು ಮಾಡುತ್ತಾರೆ. ಗೊತ್ತಾದ ತಳವಾರ, ಕುಂಬಾರ, ಪೂಜಾರಿಗಳು ವಂಶ ಪರಂಪರಾಗತವಾಗಿ ನಡೆಯುವ ಆಚರಣೆಗಳಂತೆ ಗೌರಿದೇವಿಯ ಜಾತ್ರೆಯಲ್ಲಿ ನಡೆಯುತ್ತದೆ. ಪೂರ್ವದಲ್ಲಿ ಗಂಗ ಪೂಜಾ ಗುಡಿ ತುಂಬುವುದು ಸಂಪ್ರದಾಯಿಕ ವಿಚಾರಗಳು ವಿಷಯಗಳನ್ನು ಹೇಳಿದ್ದಾರೆ.

೩.೬ ಜಾತ್ರೆಯ ಕುರಿತಾಗಿರುವ ನಂಬಿಕೆಗಳು

ಜಾತ್ರೆಗಳಲ್ಲಿ ಅನೇಕ ಕುಟುಂಬಗಳು ಭಾಗವಹಿಸಯತ್ತವೆ. ತನ್ನದೇ ಆದಂತಹ ಪಾತ್ರ ನಿರ್ವಹಿಸುತ್ತವೆ. ಪ್ರತಿ ಕುಟುಂಬಕ್ಕೆ ತನ್ನದೇ ಆದಂತಹ ನಂಬಿಕೆಗಳು ಇರುತ್ತವೆ. ಎಲ್ಲಾ ಭಕ್ತಿಯಿಂದ ಭಾಗವಹಿಸಿ ದೇವರ ಸೇವೆ, ಮಾಡುವುದರಿಂದ ದೇವರು ನಮಗೆ ಎಲ್ಲಾ ರೀತಿಯಾದ ಸುಖ ಶಾಂತಿ ನೆಮ್ಮದಿ ನೀಡಿ ಮಳೆ ಬೆಳೆ ಆಗುತ್ತದೆ ಮತ್ತು ದನಕರುಗಳನ್ನು ದವಸ, ಧಾನ್ಯಗಳನ್ನು ಹಾಗೂ ಸಮೃದ್ದಿಯನ್ನು ನೀಡುತ್ತಾಳೆ. ತಾಯಿ, ಎಲ್ಲಾರನ್ನು ಕಾಪಾಡುತ್ತಾಳೆ. ಎಂಬ ನಂಬಿಕೆ ಇನ್ನು ಜಾತ್ರೆಗಳಲ್ಲಿ ದೇವರಲ್ಲಿ ಭಕ್ತಿಯಿಂದ ಸೇವೆ ಮಾಡಿದರೆ ನಮಗೆ ಒಳ್ಳೆಯದು ಆಗುತ್ತದೆ ಎಂಬ ಅಭಿಪ್ರಾಯ ಜನರಲ್ಲಿ ಇದೆ.

ದೇವಿಯ ಆರಾಧನೆಯಿಂದ ತಮಗಾಗ ಬಹುದಾದ ಕಷ್ಟ ಮತ್ತು ಗ್ರಾಮಕ್ಕೆ ಸಮಸೃದ್ಧಿಯ ಫಲವಂತಿಕೆಯನ್ನು ನೀಡುತತಾಳೆ ಎಂಬ ನಂಬಿಕೆ ಹಳ್ಳಿಗಾಡಿನ ಜನರಲ್ಲಿ ಇರುತ್ತದೆ ಆದ್ದರಿಂದ ಇಂತಹ ಸ್ತ್ರೀ ದೈವಗಳ ಜಾತ್ರೆಗಳನ್ನು ಮಾಡುತ್ತಾರೆ. ಗೌರಿದೇವಿಗೆ ಸಾಮಾನ್ಯವಾಗಿ ಜನರು ತಮ್ಮ ಜೀವನದಲ್ಲಿ ಒಳ್ಳೆಯದಾದರೇ ದೇವಿಗೆ ನತ್ತು, ಸೀರೆ, ದೇವಿಯ ಮೂರ್ತಿ, ಗಂಟೆ, ದ್ವಾರಬಾಗಿಲು ಇತ್ಯಾದಿಗಳನ್ನು ಜನರು ಹರಕೆ ಕಟ್ಟಿಕೊಳ್ಳುತ್ತಾರೆ.

೩.೭ ಭಕ್ತಾದಿಗಳಲ್ಲಿರುವ ನಂಬಿಕೆಗಳು

ನಂಬಿಕೆ ಎಂದರೇ ಮಾನಸಿಕ ಒಪ್ಪಿಗೆ ಎಂದರ್ಥ ಇಂತಹ ಜನಪದರ ಜೀವನಾಡಿ ಜಾತ್ರೆ ಸಂತೋಷಕ್ಕಾಗಿ ನಡೆಸುವಂತಹ ಜಾತ್ರೆಗಳು ಜನಸಾಮಾನ್ಯರು ಭಿನ್ನಾಭಿಪ್ರಾಯಗಳನ್ನು ನಂಬಿಕೆಗಳನ್ನು ತಿಳಿಸುತ್ತದೆ. ಜಾತ್ರೆಗಳನ್ನು ಮಾಡುವುದರಿಂದ ಸಕಾಲಕ್ಕೆ ಮಳೆ, ಬೆಳೆ, ಆರೋಗ್ಯ, ಆಯಷ್ಯ ಕಾಪಾಡುತ್ತಾಳೆ ಎಂಬ ನಂಬಿಕೆ ಇದೆ. ಅನಾದಿಕಾಲದಿಂದಲೂ ಈ ನಂಬಿಕೆಗಳು ಜನರಲ್ಲಿ ಇರುವುದು ನಾವು ಕಾಣಬಹುದಾಗಿದೆ. ಇಂತಹ ನಂಬಿಕೆ ಜನಪದರಲ್ಲಿ ದೇವಿಯ ಆರಾಧನೆಯಲ್ಲಿ ಪ್ರಮುಖವಾಗಿ ಗ್ರಾಮ ಜನಪದರಲ್ಲಿ ಕಂಡುಬರುವುದು ಸಾಮಾನ್ಯವಾಗಿದೆ.

ದೀಪ ಬೆಳಗುವುದು

ಗ್ರಾಮೀಣ ಜನರು ದೇವಿಗೆ ಹರಕೆ ಓಪ್ಪಿಸುವ ಆಚರಣೆಯಾಗಿ ಮಾಡುವುದು ಇದು ಎಲ್ಲೊಡೆ ಕಂಡುಬರುತ್ತದೆ. ಇದು ಮಹಿಳೆಯರು ಮಾತ್ರ ದೀಪದಾರತಿ ಬೆಳಗುವ ಆಚರಣೆಯಾಗಿದೆ. ಹತ್ತಿಯನ್ನು ಹೊಸೆದು ಅದರಲ್ಲಿಟ್ಟು ತುಪ್ಪ ಅಥವಾ ಎಣ್ಣೆಯ ಸಹಾಯದಿಂದ ದೀಪವನ್ನು ಬೆಳಗಿಸುತ್ತಾರೆ. ಈ ದೀಪದ ಸಹಾಯದಿಂದ ದೇವಿಗೆ ಆರತಿ ಉರಿಸುತ್ತಾರೆ. ಊರಿನ ಹೆಣ್ಣುಮಕ್ಕಳು ದೀಪಗಳನ್ನು ತಯಾರಿಸಿ ತಟ್ಟೆಯಲ್ಲಿಟ್ಟು ತಂದು ಗ್ರಾಮದ ಗೌರಿದೇವಿಯ ಬಳಿ ಸಾಮೂಹಿಕವಾಗಿ ಆರತಿ ಬೆಳಗುವುದು ಕಂಡುಬರುತ್ತದೆ.

ಊರಿನ ಎಲ್ಲಾ ಹೆಣ್ಣುಮಕ್ಕಳು ದೀಪಾರತಿಗಳನ್ನು ತಂದು ಸಾಮೂಹಿಕ ಆರತಿ ಬೆಳಗಬೇಕಾಗುತ್ತದೆ. ಬರಿ ಕಷ್ಟಗಳೇ ತುಂಬಿರುವ ಅಂಧಕಾರದ ಬಾಳಿಗೆ ಸುಖವೆಂಬ ಸುಜ್ಞಾನದ ಬೆಳಕುವ ದೀಪ ಹಚ್ಚಿ ಬದುಕ್ಕನು ಹಸನುಗೊಳಿಸು ಎಂಬ ನಂಬಿಕೆ ಈ ಆಚರಣೆಯಾಗಿದೆ. ಆನಪದರ ನಂಬಿಕೆಯಲ್ಲಿ ದೀಪದಾರತಿಯ ಸಂಕೇತ ಕತ್ತಲಿನಿಂದ ಬೆಳಕಿನ ಕಡೆಗೆ ಸಾಗುವುದಾಗಿದೆ ಇದನ್ನು ದೇವಿಯ ಆರಾಧನೆಯಲ್ಲಿ ಜನಪದರು ಕಾಣುತ್ತಾರೆ.

ಮಂಗಳಾರತಿ

ಜಾತ್ರೆಯ ಮೂರನೆಯ ದಿನದ ಕಾರ್ಯ ಮಂಗಳಾರತಿ, ಮುಗಿದ ನಂತರ ಪೂಜಾರಿಗಳು ಭಕ್ತರು ಗೌಡರು ಗ್ರಾಮಸ್ಥರು ನೆಂಟರು ಪೂಜೆಯನ್ನು ಮುಗಿಸಿ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಅನ್ನದ ಎಡೆಯನ್ನುಟ್ಟು ಪೂಜಿಸುವುದು ಜನಪದರ ವಾಡಿಕೆ. ಜಾತ್ರೆಯ ಎಲ್ಲಾ ಕಾರ್ಯಗಳು ಯಾವುದೇ ಅಡೆತಡೆಗಳಿಲ್ಲದೆ ಯಶಸ್ವಿಯಾಗಿ ನಡೆಯುತ್ತವೆ. ಸಂಕೇತವಾಗಿ ಮತ್ತು ದೇವಸ್ಥಾನಗಳಲ್ಲಿ ಎಲ್ಲಾ ಪೂಜೆಗಳು ನಡೆದ ನಂತರ ದೇವಿಗೆ ಮಂಗಳಾರತಿಯನ್ನು ಸುಮಾರು ರಾತ್ರಿ ಸಮಯದಲ್ಲಿ ಆಚರಿಸುತ್ತಾರೆ. ಏಕೆಂದರೆ ಮಂಗಳಾರತಿಯ ನಂತರ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡುವುದದರೊಂದಿಗೆ ಜಾತ್ರೆಯ ದಿನದ ಮುಕ್ತಾಯವಾಗುತ್ತದೆ.

ಗಂಗೆ ಪೂಜೆ

ಆನಪದರ ದೃಷ್ಟಿಯಲ್ಲಿ ಗಂಗೆ ಎಂಬುದು ರೈತರ ಬಾಳಿನ ಜೀವನಾಡಿ ಇದ್ದಂತೆ ಆದ್ದರಿಂದ ಜನಪದರು ಗಂಗೆಯನ್ನು ಪೂಜಿಸುವುದು ಸರ್ವೆಸಾಮಾನ್ಯ ಇಲ್ಲಿ ಗೌರಿದೇವಿಯ ಗಂಗೆ ಸ್ನಾನಕ್ಕಿಂತ ಮೊದಲು ಗುಡಿಯಲ್ಲಿ ಪೂಜೆಯನ್ನು ಮಾಡಿರುತ್ತಾರೆ. ನಂತರ ಬೀದಿಯಲ್ಲಿ ಮೂಲಕ ದೇವಿಯ ಹೊಳೆ ಸ್ನಾನಕ್ಕೆ ಹೊರಡುತ್ತಾಳೆ. ವಾದ್ಯ ಹಲಗೆ ಡೊಳ್ಳುಗಳ ಸಯಹೋಗ ಗೌರಿ ಹಾಡುಗಳೊಂದಿಗೆ ಬಿರುಸಿನಿಂದ ಹೊರಡುತ್ತಾಳೆ. ದೇವಿಯು ಹೊಳೆದಡದಲ್ಲಿ ಕುಳಿತಾಗ ಈ ಸೀರೆಗಳನ್ನು ಹಾಸಿ ನಂತರಹೊಳೆ, ನೀರನ್ನು ಸೀರೆ,ಮೇಲೆ ಚಿಮುಕಿಸಿ ಸೂರ್ಯನ ಕಡೆ ದೇವಿಯ ಮೂರ್ತಿಗೆ ಮಂಗಳಾರತಿ ಮಾಡಿ ಮೇಲೆತ್ತುತ್ತಾರೆ.

ಗಂಗೆ ಪೂಜೆ ಮಾಡುವ ಸಂಧರ್ಭದಲ್ಲಿ ಜನಪದರು ಮೂರು ಕಲ್ಲುಗಳನ್ನು ಇಟ್ಟು ಪೂಜಿಸುತ್ತಾರೆ. ಈ ಕಲ್ಲುಗಳ ಪ್ರತೀ ಏನೆಂದರೇ ಇವರ ದೃಷ್ಟಿ ಯಲ್ಲಿ ಭೂಮಿತಾಯಿ, ಮಳೆರಾಯ, ಬೆನವಣ್ಣ ಕ್ರಮವಾಗಿ ಹೇಳುವುದಾದರೆ, ಸೃಷ್ಟಿಸುವ,ಪೋಷಿಸುವ, ರಕಷಿಸುವ ಈ ಮೂರು ಕಲ್ಪನೆ, ಜನಪದರಲ್ಲಿ ಇದೆ. ಆನಪದರಿಗೆ ಪ್ರಮುಖವಾಗಿ ಬೇಕಾಗಿರುವುದು ಮಳೆ, ಭೂಮಿತಾಯಿ ಅತಿ ಮುಖ್ಯವಾಗಿರುವುದರಿಂದ ಪರಿಸರದಲ್ಲಿ ಇರುವ ಕಲ್ಲು, ಮರಗಳಲ್ಲಿ ದೇವರನ್ನು ಕಾಣುವ ಗುಣ ದೇವಿಯ ಗಂಗೆ ಪೂಜೆಯಲ್ಲಿ ಈ ಮೂರು ಅಂಶಗಳು ಪ್ರಮುಖವಾಗಿ ಕಂಡುಬರುತ್ತವೆ ಹಾಗಾಗಿ ಈ ರೀತಿ ಬರುವಾಗ ದೇವಿಗೆ

ಊರಿನ ಮುಖಂಡರಿಂದ ನೀವಳಿಸಿ ಕಾಲಲ್ಲಿ ತುಳಿಯುತ್ತಾರೆ. ದೇವಿಗೆ ಅಲಂಕಾರ ಪ್ರಿಯಳಾಗಿ ಮದುಮಗಳಂತೆ ಕಾಣುವ ದೇವಿಗೆ ಓಕಳಿಯಿಂದ ನಿವಾಳಿಸಿ ದೃಷ್ಟಿ ತೆಗೆಯುತ್ತಾರೆ.

ಈ ರೀತಿಯಾಗಿ ಗಂಗೆ ಸ್ನಾನದಿಂದ ದೇವಿಯು ಗುಡಿಯನ್ನು ಸೇರುವವರೆಗೂ ಅನೇಕ ಸಂಪ್ರದಾಯಗಳನ್ನು ಬಲಿಗಳನ್ನು ಕೊಡುವುದರ ಮೂಲಕ ಆಚರಣೆ ಕಾರ್ಯ ಮುಂದುವರೆಯುತ್ತದೆ.

೩.೮ ಪೂಜಾ ವಿಧಾನ

ಗಂಗೆ ಪೂಜೆಯಲ್ಲಿ ಗೌರಿದೇವಿ ಸೌಮ್ಯ ಸ್ವಾಭಾವದ ದೇವಿಯಾಗಿರುವುದರಿಂದ ಈ ದೇವಿಗೆ ಸಿಹಿ ಎಡೆ, ಅನ್ನ ಬೆಲ್ಲದ ಇಟ್ಟು ನೈವೇದ್ಯ ಮಾಡುತ್ತಾರೆ. ಪೂಜಾರಪ್ಪ ತಂದ ಹೊಸ ಕೊಲು ಮಣಿನ ಕುಂಭದಲ್ಲಿ ನೀರನ್ನು ತುಂಬಿಸಿ ಅದಕ್ಕೆ ಕಂಕಣಕಟ್ಟಿ ಐದು ಮುತ್ತೈದೆ ಮಹಿಳೆಯರ ಕೈಗೆ ಕಂಕಣ ಕಟ್ಟುತ್ತಾರೆ.

ದೇವಿ ಪೂಜಾರಿಗಳು

ವಂಶಪಾರಂಪರ್ಯವಾಗಿ ನಡೆದು ಬಂದು ಅವರ ಸಂತತಿ ನಿಂತು ಹೋದ ಪ್ರಯುಕ್ತ ಹೆಣ್ಣು ಸಂತತಿಯವರೇ ಪೂಜೆಯನ್ನು ಮಾಡುವ ಸಂಪ್ರದಾಯವಿದೆ.

ಹೊಸ ವಸ್ತು ಅರಿಶಿನ ಪರಿಕರಗಳನ್ನು ಕೊಡುವ ಪದ್ದತಿಯನ್ನು ಗ್ರಾಮದ ಗೌಡರೇ ನಡೆಸಿಕೊಂಡು ಬಂದಿದ್ದಾರೆ.

ದೇವಿಯನ್ನು ವೀರಶೈವರು ಮಾತ್ರ ಹೊರುವ ಪದ್ದತಿ ಇದೆ. ಹುಣ್ಣಿಮೆಯ ದಿನ ಏಳು ಜನ ಮುತ್ತೈದೆಯರು ಪಂಚಾಮೃತದಿಂದ ಗೌರಮ್ಮನ ಕಲಶವನ್ನು ತೊಳೆಯುತ್ತಾರೆ. ಗೌರಮ್ಮನ ಆರತಿಗೆ ಎಣ್ಣೆ ಹಾಕುವವರು ತಳವಾರರಾಗಿದ್ದಾರೆ.

ಗೌರಿದೇವಿಯು ಮೈಲಾರ ದೇವರ ದೇವಾಲಯದಿಂದ ಹೊರಟು ವೀರಭದ್ರ ಸ್ವಾಮಿಯ ದೇವಾಲಯಕ್ಕೆ ಬಂದು ತನ್ನ ಮಗನಾದ ವೀರಭದ್ರಸ್ವಾಮಿಯೊಂದಿಗೆ ಗೌರಿದೇವಿಯು ತನ್ನ ತವರು ಮನೆಗೆ ಬರುವ ಸಂಪ್ರದಾಯ ನಡೆದುಬಂದಿದೆ. ಹೀಗೆ ಗೌರಿದೇವಿಯು ಬರುವಾಗ ಶುಭ ಸೂಚಕವಾಗಿ ಮುತ್ತೈದೆ ಹೆಣ್ಣು ಮಕ್ಕಳು ಅಪರಿಮಿತ ಸಂಖ್ಯೆಯಲ್ಲಿ ಇಕ್ಕಲಗಳಲ್ಲಿ ಆರತಿಗಳನ್ನು ಹಿಡಿದು ಸಡಗರದಿಂದ ಎದುರುಗೊಳ್ಳುತ್ತಿರುವುದನ್ನು ನೋಡುವುದು ಮನಸ್ಸಿಗೆ ಆನಂದವನ್ನುಂಟು ಮಾಡುತ್ತದೆ.

ಅನೇಕ ಭಕ್ತಾದಿಗಳು ದಿಂಡುರುಳುಗಳನ್ನು ಉರುಳುತ್ತಾರೆ. ಗೌರಿ ದೇವಿಗಿಂತ ಮುಂದೆ ಮಠದಯ್ಯನವರು ಬರುತ್ತಾರೆ. ಮಡದಯ್ಯನವರೆಂದರೆ ಗುರುವು ಗುರುವಿನ ಮಾರ್ಗದರ್ಶನವೇ

ಹರನನ್ನು ಕಾಣುವುದಕ್ಕೆ ದಾರಿದೀಪ ಎಂಬ ಅರ್ಥವನ್ನು ಇದರಿಂದ ನಾವು ತಿಳಿಯಬಹುದಾಗಿದೆ. ಗುರುವಿಲ್ಲದೇ ಅರಿವಿಲ್ಲ ಎಂಬ ಸತ್ಯ ತಿಳಿದುಬರುತ್ತದೆ.

ಮಾನವನು ಗುರುವಿನಿಂದಲೇ ಮುಕ್ತ ಮಾರ್ಗವನ್ನು ಪಡೆಯುತ್ತಾನೆ. ಗೌರಿದೇವಿಯು ಬರುವಾಗ ಗ್ರಾಮದ ಹೆಣ್ಣು ಮಕ್ಕಳು ಸೋಬಾನೆ ಪದವನ್ನು ಹಾಡುತ್ತಾ ಗೌರಿಯ ಜೊತೆಯಲ್ಲಿ ಬರುವ ಪದ್ಧತಿ ಹಿಂದಿನಿಂದ ನಡೆದುಬಂದಿದೆ.

೩.೯ ದಾಸೋಹ

ಜಾತ್ರೆಯ ಸಮಯದಲ್ಲಿ ಆಯಾ ಗ್ರಾಮದ ಪ್ರಮುಖರೆಲ್ಲರೂ ಸೇರಿ ಜೀವನ ಹೆಸರಿನ ವಂತಿಗೆಯನ್ನು ದವಸ ಧಾನ್ಯಗಳ ರೂಪದಲ್ಲಿ ಸಂಗ್ರಹಿಸುತ್ತಾರೆ. ಇದರಿಂದ ಜಾತ್ರೆಗೆ ಬೇರೆ ಬೇರೆ ಸ್ಥಳಗಳಿಂದ ಬಂದ ಎಲ್ಲಾ ಭಕ್ತರಿಗೆ ಊಟ ಬಡಿಸುವುದರ ಮೂಲಕ ದೇವರ ಭಕ್ತಿಗೆ ಪಾತ್ರರಾಗುತ್ತಿರುವುದು. ಒಂದು ಆಚರಣೆಯಾಗಿದೆ. ಇಂತಹ ಒಂದು ವಿಶೇಷವಾದ ಹರಕೆ ಅಥವಾ ಸೇವೆಗೆ ದಾಸೋಹ ಇಲ್ಲದೆ ಅನ್ನಸಂತರ್ಪಣೆ ಎಂದು ತಿಳಿಯಬಹುದು.

ಗ್ರಾಮದ ಜನರು ತಾವು ನೆಡೆಸಿಕೊಂಡು ಬರುವ ದೇವರ ಜಾತ್ರೆ ವ್ರತವ ಫಲವಾಗಿಬರುವ ಧನ ದ್ರವ್ಯಗಳನ್ನೇ ಪವಿತ್ರಭಾವನೆಯಿಂದ ಪರಿಗಣಿಸಿದರು. ಇದರಿಂದ ಜನರು ವಿಶಿಷ್ಟವಾದ ಪದ್ಧತಿಯೊಂದು ಜಾರಿಗೆ ತಂದಿದ್ದಾರೆ. ಅದೇ ಅನ್ನಸಂತರ್ಪಣೆ, ಪದ್ಧತಿಯಾಗಿ ಜನಪ್ರಿಯತೆಯನ್ನು ತಡೆದುಕೊಂಡಿದೆ. ಇದರಿಂದ ತನು–ಮನ–ಭವನೆಗಳು ಪರಿವರ್ತನೆಯಾಗಿ ಮನಸ್ಸು ಶುದ್ಧಿಯಾಗುತ್ತದೆ ಎಂಬ ಭಾವನೆಯು ಮೂಡತೊಡಗಿತು. ಈ ತರಹದ ಸಾಮಾಜಿಕ ಪರಿವರ್ತನೆಯಿಂದ ಸಮಾಜದಲ್ಲಿ ಹೊಸ ಚಿಂತನೆಯ ಬಂದು ತಿಳಿಯುವುದು. ಗ್ರಾಮದ ಜನರಲ್ಲಿ ಸಂಪೂರ್ಣವಾಗಿ ದಾಸೋಹದಂತಹ ಸದಚಾರ ಸಂದನ್ನಶೀಲತೆಗೆ ತಮ್ಮನ್ನು ಅರ್ಪಿಸಿಕೊಂಡರು. ಆರ್ಥಿಕ ಮೂಲವಾಗಿದ್ದ ದಾನವನ್ನು ದಾಸೋಹದ ಮೂಲಕ ದೇವಿಗೆ ಗ್ರಾಮದ ನೀಡುತ್ತಾರೆ.

ಜಾತ್ರೆ ಮಹೋತ್ಸವದ ಕೊನೆಯಲ್ಲಿ ನಡೆಸುವ ಆಚರಣೆಗಳಲ್ಲಿ ಜಾತ್ರೆಯ ವಿವಿಧ ಬಗೆಯ ಆಚರಣೆಗಳಾದ ಕೊನೆಯ ದಿನ ಓಕೂಳಿಯಾಡುವುದು ಪ್ರಮುಖವಾಗಿದೆ.

೩.೧೦ ಪೂಜಾರಿ ಕಾರ್ಯ

ಪೂಜಾರಿಯನ್ನು ಗೌರಾದೇವತೆಯ ಪ್ರತಿನಿಧಿಯನ್ನಾಗಿ ಪರಿಗಣಿಸಲಾಗುತ್ತದೆ. ಜನರು ಪೂಜಾರಿಯನ್ನು ವೀರಶೈವ ಜಂಗಮ, ಸ್ವಾಮಿ, ಅಯ್ಯ ಇತ್ಯಾದಿ ಪದಗಳಿಂದ ಕರೆಯುತ್ತಾರೆ. ಜಾತ್ರೆ ಸಮಯವನ್ನು ಹೊರತು ಪಡಿಸಿ ಪ್ರತಿ ದಿನ ಗೌರಿದೇವಿ ಪೂಜೆಗಾರಿಕೆಯನ್ನು ನೆಡೆಸಿಕೊಂಡು ಬರುವ ಕೆಲಸ ಈ ಪೂಜಾರಿಯದಾಗಿದೆ. ಪೂಜಾರಿಕೆಯನ್ನು ನಡೆಸಿಕೊಂಡು ಬಂದಿರುವವರು ವೀರಶೈವ ಜಂಗಮರು. ದೇವಿಗೆ ವಿಶೇಷವಾಗಿ ಪೂಜೆಯನ್ನು ಸಲ್ಲಿಸುವುದು

ಇವನ ಜವಬ್ದಾರಿಯಾಗಿದೆ. ಈತನು ನಿತ್ಯ ಸ್ನಾನಾದಿಗಳನ್ನು ಮುಗಿಸಿ ಶುದ್ಧ ದೇಹಿಯಾಗಿ ದೇವತೆಯನ್ನು ಶೃಂಗರಿಸುವುದು. ಬಂದ ಭಕ್ತರಿಗೆ ಪೂಜಾ ಪ್ರಸಾದ, ತೀರ್ಥಗಳನ್ನು ವಿನಿಯೋಗಿಸುವ ಕೆಲಸವನ್ನು ಮಾಡುವನು. ಜಾತ್ರೆಯಂದು ಗೌರಿದೇವಿಯ ಮೆರವಣಿಗೆಯು ಪೂಜಾರಿಯ ನೇತೃತ್ವದಲ್ಲಿಯೇ ನಡೆಯುತ್ತದೆ. ಭಕ್ತರಿಗೆ ಯಾವುದೇ ರೀತಿಯ ಕಷ್ಟ-ನಷ್ಟಗಳು ಬಂದರೆ ಪೂಜಾರಿಯಿಂದಲೇ ಸಲಹೆ ಸೂಚನೆಗಳನ್ನು ಕೇಳುತ್ತಾರೆ. ಪೂಜಾರಿಯ ಜನರ ಶಾಂತಿ ನಿಮ್ಮದ್ದಿಗಾಗಿಯೇ ದೇವಿಗೆ ಕುಂಕುಮ ಪೂಜೆ ಪುಷ್ಪ ಪೂಜೆ ತೀರ್ಥವನ್ನು ಕಒಡುವುದರ ಮೂಲಕ ಭಕ್ತಿರಿಗೆ ಮನಃಶಾಂತಿಯನ್ನು ಹೇಳುತ್ತಾರೆ.

ಜಾತ್ರೆಯಲ್ಲಿ ದೇವಿಗೆ ಸಲ್ಲಿಸುವ ಹರಕೆ ಪೂಜೆ ನೈವೇದ್ಯಗಳನ್ನು ಪೂಜಾರಿ ಸ್ವೀಕರಿಸುತ್ತಾನೆ. ಜಾತ್ರೆಯಲ್ಲಿ ಭಕ್ತರು ದೇವರಿಗೆ ಅಪ್ಪಗೆ ಕೇಳಲಿಕ್ಕೆ ಹೋಗಿದ್ದಗ ಆತ ಒಳಗಡೆ ಗರ್ಭಗುಡಿಯಲ್ಲಿ ಪೂಜೆ ನೆಡೆಸಿ ಮಂಗಳಾರತಿ ಮಾಡಿ ಭಕ್ತ ಮತ್ತು ದೇವರ ನಡುವೆ ಸಂಧಾನಕಾರನಾಗಿ ಕಾರ್ಯನಿರ್ವಹಿಸುತ್ತಾ ಬಂದರೂ. ಧಾರ್ಮಿಕವಾದ ಭಕ್ತಿ ಭಾವನೆಯನ್ನು ನಡೆದುಕೊಂಡಿದ್ದಾರೆ.

ನಂಬಿಕೆಗಳು

- ದೇವಿಯ ಆರಾಧನೆಯಿಂದ ಮಾಡುವುದರಿಂದ ಮಕ್ಕಳ ಆರೋಗ್ಯ ಹೆಚ್ಚುತ್ತದೆ.
- ಗೌರಿದೇವಿಯ ಶಕ್ತಿಯ ಆರಾಧನೆಯಿಂದ ಬೇರೆಯವರು ನಡೆಸುವ ಮಾಟ ಮಂತ್ರಗಳು ತಟ್ಟುವುದಿಲ್ಲ.
- ದೇವಿಗೆ ಜಾತ್ರೆಯಲ್ಲಿ ಉರುಳು ಸೇವೆ ಮಾಡಿದ್ದರೆ ಮದುವೆಯಾದ ಗಂಡು-ಹೆಣ್ಣುಗಳು ಮಕ್ಕಳಾಗುತ್ತದೆ ನಂಬಿಕೆ.
- ಗೌರಿದೇವಿಯ ಮಕ್ಕಳ ಫಲ ಸೂತಕ, ಮುಟ್ಟು ಮೊದಲಾದ ಸಮಪ್ಯಗಳು ಸೂಕ್ತ ಪರಿಹಾರ ಕೊಡುವುದರ ಜೊತೆಗೆ ಕೊಟ್ಟ ಮನೆಯಲ್ಲಿ ಹೆಣ್ಣು ಮಕ್ಕಳನ್ನು ತಆಯಿಯ ಹಾಗೆ ಕಾಪಾಡುತ್ತಾಳೆ.
- ಪ್ರತಿ ದಿನ ಮಲಗುವಾಗ ದೇವತೆಯನ್ನು ದ್ಯಾನಿಸಿ ಮಲಗಿದರೆ ದುಃಸ್ವಪ್ನ ಬೀಳುವುದಿಲ್ಲ
- ಜನರಲ್ಲಿ ಕುಟುಂಬದ ಸಮಸ್ಯಗಳಲ್ಲಿ ಹೊಟ್ಟೆನೋವು ಉಗುರುಸುತ್ತು, ವಾಂತಿ ಬೇದಿ, ದೈಹಿಕ ಸಂಬಂಧ ರೋಗಗಳಿಗೆ ನಿವಾರಿಸುವುದಕ್ಕೆ ಹರಕೆಗಳನ್ನು ಕೊಟ್ಟಿಕೊಂಡು ಜಾತ್ರೆಯಲ್ಲಿ ಪೂರೈಸಬೇಕು.

೩.೧೧ ಜಾತ್ರೆಯ ಪ್ರಯೋಜನ

ಜಾತ್ರೆಗಳಿಂದ ಅನೇಕ ಲಾಭಗಳಿವೆ. ವಿವಿಧ ಕಡೆಗಳಿಂದ ಭಕ್ತರು ಜಾತ್ರೆಗೆ ಬರುವುದುಂಟು, ಬಂದವರು, ಖಾಲಿ ಕೈಯಿಂದ ಮನೆಗೆ ಹೋಗುವವರು ಕಡಿಮೆ, ಸಾಧ್ಯವಾದಷ್ಟು

ದೇವಾಲಯದ ದಾನ ಪಟ್ಟಿಗೆಯಲ್ಲಿ ಕಾಣಿಕೆ ಹಾಕುತ್ತಾರೆ. ಇನ್ನು ಜಾತ್ರೆಯಲ್ಲಿ ಅರೆಕಾಲಿಕ ಅಂಗಡಿ ಮುಂಗಟ್ಟುಗಳ ಮಾಲೀಕರು ಜಾತ್ರೆ ನಡೆಸುವ ಸಮಿತಿಯವರಿಗೆ ಬಾಡಿಗೆ ಹಣ ಕೊಡುತ್ತಾರೆ. ವಿವಿಧ ಮೂಲಗಳಿಂದ ಜಾತ್ರೆಯ ಸಂದರ್ಭದಲ್ಲಿ ಹಣ ಸಂಗ್ರಹಣೆ ಮಾಡಿರುತ್ತಾರೆ.

ಜಾತ್ರೆ ಪ್ರತಿಯೊಬ್ಬನಲ್ಲಿ ಧಾರ್ಮಿಕ ಶ್ರದ್ದೆ ಹುಟ್ಟಿಸಲು ಅವರ ನಡುವಳಿಕೆಗಳು ಉತ್ತಮಗೊಳಿಸಲು ಕಾರಣವಾಗಿದೆ.

ದೇವಿಯಲ್ಲಿ ಪವಿತ್ರ ಸ್ಥಳಕ್ಕೆ ನಾನಾ ಭಗದಿಂದ ಹಳ್ಳಿಗಳಿಂದ ಬಂದ ಭಕ್ತಿ ವರ್ಗ ಸಾಮೂಹಿಕವಾಗಿ ಕುಳಿತು ದೇವತಾರಾಧನೆ ಮಾಡುವುದರೊಂದಿಗೆ ಭಜನೆ ಕೀರ್ತನೆ ಹಾಡುಗಳು ಪ್ರವಚನ ಜಾತ್ರೆಯಲ್ಲಿ ಭಾಗವಹಿಸಿ ಸಂತೋಷಪಡುತ್ತಾರೆ.

ಜಾತ್ರೆಯಲ್ಲಿ ಮೇಲು-ಕೀಳೆಂಬ ಬೇದಾವಿಲ್ಲದೆ ಜನರು ಸೇರುವುದರಿಂದ ವಿವಿಧ ಸಂಸ್ಕೃತಿಯ ಆಚರಣೆಯನ್ನು ಆಗುತ್ತದೆ. ಎಲ್ಲಾರೂ ಒಟ್ಟಾಗಿ ಕುಳಿತು ಪರಸ್ಪರ ಸಂಬಂಧವನ್ನು ಧೃಡಿಪಡಿಸಿಕೊಳ್ಳುವುದರ ಜೊತೆಗೆ ಹೊಂದಾಣಿಕೆಯನ್ನು ರೂಢಿಸಿಕೊಳ್ಳಲು ನೆರವಾಗುತ್ತದೆ. ಸಮುದಾಯಗಳ ಆಸಕ್ತಿ ಮತ್ತು ಉತ್ಸವಗಳಿಂದ ಸಾಧ್ಯವಾಗುತ್ತದೆ.

ಜಾತ್ರೆಯ ಎಲ್ಲರೂ ಕ್ಷೇಮಾಭಿವೃದ್ಧಿಗಾಗಿ ಒಂದು ನಿಗದಿತ ಸಮಯದಲ್ಲಿ ದೇವರುಗಳ ಹೆಸರಿನಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಸಾಮೂಹಿಕವಾಗಿ ಆಚರಿಸುವ ಜಾತ್ರೆಯಾಗಿದೆ. ಇದು ಹತ್ತಾರು ರೂಢಿ ಸಂಪ್ರದಾಯಗಳನ್ನು ಅನೇಕ ಜನಪದರ ಹಿರಿಯರು ಅಂಶಗಳನ್ನು ತನ್ನಲ್ಲಿ ಇಟ್ಟಿಕೊಂಡು ಬಂದು ಸಂಕೀರ್ಣ ವ್ಯವಸ್ಥೆಯಾಗಿದೆ.

ಎಲ್ಲಾರೊಂದಿಗೆ ಕೂಡಿ ಆನಂದ ಇರುವ ಹಬ್ಬವಾಗಿದೆ. ಜಾತ್ರೆಯಲ್ಲಿ ಸಾಮಾಜಿಕ ಜನ ಜೀವನ ವ್ಯವಸ್ಥೆ ಸುರಕ್ಷಿತವಾಗಿ ಮುನ್ನಡೆಸಲು ಮತ್ತು ತಲೆಮಾರಿನಿಂದ ತಲೆಮಾರಿಗೆ ನಾನಾ ಬಂದ ಸಂಸ್ಕೃತಿಯ ಜಾತ್ರೆಯಾಗಿ ಬೆಳೆದಿದೆ.

೩.೧೨ ಜಾತ್ರೆಯ ಪ್ರಮುಖ್ಯತೆ

ಜಾತ್ರೆ ಹೆಸರು ಕಿವಿಳಿದೊಡನೆ ಪ್ರತಿಯೊಬ್ಬನ ಮನಯಲ್ಲಿ ವರ್ಷಕೊಮ್ಮೆ ಬರುವ ಜಾತ್ರೆಯಲ್ಲಿ ಬಡವರು ಬಲ್ಲಿದವರು ಶ್ರಿಮಂತರು ಹಿರಿಯರು ಕಿರಿಯರು ಹರ್ಷದಿಂದ ಸ್ವಾಗತಿಸುತ್ತಾರೆ.

ಹಳ್ಳಿಯ ಮಕ್ಕಳು ಮಣ್ಣಿನ ಮಕ್ಕಳು ಇವರಿಗೆ ಮನರಂಜನೆಯ ಬಹುಮುಖಗಳು ಯಾವಾನೀಲ ಲಭಿಸುವುದಿಲ್ಲ. ಇಂಥವರಿಗೆ ಎಚ್ಚು ಸಂತೋಷ ಉತ್ಪತಿದ ಸಮಯದಲ್ಲಿ ಮಕ್ಕಳ ಮಾತೇ ಬೇರೆ ಉತ್ಸವದಷ್ಟೆ ಉತ್ಸಾಹ ಅವರಲ್ಲಿರುತ್ತದೆ.

ದೇವಾಲಯ ಮತ್ತು ಗಡಿಯಲ್ಲಿ ವಿದ್ಯುತ್ ದೀಪಗಳು ಅಳವಡಿಸಿರುತ್ತಾರೆ. ಬಣ್ಣಬಣ್ಣದ ಹೂಗಳ ಮಾಲೆಗಳು ಹಾಕಿ ಅಂದ-ಚಂದವಾಗಿ ನೋಡಿ ದೇವಾಲಯದ ಸಮೀಪವಂತೂ ವಿಪರೀತ ಭಕ್ತರು ಅಂದ ಚಂದವನ್ನು ನೋಡಿ ದೇವಾಲಯದ ಸಮೀಪ ವಿಪರೀತ ಸಂಖ್ಯೆ ಸೇರುತ್ತಾರೆ.

ರಾತ್ರಿ ಹೊತ್ತಿನಲ್ಲಿ ದೀಪಾರುತಿಯನ್ನು ಹಿಡಿದು ಭಕ್ತರು ಸಂತೋಷದಿಂದ ಸ್ವೀಕರಿಸುವ ಪದ್ಧತಿಯನ್ನು ಜಾತ್ರೆಯಲ್ಲಿ ನೆನೆದ್ದರೆ ಜಾತ್ರೆಯಲ್ಲಿ ದಿನಗಳಲ್ಲಿ ಹೆಣ್ಣುಮಕ್ಕಳು ಉತ್ಸಾಹ ಜಾತ್ರೆಯೆಂದು ಕರೆಯುತ್ತಾರೆ.

೩.೧೩ ಗೌರಿ ದೇವಿಯ ಪ್ರಸಿದ್ಧತೆ

ಲೋಕದಲ್ಲಿ ನಶಿಸಿ ಹೋಗುತ್ತಿರುವ ದೈವಭಕ್ತಿ ಮತ್ತು ಸಂಪ್ರದಾಯಗಳನ್ನು ಎತ್ತಿಹಿಡಿಯಬೇಕಾದಲ್ಲಿ ಜ್ಞಾನಿಗಳ ಕರ್ತವ್ಯವಾಗಿದೆ.

ನಮ್ಮ ಹಿರಿಯರು ಭಗವಂತನ ಲೀಲೆಗಳನ್ನು ಜನರಿಗೆ ಮನಮುಟ್ಟುವಂತೆ ಕತೆಗಳ ರೂಪದಲ್ಲಿ ಕೊಂಡಾಡಿದ್ದಾರೆ. ಜನರನ್ನು ಆಸ್ತಿಕತೆಯ ಕರೆಗೆ ಒಲಿಯುವಂತೆ ಮಾಡಿದ್ದಾರೆ. ಪವಿತ್ರ ಕತೆಗಳಲ್ಲಿ (ಉಳ್ಳವರತೆ >ಉಳ್ಳಾರತಿ) ಉಳ್ಳಾರ್ತಿ ಗ್ರಾಮವು ಅದರ ಹೆಸರಿಗೆ ತಕ್ಕಂತೆ ನೀರಿನ ಕೊರತೆಯಿಂದ ಕೂಡಿತ್ತು. ಆಗಿನ ಕಾಲದಲ್ಲಿ ಕಾಲಕ್ಕೆ ಸರಿಯಾಗಿ ಮಳೆಯು ಬರುತ್ತಿದ್ದು ಕೆರೆಗಳು, ಬಾವಿಗಳು, ನೀರಿನಿಂದ ತುಂಬಿ ತುಳುಕುತ್ತಿದ್ದವು.

ಎಲೆಗಳು ಬಳ್ಳಿಗಳು, ತೆಂಗಿನ ತೋಟಗಳು, ಭತ್ತದ ಪೈರುಗಳು ಮತ್ತು ಸುತ್ತಾಲೂ ಬಹಳ ಮನೋಹಕವಾದ ಪ್ರಕೃತಿ ಸೌಂದರ್ಯವು ಹೊಂದಿರುವುದು. ಭೂಲೋಕದಲ್ಲಿ ವ್ಯವಹರಿಸುವ ಪ್ರತಿ ಮಾನವನು ತನ್ನ ಉದರ ಪೋಷಣೆಗಾಗಿ ಯಾವುದಾರೊಂದು ಕಾಯಕವನ್ನು ಮಾಡಲೇಬೇಕಾಗಿದೆ. ಹೀಗೆ ಜನರು ವ್ಯಾಪಾರಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಮಾಡುತ್ತಿದ್ದರು.

ಒಂದು ಕಾಲದಲ್ಲಿ ಹಿರಿಯೂರು ತಾಲ್ಲೂಕಿನ ತವಂದಿ ಗ್ರಾಮದ ವ್ಯಾಪಾರಿಗಳು ಸಬರದ ಎತ್ತಿನ ಮೇಲೆ ಅರಿಶಿಣದ ವ್ಯಾಪಾರ ಮಾಡುತ್ತಾ ಉಳ್ಳಾರ್ತಿಯ ಕಡೆ ಬಂದರು. ಆಗ ಜಗನ್ಮಾತೆಯಾದ ಗೌರಿದೇವಿಯು ತಾನೂ ಸಹ ವ್ಯಾಪಾರಿಗಳೊಂದಿಗೆ ಪ್ರಯಾಣ ಮಾಡುವುದಾಗಿಯೂ ತನ್ನಗೆ ದಾರಿಯನ್ನು ತೋರಿಸಬೇಕೆಂದು ಕೇಳಿಕೊಂಡಳು. ಆ ವ್ಯಾಪಾರಿಗಳು ಸಾಮಾನ್ಯ ಸ್ತ್ರೀ ಎಂದು ತಿಳಿದುಕೊಂಡು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೊರಟರು.ಪ್ರಯಾಣ ಮಾಡುತ್ತಾ ರಾತ್ರಿಯ ಸಮಯಕ್ಕೆ ಉಳ್ಳಾವರ್ತಿಯ ಸಮೀಪಕ್ಕೆ ಬಂದರು. ಆ ರಾತ್ರಿ ಅಲ್ಲಿಯೇ ತಂಗುವ ಮಾಡಿ ಶಾನುಭೋಗರ ಬಂಡೆಯ ಬಳಿ ಮಲಗಲು ಸಿದ್ಧತೆ ಮಾಡಿಕೊಂಡರು.

ಗೌರಿ ದೇವಿಯು ಎಲ್ಲರೂ ಮಲಗಿದ ನಂತರ ಆ ಸ್ಥಳದಿಂದ ಹೊರಟಳು ಬೇಗ ಬೇಗನೆ ನಡೆಯುತ್ತ. ಈಗಿನ ಜೋಡಿ ಕಪಿಲೆಯ ಬಳಿಗೆ ಬಂದಳು. ಆ ಕಾಲದಲ್ಲಿ ಅದೊಂದು ಸುಂದರ ತಾಣವಾಗಿತ್ತು. ಆ ತೋಟದ ಸೌಂದರ್ಯಕ್ಕೆ ದೇವತೆಗಳು ಸಹ ಮಾರು ಹೋಗುವಂತಿತ್ತು. ಮಧ್ಯರಾತ್ರಿಯ ಸಮಯದಲ್ಲಿ ದೇವಕನ್ಯೆಯರು ಆ ತೋಟದ ಸಮೀಪದಲ್ಲಿರುವ ಬಾವಿಯಲ್ಲಿ ಜಲಕ್ರೀಡೆಯಾಡಲು ಬರುತ್ತಿದ್ದರಂತೆ. ಈಗಲೂ ಆ ಬಾವಿಯಲ್ಲಿ ದೇವಕನ್ನಿಕೆಯರ ಭಾವಿ ಎಂದು ಕರೆಯುತ್ತಾರೆ. ಇಂಥ ಸುಂದರ ತಾಣವನ್ನು ಗೌರಿದೇವಿಯು ಸೇರಿದಳು.

ಆಗಿನ ಕಾಲದಲ್ಲಿ ಉಳ್ಳಾವರ್ತಿ ಗ್ರಾಮಕ್ಕೆ ಮಹಾದೈವಭಕ್ತರೂ, ಸಾತ್ವಿಕ ಸ್ವಭಾವದವರು ಆಗಿದ್ದವರು ನಾಗಪ್ಪ ಎಂದು ವೀರಶೈವ ಸಂಪ್ರದಾಯದ ವ್ಯಕ್ತಿಯು ಶಾನುಭೋಗರಾಗಿದ್ದರು. ನಾಗಪ್ಪನ ತಾಯಿ ನಂಜಮ್ಮನೆಂದು ಆಕೆಯು ಮಹಾಶಿವ ಭಕ್ತೆಯಾಗಿದಳು. ತಮ್ಮ ತೋಟದಲ್ಲಿಯೇ ಒಂದು ಶಿವಾಲಯವಿದ್ದು. ಪ್ರತಿದಿನವೂ ಭಕ್ತಿಯಿಂದ ಶಿವಪೂಜೆಯನ್ನು ತಾಯಿ ಮಕ್ಕಳಿಬ್ಬರೂ ನೆರೆವೇರಿಸಿದ್ದರು.

ಕಾರ್ತಿಕ ಮಾಸದ ಒಂದು ಹುಣ್ಣಿಮೆಯ ರಾತ್ರಿ ನಾಗಪ್ಪನು ತೋಟದ ಕಣದಲ್ಲಿ ರಾಗಿ ಕಣವನ್ನು ಕಾವಲು ಕಾಯುತ್ತ ಮಂಚದ ಮೇಲೆ ಕುಳಿತಿದ್ದನು. ಆಗ ಸುಗಂಧಭರಿತವಾದ ಗಾಳಿಯು ಬೀಸಿ ಬಂದು ಮನಸ್ಸಿಗೆ ಉಲ್ಲಾಸವನ್ನು ಉಂಟುಮಾಡಿತು. ಸ್ವಲ್ಪ ಹೊತ್ತಿನಲ್ಲಿಯೇ ಗೆಜ್ಜೆಗಳ ಘಲ್ ಘಲ್ ನಾದ ಬಳೆಗಳ ಝೇಕ್ಕರ ನಾಗಪ್ಪನ ಕಿವಿಗೆ ಕೇಳಿಸಿತು. ಇಂಥ ಅಘಟಿತ ಘಟನೆಯಿಂದ ನಾಗಪ್ಪನು ಬೆದರಿದನು. ಈ ವೇಳೆಯಲ್ಲಿ ಯಾವ ಸ್ತ್ರೀಯು ಇಲ್ಲಿಗೆ ಬಂದಿರಬಹುದು? ಯಾರಾದರೂ ದೇವಕನ್ಯೆ ಇರಬಹುದು ಅಥವಾ ಭೂತ ಚೇಷ್ಟೆ ಏನಾದರೂ ಇದ್ದಂತೆ ಎಂದು ಯೋಚಿಸಿ ಬಂದೂ ಅರಿಯದೆ ಗಡಗಡನೆ ನಡುಗಿದನು. ಆಗ ರಾಗಿಯ ರಾಶಿಯ ಬಳಗಿನಿಂದ ನಾನು ಬರಲೆ ನಾನು ಬರಲೆ ನಾನು ನಿಮ್ಮ ಮನೆಗೆ ಬರಲೆ ಎಂದು ಮೂರು ಬಾರಿ ಕೇಳಿಸಿತು.

ಇದನ್ನು ಕೇಳಿದ್ದೆ ತಡ ನಾಗಪ್ಪನು ಮತ್ತಷ್ಟು ಹೆದರಿಬಿಟ್ಟನು. ನಿದ್ರೆಯು ಆತನಿಂದ ದೂರವಾಯಿತು. ರಾತ್ರಿಯೆಲ್ಲಾ ಪರಮಾತ್ಮನ ಧ್ಯಾನ ಮಾಡುತ್ತಾ ಅತ್ತಿತ್ತ ಅಲುಗಾಡದಂತೆ ಕುಳಿತುಬಿಟ್ಟನು. ಬೆಳಗಿನ ಜಾವ ಬೇಗನೆ ಅಲ್ಲಿಂದ ಹೋರಾಟು ಮನೆಯ ದಾರಿ ಹಿಡಿದುಬಿಟ್ಟನು.

ನಂಜಮ್ಮನು ಆಗ ತಾನೇ ಎದ್ದು ಹಿತ್ತಲಿನಲ್ಲಿ ದನಗಳಿಗೆ ಮೇವು ಹಾಕಿ ಬಂದಳು. ಹೊರಗೆ ಬಾಗಿಲು ತಟ್ಟಿದ ಶಬ್ದವು ಕೇಳಿಸಲು ಬಾಗಿಲಲುನ್ನು ತೆರೆದಳು. ನಾಗಪ್ಪನು ಸರಗಕನೆ ಒಳಬಂದು ಬಾಗಿಲು ಹಾಕಿದನು ಎಂದೂ ಇಷ್ಟು ಬೇಗನೆ ಬಾರದಿದ್ದು. ಮಗ

ಈ ದಿನ ಬೇಗೆ ಬಂದಿರುವುದಕ್ಕೆ ನಂಜಮ್ಮನಿಗೂ ಅಚ್ಚರಿಯಾಯಿತು. ಏಕೆ ನಾಗಪ್ಪ ಏನಿದು ಇಷ್ಟು ಬೇಗ ಬಂದಿರುವೆಯಲ್ಲ? ಕಣದಲ್ಲಿ ಯಾರಿದ್ದಾರೆ? ರಾಶಿಯನ್ನು ಬಿಟ್ಟು ಏಕೆ ಬಂದೆ? ಎಂದು ಪ್ರಶ್ನೆಗಳ ಮಾಲೆಯನ್ನೆ ಸುರಿಸಿದಳು. ಆಗ ನಾಗಪ್ಪನು ಕಣದಲ್ಲಿ ನಡೆದ ಘಟನೆಯನ್ನು ತಾಯಿಗೆ ತಿಳಿಸಿದನು. ಇದನ್ನೆಲ್ಲ ಕೇಳಿದ ನಂಜಮ್ಮನಿಗೆ ಆಶ್ಚರ್ಯವೂ, ಆತಂಕವೂ ಉಂಟಾಯಿತು. ಶಿವಾ ಶಿವಾ ಇದೇನಿದು ಈ ರೀತಿ ಘಟನೆ ನಡೆಯಲು ಕಾರಣವೇನು? ಇದೆಂಥಾ ಪರೀಕ್ಷೆ, ಸ್ವಾಮಿ ನಮಗೆ ನೀನೇ ದಾರಿ ತೋರಿಸಬೇಕು. ತಾಯಿ ನಾಗಪ್ಪ ನೀನಿಗೆ ಹೆದರಬೇಡ ಇದೆಲ್ಲ ಭಗವಂತನ ಪರೀಕ್ಷೆ ಎಂದು ತಿಳಿ ಜಗಜ್ಜನನಿಯ ರಕ್ಷೆ ನಮ್ಮ ಮನೆಗೆ ಬರಲು ಕಾರಣವೇನು? ಆಕೆ ಬಂದು ನಮಗೇನು ಕಲ್ಯಾಣವನ್ನುಂಟು ಮಾಡುವಳೋ? ಕಂಟಕ ತಂದೊಡುವಳೋ? ವಿಷಯವನ್ನು ಪ್ರೇರೆಪಿಸುವರು. ನಂತರ ರಾತ್ರಿ ನಾಗಪ್ಪ ಪ್ರತಿದಿನದಂತೆಯೇ ಊಟವನ್ನು ಪೂರೈಸಿಕೊಂಡು ಕಣದ ಕಾವಲು ಕಾಯಲು ಬಂದು ಮಂಚದ ಮೇಲೆ ಕುಳಿತನು.

ನಾಗಪ್ಪನು ಕಣ್ಣು ಮುಚ್ಚದೆ ಹಿಂದಿನ ರಾತ್ರಿಯ ಘಟನೆಯನ್ನು ಮೇಲುಕು ಹಾಕುತ್ತಾ ಕುಳಿತನು ಮಧ್ಯರಾತ್ರಿ ಸಮಯಕ್ಕೆ ಸರಿಯಾಗಿ ಹಿಂದಿನ ದಿನದಂತೆಯೇ ಸುಗಂಧಬರಿತವಾದ ವಾಸನೆ ಗಾಳಿಯಲ್ಲಿ ತೇಲಿ ಬಂತು ಸ್ವಲ್ಪ ಹೊತ್ತಿನಲ್ಲಿಯೇ ಗಜ್ಜೆಗಳನಾದ ಕೈಬಳೆಯ ಝೇಕಾರ ನಾಗಪ್ಪ ಕಿವಿಗೆ ಕೇಳಿಸಿತು.

ಇದನ್ನು ಕೇಳಿದ ಕೂಡಲೇ ಮೈಯಲ್ಲಾ ಕಣ್ಣಾಗಿ ಕುಳಿತನು. ಆಗ ರಾಗಿಯ ರಾಶಿಯೊಳಗಿಂದ ನಾನು ಬರಲೆ ನಾನು ನಿಮ್ಮ ಮನೆಗೆ ಬರಲೇ ಎಂಬುದಾಗಿ ಹಿಂದಿನಂತೆಯೇ ಮೂರು ಬಾರಿ ಕೇಲಿಸಿತು. ಆಗ ನಾಗಪ್ಪನು ಭಯ ಭಕ್ತಿಗಳಿಂದ ಕೂಡಿದವನ್ನಾಗಿ ನಮ್ರಭಾವದಿಂದ ಅಂಜಲೀಬದ್ದವಾಗಿ ತಾಯಿ ನೀನು ನಮ್ಮ ಮನೆಗೆ ಬಂದು ನಮಗೆ ಕಲ್ಯಾಣವನ್ನುಂಟು ಮಾಡುವೆಯೋ ಅಥವಾ ಕಂಟಕವನ್ನು ತಂದೊಡ್ಡುವೆಯೇ? ನಮ್ಮ ಗ್ರಾಮಕ್ಕೆ ಸಹ ಸನ್ಮಾಗಳಾನ್ನುಂಟು ಮಾಡುವುದಾಗಿರಬೇಕು. ಹಾಗಿದ್ದಲ್ಲಿ ಖಂಡಿತವಾಗಿಯೂ ನಿನಗೆ ಸುಸ್ವಾಗತವು ಎಂದು ಹೇಳಿದನು.

ಆಗ ಗೌರಿದೇವಿಯು ಮಗು ನಾಗಪ್ಪ ನಾನು ಜಗನ್ಮಾತೆಯಾದ ಗೌರಿದೇವಿಯು ಪರಮೇಶ್ವರನ ಪತ್ನಿಯಾದ ಪಾರ್ವತಿಯು ಗಿರಿರಾಜ ಸುತೆಯಾದ ಗಿರಿಜೆಯು ಆದಿಮಾತೆಯು ನನ್ನಿಂದ ನಿಮಗೂ ನಿಮ್ಮ ಗ್ರಾಮಕ್ಕೂ ಕಲ್ಯಾಣವಾಗುವುದೋ ಕಂಟಕವಾಗುವುದೋ ನೀನೇ ಯೋಚಿಸಿ ಎಂದು ಕೇಳಿಸಿತು. ಆ ಮಾತುಗಳನ್ನು ಕೇಳಿದ ಕೂಡಲೇ ನಾಗಪ್ಪನು ಭಕ್ತಿ ಭಾವಗಳಿಂದ ಕೂಡಿದವನ್ನಾಗಿ ಕೈ ಮುಗಿದು ಜಗಜ್ಜನನಿಯೋ ನಿನಗೆ ಜಯವಾಗಲಿ. ಆದಿಮಾತೆಯೇ ನಿನಗೆ ನನ್ನ ಅನಂತ ನಮಸ್ಕಾರ, ಶಕ್ತಿ ಸ್ವರೂಪಿಣಿಯೇ ನಿನಗೆ ನಾನು

ಅನನ್ಯ ಶರಣಾದೆನು. ಈ ನಿನ್ನ ವಾಣಿಯು ನನ್ನನ್ನು ಧನ್ಯವನ್ನಾಗಿ ಮಾಡಿತು. ತಾಯೆ ನಿನಗೆ ಸ್ವಾಗತವು ಏನೊ ಅರಿಯದೆ ನಾನು ನಿನ್ನಲ್ಲಿ ಶಂಕೆಗೊಂಡು ಮಹಾಪರಾಧಗೈದೆನು. ತಾಯೇ ನನ್ನ ತಪ್ಪನ್ನು ಮನ್ನಿಸು. ಮಹಾಮಾತೆಯೇ ನೀನು ದಯಮಾಡಿ ನನ್ನ ಮನೆಯನ್ನು ಪಾವನ ಮಾಡು ನಿನ್ನ ಆಗಮನದಿಂದ ನಮ್ಮ ಗ್ರಾಮವು ಪುನೀತವಾಗಲಿ ತಾಯೇ ನೀನು ನಮ್ಮ ಮನೆಗೆ ಯಾವ ಸಮಯದಲ್ಲಿ ಬರುವೇ? ಯಾವ ಏರ್ಪಾಟುಗಳೊಂದಿಗೆ ನಿನ್ನನ್ನು ಸ್ವಾಗತಿಸಬೇಕು? ದಯವಿಟ್ಟು ತಿಳಿಸುವೆಂಥವಳಾಗು ಎಂದು ಬೇಡಿಕೊಂಡನು. ಆಗ ಶಕ್ತಿ ಸ್ವೂರೂಪಿಣಿಯಾದ ಗೌರಿಯು ನನಗೆ ಯಾವ ಆಡಂಬರವೂ ಬೇಡ ನನಗೆ ಸದ್ಭಕ್ತಿಯೆಂದೇ ಮುಖ್ಯವಾದುದು. ಭಕ್ತಿಗೆ ಮಾತ್ರ ನಾನು ಪ್ರಸನ್ನಳಾಗುವೆ. ನಾನು ನಾಳೆಯ ರಾತ್ರಿ ಎಂದರೆ ಬಿದಿಗೆ ಕಳೆದು ತದಿಗೆ ಪ್ರಾರಂಭವಾದಾಗ ಮಧ್ಯರಾತ್ರಿ ಸಮಯದಲ್ಲಿ ನಿಮ್ಮ ಮನೆಗೆ ಬರುತ್ತೇನೆ.

ಸಮಯಕ್ಕೆ ನೀವು ಮನೆಯನ್ನು ಗೋಮಯದಿಂದ ಸಾರಿಸಿ ಶುದ್ಧಿ ಮಾಡಿ ಬಂದು ವಾಡೆಯಲ್ಲಿ ರಾಗಿಯನ್ನು ತುಂಬಿಸಿ ಅದರ ಮೇಲೆ ನಿಂಬೆಹಣ್ಣನ್ನು ಇಟ್ಟು ಎರಡು ಕಡೆಗಳಲ್ಲಿ ನಾಲ್ಕು ದೀಪ ಹಚ್ಚಿ ಇಡಿಸಿದರೆ ಸಾಕು ಎಂದು ಹೇಳಿದಳು. ಆಗ ನಾಗಪ್ಪನು ಮಾತೆಯೇ ನೀನು ಬಂದೆ ಎಂದು ನಮಗೆ ಹೇಗೆ ತಿಳಿಯಬೇಕು? ಎಂದು ಕೇಳಿದು. ಆಗ ಜಗನ್ಮತೆಯು ಮನೆಯ ತುಂಬಾ ಮಲ್ಲಿಗೆ ಹೂಗಳ ಸುವಾಸನೆ ತುಂಬಿಕೊಳ್ಳುತ್ತಿದೆ ನೀವು ನೋಡಿದಾಗ ಮಗೆ ತುಂಬಾ ಮಲ್ಲಿಗೆ ಹೂಗಳು ಹರಡಿರುತ್ತವೆ. ಇದೇ ನಾನು ನಿಮ್ಮ ಮನೆಗೆ ಬಂದಿರುವ ಕುರುಹ ಎಂದು ಹೇಳಿದಳು.

ಮರುದಿನ ಬೆಳಿಗ್ಗೆ ನಾಗಪ್ಪನು ಮನೆಗೆ ಬಂದು ತನ್ನ ತಾಯಿಯೊಂದಿಗೆ ಎಲ್ಲಾ ವಿಚಾರವನ್ನು ಚಾಚೂ ತಪ್ಪದೇ ತಿಳಿಸಿದನು. ಆಗ ನಂಜಮ್ಮನು ಬಹಳ ಶುದ್ದ ಭಕ್ತಿಗಳಿಂದ ಮನೆ ಬಾಗಿಲುಗಳನ್ನು ಶುಚಿ ಮಾಡಿಸಿ. ವಾಡೆಯ ತುಂಬಾ ರಾಗಿ ತುಂಬಿಸಿ ರಾಗಿಯ ಮೇಲೆ ನಿಂಬೆಹಣ್ಣನ್ನು ಇರಿಸಿ ಎರಡು ಕಡೆಗಳಲ್ಲಿ ಸಾಲು ದೀಪಗಳನ್ನು ಹಚ್ಚಿಸಿ ಇಟ್ಟರು. ಮನೆ ಮಂದಿಯೆಲ್ಲಾ ಶುಚಿರ್ಭೂತರಾಗಿ ಗೌರಿದೇವಿಯು ಬಂದು ಭಕ್ತರ ಮನೆಗೆ ಕುರುಹಾಗಿ ಮನೆಯ ತುಂಬಾ ಮಲ್ಲಿಗೆ ಹೂಗಳು ಹರಿಡಿದ್ದವು. ಹೂಗಳ ಸುವಸನೆಯು ಆ ಪ್ರದೇಶವನ್ನೇಲ್ಲ ಹರಡಿತು. ಎಚ್ಚರಗೊಂಡ ಮನೆಯ ಜನರು ತಮ್ಮ ಬಂಧುಗಳೊಡನೆಯೂ ಸ್ನೆಹಿತರೊಡನೆಯೂ ಗ್ರಾಮದ ಪ್ರಜೆಗಳೊಡನೆಯೂ ಸೇರಿ ಗೌರಿದೇವಿಗೆ ಭಕ್ತಿಯುಕ್ತರಾಗಿ ಆರತಿ ಮತ್ತು ನೈವೇದ್ಯಗಳನ್ನು ಅರ್ಪಿಸಿದರು. ಅವರ ಶ್ರದ್ಧಾಭಕ್ತಿಗಳಿಗೆ ಸಂತುಷ್ಟಗಳಿಂದ ಗೌರಿದೇವಿಯು ಅವರ ಮನೆಯಲ್ಲಿಯೇ ನೆಲೆಯಾಗಿ ನಿಂತಳು ಈಗಲೂ ಸಹ ದೇವಾಲಯದಲ್ಲಿ ಆ ಕಾಲದ ಕಳಶ ಮತ್ತು ಕಂಬಿಯನ್ನು ಕಾಣಬಹುದು.

ಅಂದಿನಿಂದ ಗೌರಿದೇವಿಯನ್ನು ಪ್ರತಿ ವರ್ಷವೂ ಕಾರ್ತಿಕ ಶುದ್ದ ಹುಣ್ಣಿಮೆಯ ದಿನದಿಂದ ಐದು ದಿನಗಳ ಕಾಲ ಗೌರಿಯನ್ನು ಕರೆತಂದು ಪೂಜಿಸಿ ಆರಂಭಿಸುವ ಕಾರ್ಯಕ್ರಮ ಮುಂದುವರಿಯುತ್ತಾ ಬಂತು. ಗೌರಿದೇವಿಯು ಬರುವಾಗ ಮುತ್ತೈದೆಯರು ಆರತಿಯನ್ನು ಹಿಡಿದು ಸ್ವಾಗತಿಸುವುದು, ದಿಂಡುರುಳು, ಉರುಳುವುದು, ಮುಂತಾದ ಪದ್ದತಿಯು ನಡೆದು ಬಂತು. ಈ ಉರುಳು ಸೇವೆ ಮತ್ತು ಆರತಿಗಳ ಸಂಗಮವಾಗಿ ಉಳ್ಳವರ್ತಿಗೆ ಉರುಳಾರತಿ ಎಂದು ಹೆಸರು ಬಂತು. ಜನರ ಆಡು ಭಾಷೆಯಲ್ಲಿ ಅದು ಉಳ್ಳಾರ್ತಿಯಾಗಿ ಶಾಶ್ವತವಾಗಿ ನಿಂತಿದೆ.

ಹೀಗೆ ಉಳ್ಳಾರ್ತಿಯಲ್ಲಿ ಗೌರಿದೇವಿಯು ಒಂದು ನೆಲೆಯಾಗಿ ನಿಂತಳು. ಈಗ ನಾಗಪ್ಪನವರ ಮನೆಯಿದ್ದ ಸ್ಥಳದಲ್ಲಿಯೇ ಗೌರಿ ದೇವಾಲಯವು ನಿರ್ಮಾಣಗೊಂಡಿದೆ. ಭಕ್ತರ ಸಂಖ್ಯೆಯೂ ಹೆಚ್ಚಾಗಿ ಬೆಳೆದಂತೆಲ್ಲಾ ಈ ದೇವಾಲಯವನ್ನು ವಿಶಾಲವಾಗಿ ನಿರ್ಮಾಣಮಾಡಲಾಗಿದೆ. ಧೃಡ ಭಕ್ತಿಗೆ ಒಲಿಯುವ ಮಾತೆಯಾಗಿ ಭಕ್ತರ ಅಭೀಷ್ಟೆಗಳನ್ನು ನೇರವೇರಿಸುತ್ತಿದ್ದಾಳೆ.

ಯಾವ ಜಾತಿ ಬೇದ ಮೇಲು-ಕೀಳುಗಳೆಂಬ ಭಾವವಿಲ್ಲದೆ ಬಡವ ಬಲ್ಲಿದವರೆಂಬ ತಾರತಮ್ಯವಿಲ್ಲದೆ, ಎಲ್ಲರಿಂದ ಪೂಜೆಗೊಂಡು ಸೇವೆ ಮಾಡಿಸಿಕೊಂಡು ಜನತೆಯನ್ನು ಪುನೀತಗೊಳಿಸಿದ್ದಾಳೆ. ಗೌರಿದೇವಿಯು ಒಂದು ಮನೆಯ ಅಥವಾ ಒಂದು ಊರಿನ ದೇವತೆಯಾಗದೆ ಬಹಳ ದೂರದ ಊರುಗಳಿಂದ ಬಂದು ಉತ್ಸವದಲ್ಲಿ ಪಾಲುಗೊಂಡು ತಮ್ಮ ಭಕ್ತಿಯ ಹರಕೆಯನ್ನು ಸಲ್ಲಿಸಿ ಹೋಗುತ್ತಾರೆ. ಗೌರಿದೇವಿಯನ್ನು ಗ್ರಾಮದ ಜನರು ತಮ್ಮ ಮಗಳೋಪಾದಿಯಾಗಿ ಬಹಳ ಮಮತೆಗೆ ಪ್ರೀತಿ ಗೌರವ ಮತ್ತು ಭಕ್ತಿಯಿಂದ ಕರೆತರುತ್ತಾರೆ. ಅದೇ ರೀತಿ ಪ್ರತಿ ಮನೆಗಳಲ್ಲಿಯೂ ಸಹ ತಮ್ಮ ತಮ್ಮ ಹೆಣ್ಣು ಮಕ್ಕಳನ್ನು ಪ್ರತಿ ವರ್ಷವೂ ಕರೆಸಿಕೊಂಡು ತಮ್ಮ ಶಕ್ತ್ಯಾನುಸಾರ ಉಡುಗೊರೆಯನ್ನು ಕೊಟ್ಟು ಸಂತೋಷ ಪಡಿಸಿ ಕಳುಹಿಸಿ ಕೊಡುತ್ತಾರೆ. ಕೇವಲ ದಿಂಡುರುಳು ಮತ್ತು ಆರತಿಗಳು ಗೌರಿದೇವಿಯನ್ನು ಪ್ರಸನ್ನಗೊಳಿಸುವ ಸಾಧನಗಳಾಗಿವೆ. ಧನದಾಸೆಯ ದೇವಿಯಾಗದೆ, ಮನದಾಸೆ ನೇರವೇರಿಸುವ ಕಲ್ಪವೃಕ್ಷವಾಗಿದ್ದಾಳೆ. ಹೀಗೆ ಜನರಲ್ಲಿ ದೈವಭಕ್ತಿ ಏರ್ಪಟ್ಟು ತೌಕಿಕದ ಗೊಂದಲಮಯ ಜೀವನವನ್ನು ಮರೆತು ಪರಾಮಾರ್ಥದತ್ತ ಒಯ್ಯಲು ಶ್ರೀ ಗೌರೀ ದೇವಿಯ ಚರಿತ್ರೆಯು ಒಂದು ದಾರಿದೀಪವಾಗಿದೆ.

ಈ ಕಥೆಯನ್ನು ಓದಿ ಕೇಳಿದ ಎಲ್ಲಾ ಆಸ್ತಿಕರಿಗೂ ಶ್ರೀ ಗೌರೀ ದೇವಿಯು ಕೃಪಾ ಪ್ರಸಾದವು ಸಿದ್ದಸಲಿ ಮತ್ತು ಸನ್ಮಂಗಳವಾಗಲಿ, ಶ್ರೀ ಗೌರೀದೇವಿ ಪ್ರಸಾದ ಸಿದ್ಧಿರಸ್ತು ನಮೋ ಜಗನ್ಮಾತಾ॥

ಮೇಲ್ಕಂಡ ಈ ಕಥೆಯ ಯಾವ ಇತಿಹಾಸದ ಆಧಾರವಿಲ್ಲದೆ ಜನರ ಬಾಯಿಂದ ಕೇಳಿ ಸಂಗ್ರಹಿಸಲ್ಪಟ್ಟಿದೆ. ಈ ಕಥೆಗೆ ಯಾವ ಕಾಲ ಮಿತಿಯೂ ತಿಳಿದು ಬರುವುದಿಲ್ಲ. ವಯೋವೃದ್ಧರಾದ ಹಿರಿಯರ ಬಾಯಿಂದ ಕೇಳಿ ತಿಳಿದು ಬರೆದಂಥ ಕಥೆಯಾಗಿದೆ. ಈ ಕತೆಯಲ್ಲಿ ಓದುವ ಆಸ್ತಿಕ ಮಹಾಶಯರು ಇನ್ನು ಹೆಚ್ಚಿನ ವಿಚಾರಗಳೇನಾದರೂ ತಿಳಿದುಬಂದಲ್ಲಿ ಸಂಶೋಧಕರು ವಿಷಯವನ್ನು ತಿಳಿಯಬಹುದಾಗಿದೆ.

ಈ ರೀತಿಯಲ್ಲಿ ಗೌರಿದೇವಿಯನ್ನು ಪ್ರತಿವರ್ಷವೂ ಕಾರ್ತಿಕ ಶುದ್ಧ ಪೌರ್ಣಿಮೆಯಿಂದ ಐದು ದಿನಗಳವರೆಗೆ ಕರೆತಂದು ಕೂಡಿಸಿ ಜಾತ್ರೆಯನ್ನು ನಡೆಸಲಾಗುತ್ತದೆ. ಆಗ ಹಿಂದಿನ ಕೆಲವು ಹಿರಿಯ ಮುತ್ತೈದೆಯರು ಗೌರಿದೇವಿಯನ್ನು ಕರೆತರುವಾಗ ಮತ್ತು ಕಳುಹಿಸುವಾಗ ಹೇಳುವ ಜನಪದ ಸೋಬಾನೆ ಪದವನ್ನು ಹಾಡುತ್ತಾರೆ. ಈ ಸೋಬಾನೆ ಪದಗಳು ಅವರಿಂದ ಸಂಗ್ರಹಿಸಿ ಬರೆದಿರುವವದನ್ನು ನೀವು ಮುಂದಿನ ಗೌರಿದೇವಿಯನ್ನು ಸ್ವಾಗತಿಸಲು ಊರಿನ ಪಟೇಲರು (ಗೌಡರು), ಶಾನುಭೋಗರು, ಗೊಂಬೆಗಾರರು, ತೊಂಟಿ–ತಳವಾರರು, ಕಹಳೆಯವರು, ಆಯಗಾರರು, ಮತ್ತಿತರರು ಮುಂತಾದ ಹಲವಾರು ಕೋವಿನ ಜನರು ಒಂದೆಡೆ ಸೇರಿ ಭಕ್ತಿಯಿಂದ ಗೌರಿದೇವಿಯ ಜಾತ್ರೆಯ ಆಚರಿಸುತ್ತಾರೆ.

❖❖❖

ಅಧ್ಯಾಯ : ನಾಲ್ಕು

ಜಾತ್ರೆಗೆ ಸಂಬಂಧಿಸಿದ ಆಚರಣೆಗಳು

೪.೧ ಜಾತ್ರೆಯ ಆಚರಣೆಗಳು

೪.೧.೧ ಆಚರಣೆಯಲ್ಲಿ ಬದಲಾವಣೆಗಳು

೪.೨ ಹರಕೆಗಳು

೪.೩ ಪೂಜಾ ಆಚರಣೆಗಳು

ಅಧ್ಯಾಯ: ನಾಲ್ಕು

ಜಾತ್ರೆಗೆ ಸಂಬಂಧಿಸಿದ ಆಚರಣೆಗಳು

ಯಾವುದಾದರೊಂದು ಅಧ್ಯಯನವನ್ನು ಕೈಗೊಂಡಾಗ ಸಮಕಾಲೀನತೆಯೊಂದಿಗೆ ತುಲನಾತ್ಮಕವಾಗಿ ನೋಡದೆ ಹೋದರೆ ಅದು ಅರ್ಥವಿಲ್ಲದ ಅಧ್ಯಯನವಾಗುತ್ತದೆ. ಸಮಕಾಲೀನ ಪರಿಸ್ಥಿತಿಗೆ ಹಲವು ಕಾಲಗಳಲ್ಲಿ ಉಂಟಾದ ಬದಲಾವಣೆಗಳೊಂದಿಗೆ ಪ್ರಾಚೀನ ವಿಷಯವನ್ನು ತಿಳಿಸಿದಂತಾಗುತ್ತದೆ. ಅಲ್ಲದೆ ಪ್ರಾಚೀನ ಮತ್ತು ಪ್ರಸ್ತುತಕ್ಕಿರುವ ವ್ಯತ್ಯಾಸದೊಂದಿಗೆ ಮಾನವನ ಬದುಕು ನಿತ್ಯ ಬದಲಾವಣೆಯಲ್ಲಿರುವ ಜೀವಂತ ಸಂಸ್ಕೃತಿ ಎಂದು ಮನವರಿಕೆಯಾಗುತ್ತದೆ. ಆಧುನಿಕ ನಾಗರಿಕತೆಯ ಸಮೀಪದಲ್ಲಿರುವ ಮನುಷ್ಯನಿಗೆ ಆಧುನಿಕತೆಯ ಆಕರ್ಷಣೆ, ಅಭಿರುಚಿ, ಆಸಕ್ತಿ, ಯೋಚನಾ ವಿಧಾನಗಳಲ್ಲೂ ಬದಲಾವಣೆಯಾಗುತ್ತಾ ಹೋಗುತ್ತದೆ. ಮಾನವನು ಆಧುನಿಕತೆಯ ಅವಿಷ್ಕಾರಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಾ ಪ್ರಪಂಚದ ಹಲವಾರು ವಿಚಾರಗಳಿಗೆ ತೆರೆದುಕೊಳ್ಳುತ್ತಿದ್ದಾನೆ. ಆಧುನಿಕ, ನಾಗರಿಕತೆ, ವಿಜ್ಞಾನ ಮತ್ತು ತಂತ್ರಜ್ಞಾನಗಳಿಗಿಂತ ಆವಿಷ್ಕಾರಗಳಿಗೆ ತನಗೆ ಗೊತ್ತಿಲ್ಲದ ಹಾಗೆ ಒಳಗಾಗುತ್ತಿದ್ದಾನೆ. ಈಗಾಗಲೇ ತನ್ನ ಬದುಕಿನಲ್ಲಿ ರೂಢಿಸಿಕೊಂಡಿದ್ದ ಜೀವನ ವಿಧಾನಗಳು, ಸಂಪ್ರದಾಯಗಳು, ಸಂಸ್ಕೃತಿ ನಂಬಿಕೆಗಳಂತಹ ಎಷ್ಟೋ ವಿಚಾರಗಳು ನಶಿಸಿ ಹೋಗುತ್ತಿರುವುದಕ್ಕೆ ಇವು ಕಾರಣವಾಗುತ್ತವೆ. ಇಂದಿನ ಮೋಜಿನ ಯುಗಕ್ಕೆ ಜನಪದರು ಶರಣಾಗುತ್ತಿರುವುದನ್ನು ನೋಡಬಹುದು. ಆದರೆ ಈ ಅವಿಷ್ಕಾರಗಳನ್ನು ಸ್ವೀಕರಿಸುವಾಗ ಎಚ್ಚರಿಕೆಯಿಂದ ಹೊಸರೂಪಗಳು ಪಡೆಯುತ್ತಿವೆ. ಆದರೂ ಅದು ಬದಲಾವಣೆಯಂತು ಸಹಜವಾಗಿಯೇ ಆಗಿರುತ್ತವೆ. ಹೀಗೆ ಮಾನವ ತನ್ನ ಬದುಕಿನಲ್ಲಿ ಬದಲಾವಣೆಗೆ ಒಳಗಾಗುವ ಸಮಯದಲ್ಲಿ ಕಣ್ಣಿಗೆ ಕಂಡದ್ದನ್ನೇಲ್ಲಾ ಸ್ವೀಕರಿಸುವ ಅಥವಾ ಅಂಶಗಳನ್ನು ಪಡೆಯುತ್ತಾನೆ. ಈ ಪರಿವರ್ತನೆಯು ಕೆಲವೊಮ್ಮೆ ಮಂದಗತಿಯಲ್ಲಿ ಕೆಲವೊಮ್ಮೆ ತೀವ್ರಗತಿಯಲ್ಲಿ ಸಾಗುತ್ತಿದ್ದು, ಅಲ್ಲಿನ ಜನತೆಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ವೈಜ್ಞಾನಿಕತೆಗೆ ಹೇಗೆ ಬೆಸೆದುಕೊಂಡಿದೆ

ಎಂಬುದು ಕಾರಣವಾಗುತ್ತದೆ. ಆಧುನಿಕತೆಯ ತಂತ್ರಜ್ಞಾನಗಳ ಬದಲಾವಣೆಯಲ್ಲಿ ಮಾನವನ ಸಂಸ್ಕೃತಿಯು ವಿಶಾಲವಾಗಲು ಅವುಗಳೊಂದಿಗಿನ ಹೊಂದಾಣಿಕೆಯು ಅಷ್ಟೇ ಪ್ರಮುಖವಾಗಿರುತ್ತದೆ. ಅಲ್ಲದೆ ಅದು ಸಮಕಾಲೀನ ವಸ್ತು ಪರಿಸ್ಥಿತಿಯನ್ನು ತಿಳಿಗೊಳಿಸಿ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದಂತಾಗುತ್ತದೆ.

"ಬದಲಾಗುತ್ತಿರುವ ಇಂದಿನ ಆಧುನೀಕರಣದ ಹಿನ್ನಲೆಯಲ್ಲಿ ದೈವಿ ಪರಿಕಲ್ಪನೆ ಹೊಸತನವನ್ನು ಮೈಗೂಡಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಸಮಾಜ ಬದಲಾದಂತೆಲ್ಲಾ ಮಾನವನ ಸಂಸ್ಕೃತಿಯಲ್ಲಿ ಹಲವು ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಹಳೆಯ ಸಂಸ್ಕೃತಿ ನಶಿಸಿದಂತೆ ಹೊಸ ಸಂಸ್ಕೃತಿ ತನ್ನ ವಿಕಾಸವನ್ನು ಪಡೆದುಕೊಳ್ಳುತ್ತಿದೆ. ಇಂದಿನ ಆಧುನಿಕತೆಯಲ್ಲಿ ದೇವರು ಆರ್ಥಿಕ ಚಟುವಟಿಕೆಯ ಕೇಂದ್ರ ಸ್ಥಾನವಾಗುತ್ತಿದೆ. ತಾಂತ್ರಿಕವಾಗಿ ಬೆಳೆದಂತೆಲ್ಲಾ ನಾಗರಿಕತೆಯ ಬೆಳವಣಿಗೆಗೆ ಸಂಬಂಧಿಸಿದ ದೇವರ ಆಚಾರ, ವಿಚಾರ, ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಆಚರಣಾ ಪದ್ಧತಿಗಳನ್ನು ಕೆಳವರ್ಗದವರು ಅನುಸರಿಸಿ ವೈದಿಕ ಸಂಸ್ಕೃತಿಯ ಇನ್ನೊಂದು ಹೊಸಸಂಸ್ಕೃತಿಗೆ ಕಾರಣವಾಗುತ್ತದೆ."[೧]

ಮನುಷ್ಯನ ಬದುಕು ನಿಸರ್ಗದಿಂದ ಸಂಸ್ಕೃತಿಗೆ, ನಾಗರಿಕತೆಯಿಂದ ಇವತ್ತಿನ ನಾಗರಿಕತೆಗೆ ಪ್ರವೇಶಿಸಿದ ಹಿನ್ನಲೆಯಲ್ಲಿ ದೇವತೆಗಳ ಜಾತ್ರೆಹಬ್ಬಗಳು ಮತ್ತು ಆರಾಧನೆಗಳನ್ನು ಅರ್ಥೈಯಿಸಿಕೊಳ್ಳಬೇಕಾಗುತ್ತದೆ. ಇಂದಿಗೂ ನಿಸರ್ಗದ ಹಂತದಲ್ಲಿ ಇರುವ ಹಾಗೂ ನಿಸರ್ಗ ಹಾಗೂ ಸಂಸ್ಕೃತಿಯ ನಡುವೆ ಇರುವ ಗ್ರಾಮೀಣ ಸಂಸ್ಕೃತಿ ಮತ್ತು ಗ್ರಾಮೀಣ ಸಂಸ್ಕೃತಿಯನ್ನು ಮೀರಿ ಯಾವುದರ ತೆಕ್ಕೆಯಲ್ಲೂ ನಿಲ್ಲಲಾರದ ಆಧುನಿಕ ನಗರ ಸಂಸ್ಕೃತಿ ಇವುಗಳ ನಡುವೆ ನಡೆಯುತ್ತಿರುವ ಸಂಘರ್ಷಗಳನ್ನು ಅರ್ಥಮಾಡಿಕೊಳ್ಳದೆ ಈ ಆಚರಣೆಗಳನ್ನು ವಿಶ್ಲೇಷಿಸಲು ಸಾಧ್ಯವಿಲ್ಲ. ಏಕೆಂದರೆ ಭೂಮಿಯ ಒಡೆತನ ಅನಂತರ ಬೆಳೆದ ಪ್ರಭುತ್ವ ನಂತರ ಹಂತ ಹಂತಗಳಲ್ಲಿ ಸೃಷ್ಟಿಗೊಂಡ ಶ್ರೇಣೀಕರಣ ವ್ಯವಸ್ಥೆ. ದೇವತೆಗಳ ಹಬ್ಬವೆಂದರೆ ಅದು ಕೇವಲ ಮನರಂಜನೆಯಲ್ಲ. ಬದಲಿಗೆ ಹೊಸ ಇತಿಹಾಸವನ್ನು ತೆರದಿಡುವ ಸಾಂಸ್ಕೃತಿಕ ಸತ್ಯಗಳು. ಹಾಗೆಯೇ ಸಂಸ್ಕೃತಿ ಎಂಬುದು ಸರಳೀಕರಣ ವಸ್ತುವಲ್ಲ ಬದಲಾಗಿ ಮಾನವನ ನವ ನಾಗರಿಕತೆ ತಲುಪಬಹುದಾದ ಸ್ಥಿತಿಯನ್ನು ಕಂಡಾಗ ಮನುಷ್ಯ ಕೂಡ ಪರಂಪರೆಯಲ್ಲಿನ ಯಾವುದೇ ಒಂದು ಮೂಲದ ಏಳಿಗೆಗೆ ಅಂಟಿಕೊಂಡಿರುತ್ತಾನೆ ಎಂಬುದನ್ನು ಮನಗಾಣಬಹುದು.

ಆಧುನೀಕರಣ ಬೆಳವಣಿಗೆಯ ಒಂದೊಂದು ವಸ್ತು ವಿಷಯದಲ್ಲೂ ಬೇರೆ ಬೇರೆ ರೀತಿಯ ಪ್ರಭಾವವನ್ನು ಕಾಣಬಹುದು ಅದು ಮನುಷ್ಯನ ಬದುಕಿನಲ್ಲಿನ. ಅವನ ಜೀವನಕ್ಕಾಗಿ ಅವಲಂಬಿಸಿರುವ ಕೃಷಿಯಾಗಿರಬಹುದು, ಉಡುಗೆ ತೊಡುಗೆಯಾಗಿರಬಹುದು, ಅಥವಾ

ಆರಾಧಿಸುವ ದೈವ ಭಕ್ತಿಯಾಗಿರಬಹುದು ಮಾನವ ತಾನು ನಂಬಿ ಆರಾಧಿಸುವ ದೇವರುಗಳು ನಮ್ಮ ಕಷ್ಟಗಳನ್ನು ನಿವಾರಿಸಿ ಸುಖ ಸಮೃದ್ಧಿಯನ್ನು ಕೊಡುವವು ಎಂಬ ನಂಬಿಕೆಯಲ್ಲಿ ದೇವರನ್ನು ಪೂಜಿಸಿಕೊಂಡು ಬರುತ್ತಿರುವುದು ಹಳೆಯ ಸಂಗತಿ. ಆಯಾ ಕಾಲಕ್ಕೆ ತಕ್ಕಂತೆ ಮಾನವ ಏನೆಲ್ಲಾ ಬದಲಾವಣೆಗೆ ಒಳಗಾದಂತೆ ತಾನು ಪೂಜಿಸುವ ದೈವ ಮತ್ತು ಅಲ್ಲಿಯ ಪರಿಸರವನ್ನು ಬದಲಾವಣೆಗೊಳಪಡಿಸಿದರೂ ತಾನು ಎಷ್ಟೇ ಆಧುನಿಕತೆ ತಂತ್ರಜ್ಞಾನದ, ವೈಜ್ಞಾನಿಕತೆಯತ್ತ ಸಾಗಿದರೂ ಈ ದೇವರ ಆರಾಧನೆಯಿಂದ ಹೊರತಾಗಿಲ್ಲ. ತಾನು ಮಾಡುವ ಕಾಯಕದಲ್ಲಿ ದೇವರನ್ನು ಕಾಣುತ್ತಾನೆ. ಆರಾಧನೆಯು ಪ್ರಾಚೀನ ಮಾನವನ ಅಜ್ಞಾನದ ಕೊಡುಗೆಯಾದರು. ಆಧುನಿಕ ಸಂದರ್ಭದಲ್ಲಿ ಅವನ ಬದುಕಿನಲ್ಲಿ ಬದಲಾವಣೆಯಾದಂತೆ ತಾನು ಪೂಜಿಸುತ್ತಾ ಬಂದ ದೇವರ ನಂಬಿಕೆಯು ಬೇರೆಯದೆ ಆದ ರೂಪದಲ್ಲಿ ಸಾಗಿರುವುದಾಗಿದೆ.

ನಾಗರಿಕತೆ ವಿಜ್ಞಾನದ ಜೊತೆ ಬೆಳೆದಂತೆಲ್ಲಾ ಅದರ ಆಕಾರವು ಬದಲಾಗುತ್ತಾ ಸಮುದಾಯಗಳ ಮನಸ್ಸು ವಿಭಿನ್ನವಾಗುತ್ತಾ ಸಾಗುತ್ತದೆ. ನಾಗರಿಕತೆಯು ಹೆಚ್ಚು ಹೆಚ್ಚು ಬೆಳೆದಂತೆಲ್ಲಾ ಅದರ ಜಾನಪದದ ಹಳೆಯ ಸ್ವರೂಪ ಮರೆಯಾಗುತ್ತಿರುತ್ತದೆ. ನಿರಂತರ ಹಾಗೂ ರೂಪಾಂತರ ಜೀವನಕ್ಕೆ ಪಠ್ಯಗಳಿಗೆ ಒಳಗಾಗುವಂತಹ ನಾಗರಿಕತೆಗಳು ಅವಸಾನಗೊಂಡಿದ್ದರು. ಅದರ ಇನ್ನೊಂದು ಜೀವ ಮತ್ಯಾವುದೋ ರೂಪದಲ್ಲಿ ಕವಲೊಡೆದಿರುತ್ತದೆ. ಹರಪ್ಪ ಮೊಹಂಜದಾರೋ ಕಾಲದ ನಾಗರಿಕತೆ ಇವತ್ತು ಇಲ್ಲದಿರಬಹುದು ಅಂತಹ ಕ್ರಮ ಕಣ್ಣಿಗೆ ಎದುರಾಗದಿರಬಹುದು ಆದರೆ ನಾಗರಿಕತೆ ಒಟ್ಟು ಮನುಷ್ಯನ ಮೆದುಳಿನಲ್ಲಿ ರಕ್ತದಲ್ಲಿ ಐಕ್ಯವಾಗಿರುತ್ತದೆ. ಹಾಗೆಯೇ ಜಾನಪದದಲ್ಲಿಯು ಕೂಡ ಸಂಸ್ಕೃತಿಯ ಮೂಲಕ ಹುಟ್ಟುವ ಯಾವೊಂದನ್ನು ಸಮುದಾಯಗಳು ಮಣಿಸಲು ಸಾಧ್ಯವಿಲ್ಲ.

ಆಧುನಿಕತೆ ಎಂಬ ಪದವು ನಗರಕ್ಕೆ ಮಾತ್ರ ಸಂಬಂಧಿಸಿದ್ದು ಗ್ರಾಮೀಣವಲ್ಲದ್ದು, ವಿದ್ಯಾವಂತರ ಶಿಷ್ಟರ ಜಗತ್ತಿಗೆ ಸೇರಿದ್ದು, ವೈಚಾರಿಕವಾದುದು, ಪ್ರಗತಿಪರವಾದುದು, ವೈಜ್ಞಾನಿಕವಾದುದು ಇವೆ. ಮೊದಲಾದ ಅರ್ಥಗಳನ್ನು ಒಳಸಲಾಗುತ್ತದೆ. ಈ ಎಲ್ಲಾ ಅರ್ಥಗಳು ಪರಸ್ಪರ ಸಂಬಂಧಪಟ್ಟವುಗಳಾಗಿವೆ. ಮತ್ತು ಎಲ್ಲಾ ಅರ್ಥಗಳನ್ನು ಒಳಗೊಂಡ ಇಡೀ ಆಧುನಿಕತೆಯ ಪರಿಕಲ್ಪನೆಯೇ ವಸಾಹತುಕರಣ, ಕೈಗಾರಿಕರಣ ನಾಗರೀಕರಣಗಳ ಜೊತೆಯಲ್ಲಿ ಭಾರತಕ್ಕೆ ಬಂದದ್ದಾಗಿರುತ್ತದೆ. ಭಾರತೀಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬದುಕಿನೊಳಗೆ ಅಂತರ್ ಮುಖದ ಕ್ರಿಯಾಶೀಲತೆಯನ್ನು ಪ್ರದರ್ಶಿಸುತ್ತಿರುತ್ತದೆ. ಆಧುನಿಕತೆಯನ್ನು ತಂದ ಜನ ಈ ದೇಶ ಬಿಟ್ಟು ಹೋದರು ಸಹ ತಾನು ಮಾತ್ರ ಇಲ್ಲಯೇ ಉಳಿದುಕೊಂಡು ಇಲ್ಲಿನ ಜನರ ಬದುಕನ್ನು ತನ್ನ ಕೈಗೆ ತೆಗೆದುಕೊಂಡು ತನಗಿಷ್ಟ ಬಂದಂತೆ ಆಟವಾಡಿಸುತ್ತಿದೆ ಎನ್ನುವುದು ಸ್ಪಷ್ಟವಾಗಿದೆ.

ಆಧುನಿಕ ಸಂದರ್ಭದಲ್ಲಿ ಮಾನವನ ಮೇಲೆ ಹೊಸ ರೀತಿಯ ಪ್ರಭಾವ ಕಂಡುಬರುತ್ತದೆ. ಹೊಸ ಬಗೆಯ ನಾಗರಿಕತೆಯ ಪ್ರಭಾವ ದಟ್ಟವಾಗಿ ಹರಡಿಕೊಂಡಿದೆ. ಅನೇಕ ರೀತಿಯ ವೈಜ್ಞಾನಿಕ ಉಪಕರಣಗಳು ಇಂದು ನಿತ್ಯ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಆದರೂ ಹಳೆಯ ತಲೆಮಾರಿನ ಜನರ ಆಚರಣೆಗಳಲ್ಲಿ ತಮ್ಮದೇ ಆದ ನಂಬಿಕೆಗಳಿಂದ ತಮ್ಮ ಬದುಕಿನಲ್ಲಿ ನೆಮ್ಮದಿಯನ್ನು ಕಾಣುತ್ತಾರೆ. ಗ್ರಾಮ ಮತ್ತು ನಗರ ಪ್ರದೇಶದಲ್ಲಿ ವಾಸಿಸುವ ಜನರು ಭಯ ಭಕ್ತಿಯಿಂದ ದೇವರನ್ನು ಪೂಜಿಸುವುದು ಕಂಡುಬರುತ್ತದೆ. ಹಿಂದಿನ ಕಾಲಕ್ಕಿಂತಲೂ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಪೂಜೆ ಪುರಸ್ಕಾರಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಸಂಸಾರಿಕ ಜೀವನದ ಸುಖ ಸಂತೋಷಕ್ಕಾಗಿ ಹರಕೆಗಳ ರೂಪದಲ್ಲಿ ಹಲವಾರು ಆಚರಣೆಗಳನ್ನು ಮಾಡುತ್ತಾರೆ. ಮೊದಲು ದೇವರನ್ನು ನೆನೆದು ಮುಂದಿನ ಕೆಲಸ ಕಾರ್ಯಗಳನ್ನು ಮಾಡುವುದು ಆಯಾ ಪ್ರದೇಶಕ್ಕನುಗುಣವಾಗಿ ಕಾಣಬಹುದು.

ಜಾತ್ರೆಗಳ ಆಚರಣೆ

ಜಾತ್ರೆಯು ಜನರ ನೈತಿಕತೆಯನ್ನು ಎತ್ತಿ ಹಿಡಿಯುತ್ತದೆ. ಈ ಕಾರಣಕ್ಕಾಗಿಯೇ ಇದು ಗ್ರಾಮೀಣ ಸಮುದಾಯದ ಜನಸಾಮಾನ್ಯರ ಜೀವನದ ಅವಿಭಾಜ್ಯ ಅಂಗವಾಗಿದೆ. ಜಾತ್ರೆಗಳಲ್ಲಿ ವ್ಯಾಪಾರ ಚಟುವಟಿಕೆಗಳು ಬಿರುಸಿನಿಂದ ಸಾಗುತ್ತವೆ. ಜನರು ಬರುವುದು ಭಕ್ತಿ, ಸಮರ್ಪಣೆಗೆ ಇದಕ್ಕೆ ಜಾತ್ರೆಗಳ ಹಿಂದೆ ಇರುವ ಧಾರ್ಮಿಕ ಭಾವನಾತ್ಮಕ ಹಿನ್ನೆಲೆಯೇ ಕಾರಣವಾಗಿದೆ. ಸುಗ್ಗಿ ಮುಗಿದ ನಂತರ ಜಾತ್ರೆಗಳು ನಡೆಯುತ್ತವೆ. "ನಿರಂತರ ದುಡಿಮೆಯ ಯಾತ್ರಿಕ ಬದುಕಿನಲ್ಲಿ ರೈತರ ದಣಿವನ್ನು ಮರೆಸುವ ಇಂತಹ ಸಾಂಸ್ಕೃತಿಕ ಉತ್ಸಾಹದ ಪರಿಕಲ್ಪನೆಯನ್ನು ನಮ್ಮ ಪೂರ್ವಿಕರು ಮಾಡಿದ್ದು ಒಂದು ಅಮೃತಗಳಿಗೆ" ಎಂಬ ಟಿ. ಆರ್. ಮಹದೇವಯ್ಯ ಅವರ ಮಾತು ಜಾತ್ರೆಗಳು ವಿಶ್ರಾಂತಿಯ ಜೊತೆಗೆ ಮನರಂಜನೆಯನ್ನು ಒದಗಿಸುತ್ತವೆ ಎಂಬುದನ್ನು ತಿಳಿಸುತ್ತದೆ. ಜಾತ್ರೆಗಳು ಜನಸಾಮಾನ್ಯರ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ಜಾತ್ರೆಗಳು ಜನಸಮುದಾಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿಶಿಷ್ಟತೆಗಳಲ್ಲಿ ವಿಶೇಷತೆಯನ್ನು ಮೈಗೂಡಿಸಿಕೊಂಡಿರುವ ಸಾಧನಗಳಾಗಿವೆ.

ಜಾತ್ರೆಗಳು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಸಾಮಾಜಿಕ ಅವಶ್ಯಕತೆಗಳ ಈಡೇರಿಕೆಯ ಜೀವಂತ ಸಾಧನಗಳಾಗಿವೆ. ಚಲನಶೀಲ ಸಮಾಜದ ಪ್ರಧಾನ ಅಂಶಗಳಾದ ವ್ಯಕ್ತಿ ಸಮಷ್ಠಿ, ಭಾವಕ್ಯತೆ, ಧಾರ್ಮಿಕತೆ, ಆಧ್ಯಾತ್ಮಿಕತೆ, ರಕ್ಷಣೆ, ವಿಶ್ರಾಂತಿಯ ಜೊತೆಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಮನೋರಂಜನೆಯಂತಹ ವಿಭಿನ್ನ ಮೂಲಭೂತ ಅವಶ್ಯಕತೆಗಳನ್ನು ಒದಗಿಸುತ್ತವೆ.

"ಜಾತ್ರೆಗೆ ಆರ್ಥಿಕ, ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮುಖಗಳು" ಎಂದಿರುವ ಹಂಪಾ ನಾಗರಾಜಯ್ಯ ಅವರ ಮಾತು ಜಾತ್ರೆಗಳ ಅನೇಕ ಕಾರ್ಯ ವಿಶೇಷತೆಗಳಿಗೆ ಪುಷ್ಟಿ ನೀಡುತ್ತದೆ.

ಒಟ್ಟಾರೆ ಹಲವು ಆಶಯಗಳನ್ನೊಳಗೊಂಡ ಜಾತ್ರೆಯ ವಿವಿಧ ಕಾರ್ಯಗಳನ್ನು ಈ ರೀತಿ ತಿಳಿಯಬಹುದು.

೧. ಸಂಘಟನಾ ಆಚರಣೆ

೨. ಸಮಷ್ಠಿ ಹಿತರಕ್ಷಣೆಯ ಆಚರಣೆ

೩. ಸಾಮಾಜಿಕ ಆಚರಣೆ

೪. ನೈತಿಕ ಪ್ರಜ್ಞೆ ಮೂಡಿಸುವ ಆಚರಣೆ

೫. ಸಾಂಸ್ಕೃತಿಕ ಆಚರಣೆ

೬. ರಾಜಕೀಯ ಆಚರಣೆ

ಸಂಘಟನಾ ಆಚರಣೆ

ಜಾತ್ರೆಯು ಸಮುದಾಯಗಳ ಜನರನ್ನು ವ್ಯವಸ್ಥಿತವಾಗಿ ಒಂದು ಗೂಡಿಸುವ ಕಾರ್ಯವನ್ನು ಮಾಡುತ್ತದೆ. ಈ ಸಮಯದಲ್ಲಿ ಜನರು ತಮ್ಮ ಎಲ್ಲಾ ಬಗೆಯ ಭೇದ-ಭಾವಗಳನ್ನು, ದ್ವೇಷ, ಅಸೂಯೆ, ಸ್ವಾರ್ಥ, ಮನೋಭಾವ ಮೊದಲಾದವುಗಳಿಂದ ಹೊರತಾಗಿ ಪ್ರೀತಿ, ವಿಶ್ವಾಸ, ಮಮತೆ, ವಾತ್ಸಲ್ಯ ಇತ್ಯಾದಿಗಳಿಂದಕೂಡಿ ದೇವತೆಯ ಕಾರ್ಯವನ್ನು ಯಶಸ್ಸುಗೊಳಿಸಲು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ದೇವಿಯ ಜಾತ್ರೆಯು ಪವಿತ್ರವೆಂಬ ಭಾವನೆ ಜನರಲ್ಲಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಜಾತ್ರೆಯ ಸಮಯದಲ್ಲಿ ಜಾತಿ, ಮತ, ಪಂಥ, ಪಂಗಡ, ವರ್ಣ, ವರ್ಗ ಭೇದವಿಲ್ಲದೆ ಸಮುದಾಯಗಳ ಎಲ್ಲಾ ಜನರು ಸಾಮರಸ್ಯದಿಂದ ಒಂದುಗೂಡಿ ದೇವರ ಕಾರ್ಯಗಳನ್ನು ಭಕ್ತಿ ಭಾವದಿಂದ ನೆರವೇರಿಸುತ್ತಾರೆ. "ದೇವರ ಸೇವೆ ಹೆಸರಿನಲ್ಲಿ ಪರಸ್ಪರ ಸಹಕಾರ ಧನ್ಯತೆಯ ಭಾವದ ಜೊತೆ ಜೊತೆಗೆ ಗ್ರಾಮಾಭ್ಯುದಯದ ಕನಸು ಕೂಡಿರುತ್ತದೆ" ಎಂಬ ಚಿಕ್ಕಣ್ಣ ಯಣ್ಣೆಕಟ್ಟೆ ಅವರ ಮಾತು ಸಮಾಜ ಸಂಘಟನೆಯ ಕಾರ್ಯವನ್ನು ಜಾತ್ರೆಗಳು ನಿರ್ವಹಿಸುತ್ತವೆ ಎಂದು ತಿಳಿಸಿದ್ದಾರೆ.

ಗ್ರಾಮ ದೇವರುಗಳ ಆಚಾರ-ವಿಚಾರ, ನೀತಿ-ನಿಯಮ, ಕಟ್ಟುಪಾಡು ಅವರನ್ನು ಐಕ್ಯತೆಯ ಸೂತ್ರದಲ್ಲಿ ಬಂದಿಸಿತು. ದೇವರ ಉತ್ಸಾಹದಲ್ಲಿ ಕೂಡಿ ಮಾಡುವುದೇ ಬದುಕಿನಲ್ಲಿ ಒಂದುಗೂಡಿ ದುಡಿಯುವ, ಉಣ್ಣುವ, ಆಡುವ, ಕುಣಿಯುವ, ಬಾಳುವ, ಸಂಘಟನಾ

ಮನೋಭಾವನೆ ಅವರಲ್ಲಿ ಬರುತ್ತದೆ. ಸಾಮಾಜಿಕ ಸಾಮರಸ್ಯ ಮತ್ತು ಸಾಮಾಜಿಕ ಐಕ್ಯತೆಯ ಕಾರ್ಯಗಳಲ್ಲಿ ಜನರು ಗ್ರಾಮದ ದೇವಿಯ ಜಾತ್ರೆಯಲ್ಲಿ ಎಲ್ಲಾ ಕಾರ್ಯ ಚಟುವಟಿಕೆಗಳು ಮನವರಿಕೆ ಮಾಡಿಸುತ್ತಾರೆ.

ಸಮಷ್ಠಿ ಹಿತರಕ್ಷಣೆಯ ಆಚರಣೆ

ಜಾತ್ರೆಗಳ ಆಚರಣೆಯಲ್ಲಿ ಕೇವಲ ವೈಯಕ್ತಿಕ ಹಿತರಕ್ಷಣೆ ಮಾತ್ರ ಅಡಗಿರದೆ ಸಮಷ್ಠಿಯ ಹಿತವೂ ಅಡಗಿದೆ. ಇಡೀ ಗ್ರಾಮಕ್ಕೆ ಒಳಿತಾಗಲೆಂಬ ವಿಶಾಲ ಉದ್ದೇಶದ ಹಿನ್ನೆಲೆಯಲ್ಲಿ ಜಾತ್ರೆಗಳ ಆಚರಣೆಗಳನ್ನು ಸಂಪ್ರೀತಿಗೊಳಿಸುವುದರಿಂದ ಇಡೀ ಗ್ರಾಮಕ್ಕೆ ಒಳ್ಳೆಯದಾಗುತ್ತದೆ ಎಂಬ ದೂರದೃಷ್ಟಿ ಇದೆ. ಒಂದು ನೆಲೆಯಲ್ಲಿ ವಾಸಿಸುವ ಜನರೆಲ್ಲ ಮಳೆ, ಬೆಳೆ ಚೆನ್ನಾಗಿ ಆಗಲೆಂದು ತಮ್ಮ ದನಕರುಗಳು ವೃದ್ಧಿಸಲೆಂದು ಇಷ್ಟವಾದ ದೇವರ ದೈವದ ಮೊರೆ ಹೋಗುತ್ತಾರೆ. ಇವರ ಕೋರಿಕೆಯಂತೆ ಎಲ್ಲವೂ ನೆರವೇರಿದಾಗ ಮಾನವನ ಮನಸ್ಸು ಸಂತೋಷಪಡಿಸಿಕೊಂಡು ಇದಕ್ಕೆ ತಾವು ನಂಬಿದ ದೈವವೇ ಕಾರಣವೆಂದು ಇಡೀ ಸಮುದಾಯಗಳ ಜನರು ಅದರ ಆರಾಧನೆಯ ಕಾರ್ಯದಲ್ಲಿ ಪಾಲ್ಗೊಂಡು ತಮ್ಮ ಹರಕೆ ತೀರಿಸುತ್ತಾರೆ. ಜಾತ್ರೆಯ ಸಮಯದಲ್ಲಿ ಜರುಗುವ ಮನರಂಜನಾ ಕಾರ್ಯಗಳು ಸಮಾಜಕ್ಕೆ ತಿಳುವಳಿಕೆ ಮಾರ್ಗದರ್ಶನ ನೀಡುತ್ತವೆ. ಇದರಿಂದಾಗಿ ಸಾಮಾಜಿಕ ಸಂಬಂಧಗಳು, ಸಂಕುಚಿತತೆಯಿಂದ ಹೊರಬಂದು ಮಧುರಗೊಂಡು ಸಮುದಾಯಗಳು ಅಭಿವೃದ್ಧಿಯಾಗುತ್ತವೆ. ಸಾಮೂಹಿಕ ಕಷ್ಟಗಳ ನಿವಾರಣೆಗೆ ಮಾನವ ಹಿಂದಿನಿಂದಲೂ ಎಲ್ಲಾ ಸಮಾಜಗಳಲ್ಲಿ ದೈವದ ಮೊರೆ ಹೋಗಿರುವುದು ಮತ್ತು ಹೋಗುತ್ತಿರುವುದು ಕಟು ಸತ್ಯ. ದೇವರ ಅನುಗ್ರಹದಿಂದ ಸಾಮಾಜಿಕ ದುಷ್ಟ ಶಕ್ತಿಗಳ ದಮನವಾಗಿ ಸಮುದಾಯಗಳ ಜನರ ಕಷ್ಟ ನಿವಾರಣೆಯಾಗಿ ಸುಖಃ ಶಾಂತಿ, ಸಂಪತ್ತು ಸಮೃದ್ಧಿಯಿಂದ ಮಾನವರ ಕಲ್ಯಾಣವಾಗುವುದಾಗಿದೆ. ನಂಬಿಕೆಯ ಹಿನ್ನೆಲೆಯಲ್ಲಿ ಜನರು ದೇವಿಗೆ ಹರಕೆಗಳು, ನಂಬಿಕೆಗಳು, ಸಂಪ್ರದಾಯ ಪದ್ಧತಿಗಳು ಆಚರಣೆಯನ್ನು ಮಾಡುತ್ತಾರೆ.

ಸಾಮಾಜಿಕ ಆಚರಣೆ

ಜಾತ್ರೆಗಳು ಆಯಾ ಊರಿನ ಹೆಸರಿನಿಂದಲೇ ಕರೆಯಲ್ಪಡುತ್ತವೆ. ಊರಿನ ಎಲ್ಲಾ ಜನಾಂಗದವರು ಮತ್ತು ಸುತ್ತಮುತ್ತಲ ಊರಿನ ಅನೇಕರು ಜಾತ್ರೆಗಳಲ್ಲಿ ಸೇರುವುದರಿಂದ ಬದುಕಿನ ಏಕತಾನತೆಯನ್ನು ಮರೆತು ಜನರು ನಲಿಯುತ್ತಾರೆ. ಜನಸಾಮಾನ್ಯರ ಸಾಮಾಜಿಕ ಸೇವಾಕೇಂದ್ರಗಳಾಗಿ ಜಾತ್ರೆಗಳು ಕಾರ್ಯನಿರ್ವಹಿಸುತ್ತವೆ. ಜಾತ್ರೆಗಳಿಂದ ವಿವಿಧ ಸಮುದಾಯಗಳ ಮಧ್ಯೆ ಸಾಮಾಜಿಕ ಸಂಪರ್ಕವೇರ್ಪಟ್ಟು ಪರಿವರ್ತನೆಗೂ ಕಾರಣವಾಗುತ್ತದೆ. ಜಾತ್ರೆಗಳಲ್ಲಿ ವಿಭಿನ್ನ ವೇಷಭೂಷಣಗಳಿಂದ ಅಲಂಕೃತಗೊಂಡ ಹೆಂಗಸರು, ಗಂಡಸರು ಮಕ್ಕಳು ಸೇರಿರುತ್ತಾರೆ. ಸಮಾಜದ ವೈವಿಧ್ಯತೆಯ ಮುಖಗಳ ಅಧ್ಯಯನಕ್ಕೆ ಜಾತ್ರೆ ಒಂದು

ವೇದಿಕೆಯನ್ನು ಒದಗಿಸುತ್ತದೆ. ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ಜಾತ್ರೆಯಲ್ಲಿ ದೇವರಗುಡಿ, ರೀತಿ–ನೀತಿ, ಆಚಾರ–ವಿಚಾರ ಮೊದಲಾದ ಕಾರ್ಯಗಳು ನಡೆಯುತ್ತವೆ. ಜಾತ್ರೆಗಳು ಬಂಧು–ಬಾಂಧವರನ್ನು, ಮಿತ್ರರನ್ನು ಒಂದುಗೂಡಿಸುವ ಕಾರ್ಯವನ್ನು ಮಾಡುತ್ತವೆ.

ಜಾತ್ರೆಯಲ್ಲಿ ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ವಿಚಿತ್ರ ಜನ, ವಿಲಕ್ಷಣ ಪ್ರಸಂಗಗಳು ನಮಗೆ ಕಾಣಸಿಗುತ್ತವೆ. ಕುತೂಹಲಗಳಿಂದ ಚೆಣ್ಣರು, ಗ್ರಾಮೀಣ ಸೊಗಡಿನ ಸೋಬಾನೆ, ಹಾಡುಗಳು ಜನಪದ ಹಾಡುಗಳು, ಹೆಣ್ಣುಮಕ್ಕಳು ಕುಶಲ ವ್ಯಾಪಾರಿಗಳು, ಭಕ್ತ ಸಂಪನ್ನ ನಿಜಭಕ್ತರು, ಸೇವಾಭಾವದ ಯುವಜನತೆ ಪ್ರದರ್ಶನ ಪ್ರಿಯರ ಸಮಯ ಸಾಧಕರು ಎಷ್ಟೊಂದು ವೈವಿಧ್ಯ. ಜಾತ್ರೆಯಲ್ಲಿ ನೆರೆದ ಜನರು ವಿಭಿನ್ನ ಜಾತಿ, ವರ್ಗ, ಬುಡಕಟ್ಟು, ಜನಸಮುದಾಯಗಳನ್ನು ಒಂದೇ ನೆಲೆಯಲ್ಲಿ ಸೇರಿಸುವಂತೆ ಮಾರುವಲ್ಲಿ ಜಾತ್ರೆಗಳಲ್ಲಿ ಪಾತ್ರ ಮಹತ್ವದ್ದು. “ಮನುಷ್ಯನಿಂದ ಹುಟ್ಟಿದ ದೇವರು ಮನುಷ್ಯನ ಇಡೀ ಬದುಕನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಸಾಮಾಜಿಕ ಸ್ವಾರ್ಥ ಕಾಪಾಡಿಕೊಂಡು ಬಂದದ್ದು” ಜಾತ್ರೆಯ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ.

ನೈತಿಕ ಪ್ರಜ್ಞೆ ಮೂಡಿಸುವ ಆಚರಣೆ

ಜಾತ್ರೆಯ ಕ್ರಿಯಾ ವಿಧಿ–ವಿಧಾನಗಳು, ಸಮಾಜ ಒಪ್ಪಿತ ನಿಯಮದಂತೆ ಕಾರ್ಯನಿರ್ವಹಿಸುತ್ತವೆ. ಸಮಾಜ ಒಪ್ಪಿತ ಕಾರ್ಯವಿಧಾನವೇ ನೈತಿಕತೆ. ಜಾತ್ರೆಯ ಆಚರಣೆಯ ಸಮಾಜ ಒಂದರಲ್ಲಿ ಭದ್ರವಾಗಿ ನೆಲೆಗೊಳ್ಳಲು ಅದು ಆ ಸಮಾಜದ ನೈತಿಕತೆಗೆ ಅನುಗುಣವಾಗಿ ನಡೆಯುವುದೇ ಕಾರಣವಾಗಿದೆ. ಜಾತ್ರೆಯ ಸಮಯದಲ್ಲಿನ ನೈತಿಕ ಕಾರ್ಯ ವಿಧಾನಗಳು ಆ ಸಮಾಜದ ಬಹುದಿನಗಳ ಅನುಭವದ ಫಲಶೃತಿಯಾಗಿರುತ್ತವೆ. ಜಾತ್ರೆಯ ಸಮಯದಲ್ಲಿ ಆಚರಿಸಲ್ಪಡುವ ಕೆಲವು ಮೌಲ್ಯಗಳನ್ನು ತಮ್ಮ ಜೀವನದ ವಿಧಿ ನಿಯಮಗಳಾಗಿ ಹೇಳಿಕೊಳ್ಳುವ ಇಚ್ಚೆಯನ್ನು ಹೊಂದುವ ಅಂಶಗಳೇ ನೈತಿಕತೆ. ಇಂತಹ ಅಂಶಗಳನ್ನು ಜಾತ್ರೆಗಳಲ್ಲಿ ಆಚರಿಸುವುದರಿಂದ ಅಂತಹ ವ್ಯಕ್ತಿಗಳ ಜೀವನ ಮೌಲ್ಯಯುತವಾಗುತ್ತದೆ ಎಂದು ಜನರು ನಂಬುತ್ತಾರೆ. ಜಾತ್ರೆಯ ಆಚರಣೆಯ ಸಮಯದಲ್ಲಿ ಜನರ ನಡವಳಿಕೆಯನ್ನು ನಿರ್ಧರಿಸುವ ಮತ್ತು ತಪ್ಪಿದರೆ ಅವರ ವರ್ತನೆಯನ್ನು ನಿಯಂತ್ರಿಸುವ ಕಾರ್ಯವೇ ನೈತಿಕ ಪ್ರಜ್ಞೆ ಮೂಡಿಸುವ ಕಾರ್ಯವಾಗಿದೆ.

ಸಾಮಾಜಿಕ ಸಾಮರಸ್ಯವನ್ನು ಸಾಧಿಸಲು ಕೆಲವು ಅಂಶಗಳನ್ನು ಸಮುದಾಯದ ಹಿತಾಸಕ್ತಿಗೆ ತಕ್ಕಂತೆ ಹೊಂದಿಕೊಂಡು ಆಚರಿಸುವಂತೆ ವ್ಯಕ್ತಿಯ ಮೇಲೆ ಒತ್ತಡ ತರಬಲ್ಲ ಸಮಾಜ ಒಪ್ಪಿತ ಜನಪ್ರಿಯ ಪದ್ಧತಿ ಮತ್ತು ಪರಂಪರೆಗಳ ನಂಬಿಕೆ ಹಾಗೂ ಆಚರಣೆಗಳ ಮೊತ್ತ ನೈತಿಕ ಪ್ರಜ್ಞೆಯ ಕಾರ್ಯವಾಗಿದೆ.

ಜಾತ್ರೆಯ ಸಮಯದಲ್ಲಿ ಈ ಆಚರಣೆಯನ್ನು ಈ ಜಾತಿಯವರೇ ಮಾಡಬೇಕು. ಈ ವಂಶದವರಿಂದಲೇ ಈ ಕಾರ್ಯ ನಡೆಯಬೇಕು ಎಂಬ ಪಾರಂಪರಿಕ ಕಾರ್ಯವಿಧಾನವನ್ನು ಅನುಸರಿಸಿ ನಡೆಯುವುದು ಹಾಗೂ ಈ ಹಿನ್ನೆಲೆಯಲ್ಲಿ ಜಾತ್ರೆಯ ಆಚರಣೆಯ ಕುರಿತಾದ ನ್ಯಾಯ-ಅನ್ಯಾಯ, ಸರಿ-ತಪ್ಪು, ಒಳಿತು-ಕೆಡುಕುಗಳನ್ನು ನಿರ್ಧರಿಸುವ ಕಾರ್ಯವನ್ನು ನೈತಿಕ ಪ್ರಜ್ಞೆಯ ಕಾರ್ಯ ನಿರ್ವಹಿಸುತ್ತದೆ. ಇದು ಸಮೂಹದ ಜನಜೀವನದ ಮಟ್ಟವನ್ನು ಆದರ್ಶವನ್ನು ಹಾಗೂ ಜೀವನ ಮೌಲ್ಯಗಳನ್ನು ನಿರ್ಧರಿಸುತ್ತದೆ.

ಸಾಂಸ್ಕೃತಿಕ ಆಚರಣೆ

ಜಾತ್ರೆಯ ಸಮಯದಲ್ಲಿ ಸಾಂಸ್ಕೃತಿಕ ಆಚರಣೆಗಳು, ಧಾರ್ಮಿಕ, ಸಾಮಾಜಿಕ, ಆರ್ಥಿಕ ಆಯಾಮಗಳೊಡನೆ ಸೇರಿಕೊಂಡಿವೆ. ಜಾತ್ರೆಯ ಹಿಂದಿರುವ ಸಾಂಸ್ಕೃತಿಕ ಅನನ್ಯತೆಯ ಕಾರ್ಯನಿರ್ವಹಿಸುತ್ತವೆ. ಜಾತ್ರೆಗಳ ಅಂಗವಾಗಿ ಏರ್ಪಡುವ ಸಾಂಸ್ಕೃತಿಕ ಆಯಾ ಸಮಾಜದಲ್ಲಿರುವ ಗುಡಿ, ಗೋಪುರಗಳು, ಮಠ ಮಾನ್ಯಗಳು ಕಾರ್ಯನಿರ್ವಹಿಸುತ್ತವೆ. ಸಾಂಸ್ಕೃತಿಕ ಕಾರ್ಯದಲ್ಲಿ ಸಮಾಜದ ಆರೋಗ್ಯವೃದ್ಧಿ ಮಾನಸಿಕ ಶಾಂತಿ ಮತ್ತು ನೆಮ್ಮದಿ ಹಾಗೂ ಸಕಲ ಐಶ್ವರ್ಯಗಳು ಅಡಕವಾಗಿವೆ. ಅಲ್ಲದೆ ಸಮುದಾಯಗಳು ಒಂದರ ಭಕ್ತಿ, ಭಾವಗಳು, ರೀತಿ-ನೀತಿಗಳು ಮತ್ತು ಹರಕೆಗಳು ಜಾತ್ರೆಯ ಸಮಯದಲ್ಲಿ ಸಾಂಸ್ಕೃತಿಕ ಅಂಶಗಳಾಗಿ ಕಾರ್ಯಗತಗೊಳ್ಳುತ್ತವೆ.

ಸಮುದಾಯದ ಸಂಸ್ಕೃತಿಯ ಕ್ರೌರ್ಯದ ಮುಖಗಳೆಂಬಂತೆ ಬಸವಿ ಪದ್ಧತಿ, ಬೆತ್ತಲೆ ಸೇವೆಗಳಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳು ಆಚರಣೆಗೂ ಜಾತ್ರೆ ವೇದಿಕೆಯಾಗಿದೆ.

ರಾಜಕೀಯ ಆಚರಣೆ

ಜಾತ್ರೆ ಸಾಮಾಜಿಕ ಆಚರಣೆಗಳ ರಾಜಕೀಯ ಆಡಳಿತಾತ್ಮಕ ಕಾರ್ಯ ರಾಜಕೀಯ ದುರೀಣರು ಸಮಾಜವನ್ನಾಳುವಂತೆ ಗೌಡರು, ಶಾನುಭೋಗ, ತಳವಾರ, ಗೊಂಚಿಗಾರ, ದಳಪತಿ ಮೊದಲಾದವರು ಜಾತ್ರೆಯ ಆಡಳಿತ ಕಾರ್ಯವನ್ನು ನಿರ್ವಹಿಸುತ್ತಾರೆ.

ಜಾತ್ರೆಯ ಸಮಯದಲ್ಲಿ ತಲೆದೋರುವ ವ್ಯಾಜ್ಯಗಳ ಇತ್ಯಾರ್ಥ, ಭಕ್ತರಿಂದ ಕಾಣಿಕೆ ವಸೂಲಿ, ಕರವಸೂಲಿಯಂತಹ ಕಾರ್ಯಗಳನ್ನು ಜಾತ್ರೆಯ ಮುಖ್ಯಸ್ಥರು ನಿರ್ವಹಿಸುತ್ತಾರೆ. ರಾಜಕೀಯ ನಾಯಕರು ಜಾತ್ರೆಯ ಪ್ರದೇಶಗಳನ್ನು ತಮ್ಮ ರಾಜಕೀಯ ಬದುಕಿನ ಸಭೆ, ಸಮಾರಂಭಗಳ ವೇದಿಕೆಗಳಾಗಿ ಮತ ಬ್ಯಾಂಕ್‌ನ ಕೇಂದ್ರಗಳನ್ನಾಗಿ ಮಾಡಿಕೊಳ್ಳುವ ಕಾರ್ಯ ಚಟುವಟಿಕೆಗಳ ತಾಣಗಳಾಗಿಯೂ ಜಾತ್ರೆ ಪ್ರದೇಶಗಳನ್ನು ಕಾರ್ಯನಿರ್ವಹಿಸಿವೆ.

ಕೆಲವೊಮ್ಮೆ ರಾಜಕೀಯ ವ್ಯಕ್ತಿ ಜಾತ್ರೆಯ ಪ್ರದೇಶದಲ್ಲಿ ತಮ್ಮ ವರ್ಚಸ್ಸನ್ನು ಬೀರುವುದನ್ನು ಕಾಣಬಹುದು.

ಮನೋರಂಜನಾ ಆಚರಣೆ

ಜಾತ್ರೆಗಳಲ್ಲಿ ಜೀವನೋತ್ಸಾಹದ ನಗೆಯಂತೆ ಮನೋರಂಜನಾ ಕಾರ್ಯಗಳು ಜರುಗುತ್ತವೆ. ಮಾನವ ಸಮಾಜಕ್ಕೆ ಮನೋರಂಜನೆಯು ಆಹಾರದಷ್ಟೇ ಮುಖ್ಯವಾಗಿದೆ. ಕೃಷಿ ಚಟುವಟಿಕೆಯಲ್ಲಿ ತೊಡಗಿದ ರೈತರ ಅರಿಕೆ ದುಡಿದು ದೇಹ ಮತ್ತು ಮನಸ್ಸುಗಳಿಗೆ ಶಕ್ತಿ ಚೇತನಗಳು ಪಡೆಯಲು ಸಮುದಾಯಗಳು ಒಂದುಗೂಡಿ ಜಾತ್ರೆಯ ಸಮಯದಲ್ಲಿ ಆಟ ಕ್ರೀಡೆಗಳಲ್ಲಿ ವಿನೋದ ಸನ್ನಿವೇಶಗಳಲ್ಲಿ ತೊಡಗುತ್ತಾರೆ.

ಜಾತ್ರೆಯ ಸ್ಥಳಗಳಲ್ಲಿ ನೇಮಿಸಲಾದ ರಂಗಮಂಟಪದಲ್ಲಿ ಶಾಸ್ತ್ರೀಯ ಸಂಗೀತ, ಹರಿಕತೆ, ನಾಟಕ, ನೃತ್ಯ, ಪ್ರವಚನ, ಚರ್ಚೆಯಂತಹ ಮನೋರಂಜನಾ ಕಾರ್ಯಗಳು ಜರುಗುತ್ತವೆ. ಜಾತ್ರೆಯಲ್ಲಿ ಉತ್ಸವಮೂರ್ತಿಯನ್ನು ಕುರಿತಾಗಿ ಭಕ್ತ ಕಲಾವಿದರು ಹಾಡುವ ಜನಪದಗೀತೆಗಳು, ದೇವರ ಸ್ತೋತ್ರ, ಭಜನೆ, ಕೋಲಾಟ, ವೇಷಧಾರಿಗಳ ಕುಣಿತ, ಕೀಲು ಕುದುರೆ, ನಂದಿಕೋಲು ವಿವಿಧ ಕ್ರೀಡೆಗಳು ಹಲವಾರು ಜಾತ್ರೆಯಲ್ಲಿ ಮನೋರಂಜನಾ ಕಾರ್ಯಗಳು ರಸಮಂಜರಿ ಕಾರ್ಯಗಳು ಜರುಗುತ್ತವೆ.

ಆರ್ಥಿಕ ಆಚರಣೆ

ಸುಗ್ಗಿ ಮುಗಿದ ನಂತರ ಜಾತ್ರೆಗಳು ನಡೆಯುವುದರಿಂದ ಜನರು ತಾವು ಬೆಳೆದಿರುವುದನ್ನು ಜಾತ್ರೆಯಲ್ಲಿ ಮಾರಿ ತಮಗೆ ಬೇಕಾದ ವಸ್ತುಗಳನ್ನು ಪಡೆದುಕೊಳ್ಳುತ್ತಾರೆ. ನಂತರ ದಿನಗಳಲ್ಲಿ ಹಣದ ಪ್ರಾಧಾನ್ಯತೆ ಹೆಚ್ಚಿದಂತೆ ವ್ಯವಹಾರಿಕ ಚಟುವಟಿಕೆಗಳು ಜಾತ್ರೆಯನ್ನು ಆರ್ಥಿಕ ಕೇಂದ್ರವನ್ನಾಗಿ ಮಾಡಿಕೊಳ್ಳುತ್ತಾರೆ. ಜಾತ್ರೆಯಲ್ಲಿ ವಸ್ತುಗಳ ಬಳಕೆಯಿಂದ ಆರ್ಥಿಕ ಚಟುವಟಿಕೆಗಳು ವ್ಯವಹಾರಗಳು ನಡೆಯುತ್ತವೆ.

ಜಾತ್ರೆಯ ಸ್ಥಳದಲ್ಲಿ ದೇವರ ಪ್ರತಿಷ್ಠಾಪನೆಗೊಂಡಾಗ ಪೂಜಾ ಸಾಮಾಗ್ರಿಗಳು ಮತ್ತು ಹಣ್ಣಿನ ಅಂಗಡಿಗಳು ಮೊದಲು ಕಾಣಿಸಿಕೊಳ್ಳುತ್ತವೆ. ಇವುಗಳನ್ನು ಅನುಸರಿಸಿ ವಿವಿಧ ಊರುಗಳಿಂದ ಜಾತ್ರೆಗೆ ಜನರು ಬರಲಾರಂಭಿಸಿದಂತೆ ಜನರು ಅಭಿರುಚಿಗೆ ತಕ್ಕಂತೆ ವಿವಿಧ ಬಗೆಯ ಅಂಗಡಿಗಳು ತಲೆ ಎತ್ತುತ್ತವೆ. ರೈತರಿಗೆ ಒದಗಿಸುವ ಅಂಗಡಿಗಳು ಹಸಿದವರಿಗೆ ಊಟವನ್ನೊದಗಿಸುವ ಹೋಟೆಲುಗಳ ಮಕ್ಕಳಿಗೆ ಆಟಿಕೆಗಳನ್ನು ಒದಗಿಸುವ ಬೊಂಬೆಯ ಅಂಗಡಿಗಳು ಹಾಗೂ ತಿಂಡಿ, ತಿನಿಸಿನ ಅಂಗಡಿಗಳು ಅಷ್ಟೇ ಅಲ್ಲದೆ ಹೆಣ್ಣು ಮಕ್ಕಳಿಗೆ ಸೌಂದರ್ಯದ ಅಂಗಡಿಗಳು ಮೊದಲಾದ ಬಗೆಯ ಅಂಗಡಿಗಳು ಜಾತ್ರೆಯಲ್ಲಿ ಕಾಣಿಸಿಕೊಳ್ಳುತ್ತವೆ. ಎಲ್ಲಾ ಬಗೆಯ ಜಾತಿ ಮತ್ತು ಧರ್ಮದವರು ಜಾತ್ರೆಗಳಲ್ಲಿ ಸೇರಿಕೊಳ್ಳುತ್ತಾರೆ.

ಧಾರ್ಮಿಕ ಆಚರಣೆ

ಜಾತ್ರೆಯ ಕುರಿತಾಗಿ ಧಾರ್ಮಿಕ ಕಾರ್ಯಗಳು ಪುರಾತನವಾದವುಗಳು. ಅಲ್ಲದೆ

ಸಾರ್ವತ್ರಿಕವಾದವುಗಳು. ಎಲ್ಲಾ ಸಮಾಜಗಳಲ್ಲಿ ಆಚರಣೆಯಲ್ಲಿರುವ ಜಾತ್ರೆಗಳು ಧಾರ್ಮಿಕ ಕಾರ್ಯ ಸಾಧನೆಯ ಉದ್ದೇಶವನ್ನು ಒಳಗೊಂಡಿವೆ. ದೇವರನ್ನು ಕುರಿತಾಗಿ ಜನರಲ್ಲಿರುವ ನಂಬಿಕೆಯೇ ಧರ್ಮ ನಿಸರ್ಗದ ಪ್ರತಿಯೊಂದು ಕ್ರಿಯೆಯನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ಕೆಲಸವನ್ನು ಮಾಡುವ ಪರಿಪಾಠ ಬೆಳೆಸಿಕೊಂಡು ನಂಬಿಕೆಯಲ್ಲಿ ಧರ್ಮ, ದೇವರು ಜಾತ್ರೆಯ ಆಚರಣೆಗಳು ಅಸ್ತಿತ್ವಕ್ಕೆ ಬಂದಿವೆ.

ತಮ್ಮ ಇಷ್ಟ ದೇವರುಗಳನ್ನು ಸಂತೃಪ್ತಿಗೊಳಿಸುವುದರಿಂದ ತಮ್ಮ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ ಎಂಬ ಭಾವನೆ ಜನರಲ್ಲಿ ಅಪಾರವಾಗಿದೆ. ಈ ಕಾರಣಕ್ಕಾಗಿ ಜನರು ಜಾತ್ರೆಯ ಸಮಯದಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುತ್ತಾರೆ. ಅಲ್ಲದೆ ತನು, ಮನ, ದಾನ, ಶ್ರದ್ಧಾಪೂರ್ವಕ ಭಕ್ತಿಗಳಿಂದ ಧಾರ್ಮಿಕ ಪೂಜಾ ಕಾರ್ಯಗಳಲ್ಲಿ ಭಾಗಿಯಾಗುತ್ತಾರೆ. ಸಮುದಾಯದ ಜನ ಜೀವನದ ಮೇಲೆ ಧರ್ಮ ಮತ್ತು ದೇವರ ಪ್ರಭಾವ ಮಹತ್ವದ್ದಾಗಿದೆ.

ಜನರು ಜಾತ್ರೆಯ ಸಮಯದಲ್ಲಿ ದಾಸೋಹ ಕಾರ್ಯ ಪಾನಕ, ನೀರು, ಮಜ್ಜಿಗೆ ಮೊದಲಾದವುಗಳನ್ನು ಭಕ್ತರಿಗೆ ಉಚಿತವಾಗಿ ಹಂಚುವ ಕಾರ್ಯಲ್ಲಿ ಭಾಗಿಯಾಗುವ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಗುಡಿಗಳಿಲ್ಲದೆ ಯಾವುದೇ ಶುಭ ಕಾರ್ಯಗಳು ನಡೆಯುವುದಿಲ್ಲ. ಉತ್ತಮ ಆರೋಗ್ಯ ಭಯಾನಕ ಕಾಯಿಲೆಗಳಿಂದ ರಕ್ಷಣೆ ಮೊದಲಾದ ಕಾರ್ಯಗಳ ನಿಮಿತ್ತ ಸಮುದಾಯದ ಜನರು ಒಂದುಗೂಡಿ ಉತ್ಸಾಹದಿಂದ ಜಾತ್ರೆಯ ಕಾರ್ಯಗಳಲ್ಲಿ ಭಾಗಿಯಾಗುತ್ತಾರೆ. ಜಾತ್ರೆಯ ಸನ್ನಿವೇಶಗಳು ಮಾನವ ಧರ್ಮವನ್ನು ಸಾರುವ ಕಾಯಕವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಬಂದಿದೆ.

ಆಚರಣೆಗಳಲ್ಲಿನ ಬದಲಾವಣೆಗಳು

ಹಿಂದಿನಿಂದ ಬಂದ ಆಚರಣೆಗಳಲ್ಲಿ ಬದಲಾವಣೆಗಳು ಉಂಟಾಗಿವೆ. ದೇವರುಗಳಲ್ಲಿಯೂ ಅನೇಕ ಬದಲಾವಣೆಗಳು ಆಗುತ್ತಿರುತ್ತವೆ, ಆದರೆ ತನ್ನ ಮೂಲ ಸೊಗಡನ್ನು ಕಾಪಾಡಿಕೊಂಡು ಬದುಕಿಗೆ ಅನುಸಾರವಾಗಿ ಹೊಸರೂಪ ಪಡೆಯುತ್ತಾ ಸಾಗಿದೆ. ಜನಪದರು ಭಯ, ಭಕ್ತಿಯಿಂದ ಪೂಜಿಸುವ ದೇವರುಗಳ ಪೂಜಾವಿಧಾನ, ಹರಕೆ, ಆಚರಣೆಗಳನ್ನೆಲ್ಲಾ ವೈದಿಕ ಸಂಸ್ಕೃತಿಯ ಪ್ರಭಾವದಿಂದ ಮೂಲ ಸ್ವರೂಪ ಕಣ್ಮರೆಯಾಗಿ ಹೊಸ ರೂಪವನ್ನು ಪಡೆದುಕೊಳ್ಳುತ್ತಿವೆ.

ಹರಕೆಗಳು

ಹಿಂದೆ ಹರಕೆಗಳು ಕಟ್ಟುನಿಟ್ಟಾದ ಕ್ರಮಗಳನ್ನು ಅನುಸರಿಸುತ್ತಿದ್ದರು. ಆದರೆ ಇಂದು ಅವುಗಳಲ್ಲಿ ಬದಲಾವಣೆಗಳು ಉಂಟಾಗಿವೆ. ಹಿಂದಿನ ಕಾಲದಲ್ಲಿ ಹರಕೆಯ ರೂಪದಲ್ಲಿ

ಬೆತ್ತಲೆಯ ಸೇವೆಯನ್ನು ಬೇವಿನ ಸೊಪ್ಪಿನ ಸೀರೆಯ ಮೂಲಕ ಕೈಗೊಳ್ಳುತ್ತಿದ್ದರು. ಆದರೆ ಪ್ರಸ್ತುತ ಆಧುನಿಕ ಕಾಲದಲ್ಲಿ ಅದರಲ್ಲಿ ಕೆಲವು ಬದಲಾವಣೆಗಳು ಉಂಟಾಗಿದ್ದು ಜನರು ಮೈಮೇಲೆ ಬಟ್ಟೆಗಳನ್ನು ಧರಿಸಿ ಅವುಗಳ ಮೇಲೆ ಬೇವಿನ ಸೊಪ್ಪನ್ನು ಕಟ್ಟಿಕೊಂಡು ಹರಕೆಯನ್ನು ತೀರಿಸುತ್ತಾರೆ.

ಉಪವಾಸ

ಹಿಂದೆ ಉಪವಾಸ ಪದ್ಧತಿಯಲ್ಲಿ ಕಟ್ಟುನಿಟ್ಟಾದ ಕ್ರಮಗಳನ್ನು ಅನುಸರಿಸುತ್ತಿದ್ದರು. ಉಪವಾಸ ಇರುವವರು ತುಂಬಿಟ್ಟಿದ ಕೊಡದ ನೀರು, ಎಳನೀರು, ಮೀಸಲಿಟ್ಟಿದ ಹಾಲನ್ನು ಸೇವಿಸುತ್ತಿದ್ದರು. ಆದರೆ ಇಂದು ಆಧುನಿಕ ಯುಗದಲ್ಲಿ ಹಣ್ಣು, ಹಂಪಲು, ಕೋಸಾಂಬರಿ, ಪಾನಕ, ಕಾಫಿ, ಟೀ, ಮಂಡಕ್ಕಿ ಇತರೆ ಫಲಹಾರಗಳನ್ನು ಸೇವಿಸುತ್ತಾರೆ. ಉಪವಾಸ ಇರುವಂತಹ ಜನರಲ್ಲಿ ಹಲವಾರು ರೀತಿಯಾದ ಬದಲಾವಣೆಗಳು ಕಂಡು ಬಂದಿವೆ. ಜಾತ್ರೆಗಳಲ್ಲಿ ಮನೆಯ ಎಲ್ಲಾ ಸದಸ್ಯರು ಉಪವಾಸ ಇರುತ್ತಿದ್ದರು. ಆದರೆ ಇಂದು ಮನೆಗಳಲ್ಲಿ ಒಬ್ಬ ಅಥವಾ ಇಬ್ಬರು ಇರುತ್ತಾರೆ. ಕೆಲವೊಂದು ಸಾರಿ ಇರುವುದೇ ಇಲ್ಲ.

ದೇವರಿಗೆ ಉಡುಗೊರೆಗಳು

ಹಿಂದೆ ದೇವರುಗಳಿಗೆ ಹರಕೆಯ ರೂಪದಲ್ಲಿ ಹೂ, ಹಣ್ಣು, ಕಂಚು ಮತ್ತು ತಾಮ್ರದ ಒಡವೆಗಳನ್ನು ನೀಡುತ್ತಿದ್ದರು. ಆದರೆ ಇಂದು ಚಿನ್ನ, ಬೆಳ್ಳಿಯ ಒಡವೆಗಳನ್ನು ನೀಡುತ್ತಾರೆ. ಸಾವಿರಾರು ರೂಪಾಯಿ ಬೆಲೆಬಾಳುವಂತಹ ವಸ್ತುಗಳನ್ನು ನೀಡುತ್ತಾರೆ. ದೇವರಿಗೆ ಹಿಂದೆ ಭಕ್ತಿಯಿಂದ ನಮಿಸಲು ಬರುತ್ತಿದ್ದರು ಆದರೆ ಇಂದು ಅವರ ವೈಭವದ ತೋರಿಕೆಗೆ ಜನರು ದೇವಸ್ಥಾನಗಳಿಗೆ ಬರುತ್ತಾರೆ. ಇಂದಿನ ಕಾಲದಲ್ಲಿ ಶ್ರೀಮಂತಿಕೆಗೆ ವೈಭವ ತಾಣಗಳು ದೇವಸ್ಥಾನ ಮತ್ತು ಜಾತ್ರೆಗಳಾಗಿವೆ.

ಪೂಜಾ ಆಚರಣೆಗಳು

ಜನಪದರ ಜೀವನಾಡಿಯಾಗಿ ಆಚರಣೆಗಳು ಕಂಡುಬರುತ್ತವೆ. ಹಿಂದೆ ಅರ್ಚನೆ, ಪೂಜಾ ವಿಧಾನಗಳು ತುಂಬಾ ವಿಭಿನ್ನವಾಗಿವೆ. ದೇವರಿಗೆ ಸಾಧಾರಣ ಅಲಂಕಾರ ಹಾಗೂ ದೇವರಿಗೆ ವಿಶೇಷ ಪೂಜೆಗಳಿರಲಿಲ್ಲ. ಯಾವಾಗಲೂ ಮಾಡುವಂತಹ ಸಾಧಾರಣಾ ಪೂಜೆಗಳೇ ಮಾಡುತ್ತಿದ್ದರು. ಆದರೆ ಇಂದು ಪೂಜಾ ವಿಧಾನಗಳಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಾಣಬಹುದು ಅದರಲ್ಲಿ ಉಂಟಾಗಿವೆ. ಕುಂಕುಮಾರ್ಚನೆ, ಅಭಿಷೇಕಗಳು, ಲಕ್ಷದೀಪೋತ್ಸವ, ಅಷ್ಟತ್ರ ಸಹಸಿನಿ ಪೂಜೆ, ತೈಲಾಭಿಷೇಕಗಳು, ಕುಂಭಾಭಿಷೇಕ, ಕ್ಷೀರಾಭಿಷೇಕ ಇತರೆ ಪೂಜೆಗಳು ನಡೆಯುತ್ತವೆ. ಇವುಗಳಿಗೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ದೇವರಿಗೆ ಪೂಜೆ ಮಾಡಿಸುತ್ತಾರೆ. ದೇವರಿಗೆ ಭಕ್ತಿಯಿಂದ ಅಷ್ಟೆ ಅಲ್ಲದೇ ತಮ್ಮ

ಅಂತಸ್ತನ್ನು ತೋರಿಸಿಕೊಳ್ಳಲು ಈ ರೀತಿಯಾದ ಪೂಜಾ ವಿಧಾನಗಳನ್ನು ಕೈಗೊಳ್ಳುವರು. ದೇವಸ್ಥಾನಗಳಲ್ಲಿ ನಾವು ದೇವರ ದರ್ಶನಕ್ಕೆ ನೂರಾರು, ಸಾವಿರಾರು ರೂಪಾಯಿಗಳನ್ನು ಕೊಟ್ಟು ಹೋಗಬೇಕು. ವಿಶೇಷವಾಗಿ ಮಂಗಳಾರತಿಗೆ ಯಾರು ಹೆಚ್ಚು ದುಡ್ಡು ಹಾಕುತ್ತಾರೋ ಅವರಿಗೆ ಹೆಚ್ಚು ಆದ್ಯತೆ ಅವರಿಗೆ ಬೇಕಾದಷ್ಟು ತೀರ್ಥ, ಪ್ರಸಾದ ನೀಡುತ್ತಾರೆ. ಹಿಂದೆ ಅನ್ನ ಸಂತರ್ಪಣೆಯನ್ನು ಮಾಡಿಸುವುದು ಕಡಿಮೆ. ಆದರೆ ಇಂದು ಪ್ರತಿದಿನ ಅನ್ನಸಂತರ್ಪಣೆ ಇತರೆ ಆಚರಣೆಗಳನ್ನು ನಾವು ಕಾಣುತ್ತೇವೆ. ದೇವಾಲಯಗಳಿಗೆ ಆಧುನೀಕರಣ, ಜಾಗತೀಕರಣದಿಂದ ಜನರು ಭಕ್ತಿಗಿಂತ ತೋರಿಕೆಗೆ ಹೆಚ್ಚು ಬರುತ್ತಾರೆ.

ವ್ಯಾಪಾರ ವಹಿವಾಟನ ಬದಲಾವಣೆ

ಪ್ರಾಚೀನ ಕಾಲದಿಂದಲೂ ಜಾತ್ರೆಗಳಲ್ಲಿ ವ್ಯಾಪಾರ ವಹಿವಾಟುಗಳು ಗ್ರಾಮೀಣ ಜನರು ತಮಗೆ ಬೇಕಾದಂತಹ ವಸ್ತುಗಳನ್ನು ಅಂದರೆ ದವಸಧಾನ್ಯಗಳನ್ನು ರೈತರು ಒಕ್ಕಲುತನಕ್ಕೆ ಬೇಕಾದ ಸಲಕರಣೆಗಳನ್ನು ತೆಗೆದುಕೊಳ್ಳುತ್ತಿದ್ದರು. ಜಾತ್ರೆಗಳು ಗ್ರಾಮೀಣ ಪ್ರದೇಶಗಳ ವ್ಯಾಪಾರ ಕೇಂದ್ರಗಳಾಗಿರುತ್ತಿದ್ದವು. ಆದರೆ ಇಂದು ಇವು ಕಣ್ಮರೆಯಾಗಿವೆ.

ಮಕ್ಕಳ ಆಟಿಕೆಗಳು

ಹಿಂದಿನ ಕಾಲದಲ್ಲಿ ಮಕ್ಕಳು ಆಟಿಕೆಗಳೆಂದರೆ ವಿಭಿನ್ನವಾಗಿರುತ್ತಿದ್ದವು. ಮರದ ಬೊಂಬೆ, ಬುಗುರಿ, ಕೊಳಲು, ಪೀಪಿ ಅಥವಾ ತುತ್ತೂರಿ, ಮರ ಮತ್ತು ಮಣ್ಣಿನಿಂದ ಮಾಡಿದ ಪ್ರಾಣಿ ಪಕ್ಷಿಗಳ ಕರಕುಶಲ ವಸ್ತುಗಳು ಮಾರುತ್ತಿದ್ದರು. ಆದರೆ ಇಂದು ಬದಲಾವಣೆಯಾಗಿ ಎಲ್ಲವೂ ಪ್ಲಾಸ್ಟಿಕ್‌ನಿಂದ ತಯಾರಿಸಲ್ಪಟ್ಟ ಬೊಂಬೆಗಳು, ಕಾರು, ಜೀಪು, ಪ್ಲಾಸ್ಟಿಕ್ ಮೊಬೈಲ್, ಗನ್, ಹಾವು, ಬಲೂನ್, ಹಾರುವ ವಿಮಾನ ಇತ್ಯಾದಿ ಆಟಿಕೆಗಳನ್ನು ಕಾಣುತ್ತೇವೆ.

ಸ್ತ್ರೀಯರಿಗೆ ಅವಶ್ಯವಾದ ವಸ್ತುಗಳು

ಜಾತ್ರೆ ಎಂದಾಕ್ಷಣ ಸ್ತ್ರೀಯರಿಗೆ ಎಲ್ಲಿಲ್ಲದ ಸಡಗರ ತಮಗೆ ಬೇಕಾದಂತಹ ಹಲವಾರು ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ. ಹಿಂದಿನ ವಸ್ತುಗಳು ವಾಲೆ, ಬುಗಡಿ, ಕೈ ಕಾಲಿಗೆ ಕಡಗ, ಕಾಸಿನ ಸರ, ಮಣಿಸರ, ಜಾಲಿಕೂದಲು, ಜಡೆಕುಚ್ಚು, ಟೇಪುಗಳು, ಡಾಬು, ಕಾಡಿಗೆ, ಮರದ ಬಾಚಣಿಗೆ, ಅಡಿಗೆ ಚೀಲ, ಕನ್ನಡಿ, ಇತರೆ ವಸ್ತುಗಳನ್ನು ಜಾತ್ರೆಯ ಸಮಯದಲ್ಲಿ ಗ್ರಾಮೀಣ ಸ್ತ್ರೀಯರು ತೆಗೆದುಕೊಳ್ಳುತ್ತಿದ್ದರು. ಆದರೆ ಇಂದು ಈ ಸ್ತ್ರೀಯರಲ್ಲಿ ಬಯಕೆಗಳು ಬೇರೆನೆ ಇವೆ. ಬಣ್ಣ ಬಣ್ಣದ ಚಿತ್ತಾರದ ಒಳ್ಳೆಯ ಕುಂದನ್ ಬಳೆಗಳು, ಗಾಜಿನ ಬಳೆ, ಹರಳಿನ ಬಳೆಗಳು, ಮೆಟಲ್ ಬಳೆಗಳು, ವಿವಿಧ ಬಗೆಯ ರಿಬ್ಬನ್, ಕ್ಲಿಪ್, ಏರ್‌ಪಿನ್, ನೈಲ್‌ಪಾಲಿಶ್, ಮೆಹಂದಿ, ರೋಸ್ ಪೌಡರ್, ಸೆಂಟ್ ವಿವಿಧ ಬಗೆಯ ವಸ್ತುಗಳು

ದೊರೆಯುತ್ತವೆ. ಇಂದಿನ ದಿನಗಳಲ್ಲಿ ವ್ಯಾಪಾರವನ್ನೇ ಉದ್ದೇಶವಾಗಿರಿಸಿಕೊಂಡು ಹಲವಾರು ವಿಭಿನ್ನ ವಸ್ತುಗಳನ್ನು ಜಾತ್ರೆಗಳಲ್ಲಿ ಮಾರಟ ಮಾಡುವುದನ್ನು ಕಾಣಬಹುದು.

ಗೃಹ ಬಳಕೆ ವಸ್ತುಗಳು

ಜಾತ್ರೆಗಳಿಗೆ ಸ್ತ್ರೀಯರು ಹೋದಾಗ ಅವರು ತಮಗೆ ಬೇಕಾದ ಗೃಹ ಬಳಕೆ ವಸ್ತುಗಳನ್ನು ತೆಗೆದುಕೊಳ್ಳುತ್ತಿದ್ದರು. ಇಂದಿನ ಕಾಲದಲ್ಲಿ ಮಣ್ಣಿನಿಂದ ಮಾಡಿದ ಮಡಿಕೆ, ಕುಡಿಕೆ, ದೀಪಗಳು, ಮಣ್ಣಿನ ಬೊಂಬೆ, ಅಡಿಗೆ ಮಾಡುವ ಮಣ್ಣಿನ ಸೊರೆಗಳು, ಮರದಿಂದ ಮಾಡಿದ ಕಡಗೋಲು, ಮಸಗುಂಡು ಇತರೆ ಗೃಹಬಳಕೆ ವಸ್ತುಗಳನ್ನು ಅಥವಾ ಸ್ಥಳೀಯ ದೇಸಿಯ ಉತ್ಪನ್ನವಾದ ವಸ್ತುಗಳ ಮಾರಾಟ ನಡೆಯುತ್ತಿದ್ದವು. ಇಂದು ಆಧುನೀಕರಣದಿಂದ ಎಲ್ಲವೂ ಬದಲಾವಣೆಗಳಾಗಿವೆ. ಲೋಹದ ಪಾತ್ರೆಗಳು ಅಲ್ಯೂಮಿನಿಯಂ, ಹಿತ್ತಾಳೆ, ಕಂಚು ಮತ್ತು ಪ್ಲಾಸ್ಟಿಕ್ ವಸ್ತುಗಳು ಹಾಗೂ ಹಂಡೆ, ಬಿಂದಿಗೆ, ಬಕೆಟ್, ಸ್ಟೀಲ್ ಸಾಮಾನುಗಳು, ಕಂಚಿನ ದೀಪಾರತಿ ಕಂಬಗಳು, ಪ್ಲಾಸ್ಟಿಕ್ ತೋರಣಗಳು ಗೃಹ ಅಲಂಕಾರಿಕ ವಸ್ತುಗಳನ್ನು ಆಧುನಿಕ ಯುಗದಲ್ಲಿ ಬಳಸುತ್ತಾರೆ. ಈ ರೀತಿಯಾಗಿ ಹಲವಾರು ಗೃಹ ಬಳಕೆ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ.

ಮನೋರಂಜನೆಗಳಲ್ಲಿನ ಬದಲಾವಣೆ

ಜಾತ್ರೆಗಳೆಂದರೆ ಮನೋರಂಜನೆಯ ಕೇಂದ್ರಗಳು, ಜನರಲ್ಲಿ ವಿಶ್ರಾಂತಿ, ಉತ್ಸಾಹ, ಉಲ್ಲಾಸಗಳು, ಗ್ರಾಮೀಣ ಜನರ ಬದುಕಿಗೆ ಜೀವನಾಡಿಯಾಗಿವೆ. ಹಿಂದೆ ಜಾತ್ರೆಗಳಲ್ಲಿ ಜಾನಪದ ಕಲಾತಂಡಗಳು, ಪೂಜಾ ಕುಣಿತ, ನಂದಿಕೋಲು ಕುಣಿತ, ಒನಕೆಕುಣಿತ, ಕೋಲಾಟ, ವೀರಗಾಸೆ, ವೀರರ ಮಕ್ಕಳ ಕುಣಿತ, ತಮಟೆ ವಾದ್ಯಗಳು, ಕಂಸಾಳೆ, ಪವಾಡಗಳು, ಪೌರಣಿಕ ಹಾಗೂ ಸಾಮಾಜಿಕ ನಾಟಕ ಪ್ರದರ್ಶನಗಳು, ಹರಿಕಥೆ, ಜನಪದ ಹಾಡುಗಳು, ಯಕ್ಷಿಣಿ ಪ್ರದರ್ಶನಗಳು ನಡೆಯುತ್ತಿದ್ದವು. ಜಾತ್ರೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಹಳ್ಳಿಯಲ್ಲಿ ಬೇರುರುತ್ತಿದ್ದರಿಂದ ಹಬ್ಬ ಜಾತ್ರೆಗಳು ಸಂತೋಷದ ತಾಣಗಳಾಗಿದ್ದವು. ಆಧುನಿಕ ಕಾಲದಲ್ಲಿ ಇವುಗಳಲ್ಲಿ ಹಲವಾರು ಬದಲಾವಣೆಗಳು ಉಂಟಾಗಿವೆ. ಸಾಮಾಜಿಕ ನಾಟಕಗಳನ್ನು ಆಡಿಸುತ್ತಾರೆ. ಆರ್ಕೆಸ್ಟ್ರಾಗಳು, ಶಾಲಾ ಮಕ್ಕಳಿಂದ ಹಾಡು, ನೃತ್ಯ, ಸುಗಮ ಸಂಗೀತ, ಡ್ಯಾನ್ಸ್, ಹಾಸ್ಯ ಸಂಜೆಗಳು, ಫ್ಯಾಷನ್ ಶೋ, ಗೊಂಬೆ ಕುಣಿಸುವುದು, ಡೊಳ್ಳು ಕುಣಿತ ಅಥವಾ ಡ್ರಮ್ ಸೆಟ್‌ಗಳನ್ನು ಬಾರಿಸುತ್ತಾ ಕುಣಿಯುವುದು, ಸರ್ಕಸ್‌ಗಳು ಇತ್ಯಾದಿ ಹಲವಾರು ರೀತಿಯಾದಂತಹ ಮನೋರಂಜನಾ ಕಾರ್ಯಕ್ರಮಗಳು ನಡೆಯುತ್ತಿವೆ. ಇಂದು ಮನೋರಂಜನೆಯು ಕಡಿಮೆಯಾಗಿದೆ.

ಸ್ಪರ್ಧೆಗಳು

ಗ್ರಾಮೀಣ ಜನರು ತಮ್ಮ ಸೊಗಡನ್ನು ಹಿಂದೆ ಹಲವಾರು ರೀತಿಯ ಸ್ಪರ್ಧೆಗಳನ್ನು ಜಾತ್ರೆಯ ಸಮಯದಲ್ಲಿ ಏರ್ಪಡಿಸುತ್ತಿದ್ದರು. ಗ್ರಾಮೀಣ ಜನರು ಸಾಹಸಮಯ ಕಲೆಗಳಾದ ಕತ್ತಿವರಸೆ, ದೊಣ್ಣೆ ವರಸೆ, ಕುಸ್ತಿ ಸ್ಪರ್ಧೆ, ಗುಂಡು ಎತ್ತುವುದು, ಮಡಿಕೆ ಹೊಡೆಯುವುದು, ಹುಲಿವೇಷ, ಕೋಳಿ ಪಂದ್ಯ, ಎತ್ತಿನ ಗಾಡಿಯ ಸ್ಪರ್ಧೆ, ಉಪ್ಪರಪಟ್ಟ ಪಗಡೆ ಆಟ ಇತ್ಯಾದಿ ಹಲವಾರು ಆಟಗಳನ್ನು ಸ್ಪರ್ಧೆಯ ಮೂಲಕ ಜಾತ್ರೆಗಳಲ್ಲಿ ಜನರು ಆಡುತ್ತಿದ್ದರು. ಇಂತಹ ಜಾನಪದೀಯರ ಚಮತ್ಕಾರದ ಸ್ಪರ್ಧೆಗಳು ಮಾಯವಾಗಿ ಆಧುನಿಕ ಯುಗದಲ್ಲಿ ಎಲ್ಲವೂ ಆಧುನಿಕತೆಯಿಂದ ಕೂಡಿದೆ. ಈ ಬದುಕಿಗೆ ಗ್ರಾಮೀಣ ಜನರು ಬಲಿಯಾದರೆ ಬಲೂನ್ ಹೊಡೆಯುವುದು. ಕ್ರಿಕೇಟ್ ಆಟದ ಸ್ಪರ್ಧೆ ಇಂದಿನ ಯುವಕರಲ್ಲಿ ಕ್ರಿಕೇಟ್ ಎಂಬುದು ಮನೆದೇವರಾಗಿದೆ. ಕಬ್ಬಡಿ ಪಂದ್ಯಗಳು, ಮ್ಯೂಜಿಕಲ್ ಚೇರ್ಸ್, ರಂಗೋಲಿ ಸ್ಪರ್ಧೆಗಳು, ಓಟದ ಸ್ಪರ್ಧೆಗಳು ಹಾಕಿ ಪಂದ್ಯಗಳು ಇತರೆ ಹಲವಾರು ರೀತಿಯಾದ ಪಂದ್ಯಗಳನ್ನು ಏರ್ಪಡಿಸುತ್ತಾರೆ.

ಗ್ರಾಮೀಣ ಜನರ ಸೊಗಡು ಇಂದು ಕಣ್ಮರೆಯಾಗಿ ಎಲ್ಲವೂ ಆಧುನಿಕಮಯದ ಸೋಗಿನಲ್ಲಿ ಗ್ರಾಮೀಣ ಜನರು ತಮ್ಮ ದೇಸಿಯ ಆಟಗಳನ್ನು ಮರೆತು ಹೋಗುತ್ತಿದ್ದಾರೆ. ಈ ರೀತಿಯಾಗಿ ಗ್ರಾಮೀಣ ಜನರ ಜೀವನಾಡಿಯಾಗಿರುವಂತಹ ದೇಶಿಯ ಆಟಗಳು ಕಣ್ಮರೆಯಾಗಿ, ಆಧುನಿಕತೆಗೆ ಮಾರು ಹೋದಂತಹ ಜನರ ಸ್ಪರ್ಧೆಗಳಲ್ಲಿ ಮನೋರಂಜನೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಹಲವಾರು ಬದಲಾವಣೆಗಳು ಕಂಡು ಬಂದಿವೆ. ಇಂತಹ ಸ್ಪರ್ಧೆಗಳು ಹಿಂದೆ ಮೋಜಿಗಾಗಿ ಹಾಗೂ ಜನರ ಮನೋರಂಜನೆಗಾಗಿ ಆಡುತ್ತಿದ್ದರು. ಆದರೆ ಇಂದು ಇವೆಲ್ಲವೂ ವಾಣಿಜ್ಯಮಯವಾಗಿವೆ. ಆಟ ಆಡಿದರೆ ಎಷ್ಟು ದುಡ್ಡು ಕೊಡುತ್ತಾರೆ ಎಂದು ಪ್ರತಿಯೊಂದಕ್ಕೂ ಬೆಲೆಕಟ್ಟುವ ಪದ್ಧತಿ ಇಂದು ಕಂಡು ಬರುತ್ತಿದೆ.

ಸಂಘಟನೆಗಳಲ್ಲಿ ಬದಲಾವಣೆ

ಜಾತ್ರೆಗಳಲ್ಲಿ ಇಂದು ಹಲವಾರು ರೀತಿಯ ಬದಲಾವಣೆಗಳು ಆಗಿರುವುದನ್ನು ಕಾಣಬಹುದು. ಹಿಂದೆ ರಥೋತ್ಸವಗಳಲ್ಲಿ ಜನರು ಎಲ್ಲಾರು ಒಂದಾಗಿ ಭಾಗವಹಿಸುತ್ತಿದ್ದರು. ಆದರೆ ಇಂದು ಜಾತಿವಾರು ಸಂಘಟನೆಗಳಾಗಿ ಭಾಗವಹಿಸುತ್ತಾರೆ. ಅವರ ಜಾತಿಯವರು ಒಂದೆ ಕಡೆ ಸೇರಿ ತಾವು ನಿರ್ವಹಿಸುವಂತಹ ಕೆಲಸದಲ್ಲಿ ಯಾವ ರೀತಿಯಾಗಿ ವೈಭವಯುತವಾಗಿ ಜಾತ್ರೆಗಳಲ್ಲಿ ತೊಡಗಿಸಬೇಕು ಎಂದು ಜಾತ್ರೆಗೆ ಮುನ್ನವೇ ತೀರ್ಮಾನಿಸಿ, ಜಾತ್ರೆಗಳಲ್ಲಿ ತಮ್ಮ ತಮ್ಮ ಜಾತಿಯವರು ಒಂದು ಕಡೆ ಸೇರಿ ಜಾತ್ರೆಗಳ ಆಚರಣೆಯಲ್ಲಿ ತೊಡಗುತ್ತಾರೆ. ಅಷ್ಟೇ ಅಲ್ಲದೇ ರಾಜಕೀಯ ದುರೀಣರು ಸಹ ಜಾತಿ ಸಂಘಟನೆಗಳನ್ನು

ಜಾತ್ರೆಯ ಸಮಯದಲ್ಲಿ ಮಾಡುತ್ತಾರೆ. ಪ್ರತಿಯೊಂದು ಹಂತದಲ್ಲಿಯು ತಮ್ಮ ಜಾತಿಗಳ ಸಂಘಟಕರನ್ನು ಮಾತ್ರ ಅಲ್ಲಿ ಹೆಚ್ಚು ತೊಡಗಿಸಿಕೊಳ್ಳುತ್ತಾರೆ. ಬೇವಿನ ಉಡುಗೆಯಲ್ಲಿ ಗ್ರಾಮೀಣ ಜನರು ತಮ್ಮ ಜಾತಿಯವರು ಒಂದೇ ಸಾರಿ ಜೊತೆಗೂಡಿ ಬರುತ್ತಾರೆ. ಈ ರೀತಿಯಾಗಿ ಜಾತಿವಾರು ಸಂಘಟನೆಗಳನ್ನು ನಾವು ಇಂದು ಕಾಣುತ್ತೇವೆ.

ಜನರು ನಿತ್ಯ ಬದುಕಿನಲ್ಲಿ ದೇವತೆಗಳನ್ನು ಕುರಿತು ಅನೇಕ ನಂಬಿಕೆಗಳು ಕಂಡುಬರುತ್ತವೆ. ಜನರ ಆಂತರಿಕ ಭಾವನೆ ಮತ್ತು ಮೂಲ ಸಂಸ್ಕೃತಿ ಸಂಪ್ರದಾಯಗಳನ್ನು ತೋರಿಸುವಂತಹ ನಂಬಿಕೆಗಳು ಮುಖ್ಯವಾಗಿರುವುದರಿಂದ ಅವುಗಳನ್ನು ಕಡೆಗಣಿಸುವಂತಿಲ್ಲ.

ಕೊನೆ ಟಿಪ್ಪಣಿ

೧. ಚಿಕ್ಕಣ್ಣ ಯಣ್ಣೆಕಟ್ಟೆ, ೧೯೮೩, ತುಮಕೂರು ಜಿಲ್ಲೆಯ ಜಾತ್ರೆಗಳು, ಚಿತ್ಕಳಾ ಪ್ರಕಾಶನ, ತುಮಕೂರು, ಪು–೪೮.

❖❖❖

ಅಧ್ಯಾಯ : ಐದು

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಾಯ: ಐದು

ಸಮಾರೋಪ

ದೊಳ್ಳಉಳ್ಳಾರ್ತಿಯ ಗೌರಿಯ ಜಾತ್ರೆಯ ಮೂಲಕ ಒಂದು ಸಾಂಸ್ಕೃತಿಕ ವಲಯವನ್ನು ಸೃಷ್ಟಿಸಿಕೊಂಡಿದೆ. ಚಳ್ಳಕೆರೆ ತಾಲೂಕಿನಲ್ಲಿ ಗೌರಿಯ ಹಬ್ಬದ ಆಚರಣೆಯಿದ್ದರೂ ದೊಡ್ಡ ಉಳ್ಳಾರ್ತಿಯಲ್ಲಿ ನಡೆಯುವ ಜಾತ್ರೆಯ ಸ್ವರೂಪದ ಆಚರಣೆಯು ಗೌರಿಗೆ ಸಂಬಂಧಿಸಿದಂತೆ ನಡೆಯುವುದಿಲ್ಲ. ಬಳ್ಳಾರಿ ಜಿಲ್ಲೆಯ ರೂಪನಗುಡಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಇಡಪನಕಲ್ಲು ಮುಂತಾದ ಕಡೆ ಗೌರಿಯ ಆಚರಣೆ ಜಾತ್ರೆಯ ಸ್ವರೂಪದಲ್ಲಿದೆ. ಆದರೆ ಚಳ್ಳಕೆರೆ ತಾಲೂಕಿನಲ್ಲಿ ದೊಡ್ಡ ಉಳ್ಳಾರ್ತಿಯ ಹೊರತಾಗಿ ಬೇರೆ ಕಡೆ ಎಲ್ಲಿಯೂ ಗೌರಿ ಆಚರಣೆ ಜಾತ್ರೆಯ ಸ್ವರೂಪದಲ್ಲಿಲ್ಲ. ಗೌರಿದೇವಿ ಜಾತ್ರೆಯನ್ನು ಈ ಅಧ್ಯಯನದಲ್ಲಿ ಮುಖ್ಯವಾಗಿ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಗಮನಿಸಲಾಗಿದೆ. ಕೇವಲ ಸಮಾಜಶಾಸ್ತ್ರೀಯ ಹಿನ್ನೆಲೆ ಮಾತ್ರವಲ್ಲದೆ ಬಹುಶಿಸ್ತೀಯ ಅಧ್ಯಯನ ಕ್ರಮದಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ.

ಜಾತ್ರೆಗಳು ಯಾವಾಗ ಹುಟ್ಟಿದವು ಮತ್ತು ಏಕೆ ಹುಟ್ಟಿದವು ಎಂದು ಹೇಳುವುದು ತುಂಬಾ ಕಷ್ಟ ಸಾದ್ಯದ ಕೆಲಸವಾಗಿದೆ. ಮಾನವನು ಭೂಮಿಯ ಮೇಲೆ ಒಂದು ಕಡೆ ನೆಲೆನಿಂತು ಜೀವನ ನಡೆಸಲು ಎಂದು ಪ್ರಾರಂಭಿಸಿದನೋ ಅಂದಿನಿಂದಲೇ ಅಗೋಚರ ಶಕ್ತಿಗಳ ಕುರಿತಾಗಿ ಭಯಗೊಂಡವನಾಗಿರಬೇಕು. ಮನೋಸಹಜವಾದ ಭಯವೇ ದೈವಗಳ ಮೇಲಿನ ಭಕ್ತಿಯಾಗಿ ಮಾರ್ಪಾಡುಗೊಂಡಿರುವ ಸಾಧ್ಯತೆ ಇದೆ. ದೇವರ ಕುರಿತಾಗಿ ಅತಿಯಾದ ನಂಬಿಕೆಯೇ ಆಚರಣೆಗಳಿಗೆ ದಾರಿ ಮಾಡಿಕೊಟ್ಟಿರುವ ಸಾಧ್ಯತೆ ಇದೆ. ಮಾನವನು ಹುಟ್ಟಿನಿಂದ ಸಾವಿನವರೆಗೂ ಒಂದಿಲ್ಲ ಒಂದು ಕಷ್ಟಕೋಟಲೆಗಳನ್ನು ಅನುಭವಿಸುತ್ತಲೇ ಇರುವನು. ಈ ಕಷ್ಟಕೋಟಲೆಗೆ ಪರಿಹಾರವಾಗಿ ಹಾಗೂ ತನ್ನ ಮಾನಸಿಕ ನೆಮ್ಮದಿಗಾಗಿ ಹಬ್ಬ, ಜಾತ್ರೆಗಳಂತಹ ಆಚರಣೆಗಳನ್ನು ಸೃಷ್ಟಿಸಿಕೊಂಡಿರಬೇಕು. ದೇವರು,

ಹಬ್ಬ ಜಾತ್ರೆಗಳು ಮಾನವನ ಸೃಷ್ಟಿಯೇ ಆಗಿದ್ದರೂ ಅವುಗಳು ಅವನ ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಬೆಳೆದು ಇಂದು ದೊಡ್ಡ ಹೆಮ್ಮರವಾಗಿ ನಿಂತಿರುವುದನ್ನು ಕಾಣುತ್ತೇವೆ.

ಜಾತ್ರೆಗಳು ಮಾನವನ ಜೀವನಾಡಿ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿಯೂ ಮಹತ್ವದ ಪಾತ್ರ ವಹಿಸಿವೆ. ಜಾತ್ರೆಗಳಲ್ಲಿ ಎಲ್ಲಾ ಜಾತಿ, ಧರ್ಮ, ವರ್ಗಗಳು ಒಂದಾಗಿ ಪಾಲ್ಗೊಳ್ಳುವವು. ಜಾತ್ರೆಗಳು ಗ್ರಾಮೀಣ ಬದುಕಿಗೆ ಪ್ರಧಾನ ಅಂಶಗಳಾಗಿವೆ. ಗ್ರಾಮೀಣ ಜನರ ಸ್ನೇಹ ಸಹಬಾಳ್ವೆಯ ಬಂಧುತ್ವಕ್ಕೆ ಜಾತ್ರೆಗಳು ಪರೋಕ್ಷವಾಗಿ ಕಾರಣವಾಗಿವೆ. ಸಾಂಪ್ರದಾಯಿಕ ಆಚರಣೆಗಳು ಇಂದಿಗೂ ಸಹ ಕಣ್ಮರೆಯಾಗದೇ ಜನರಲ್ಲಿ ಉಳಿದುಕೊಂಡು ಬಂದಿವೆ. ಜಾತ್ರೆಗಳು ಜನರಲ್ಲಿ ಕ್ರಿಯಾಶೀಲ ಮನೋಭಾವವನ್ನು ತುಂಬಿ. ಗ್ರಾಮೀಣ ಕಲಾವಿದರ ವೇದಿಕೆಗಳಾಗುವಲ್ಲಿ ಮಹತ್ತರವಾದ ಪಾತ್ರ ವಹಿಸುತ್ತವೆ.

ಜಾತ್ರೆಗಳಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಾಣುತ್ತೇವೆ. ಪೂಜಾಕುಣಿತ, ನಂದಿಕೋಲು, ಕೋಲಾಟ, ವೀರಗಾಸೆ, ಸಮ್ಮಾಳ, ಡೊಳ್ಳು, ತಮಟೆ ವಾದ್ಯಗಳ ಬಳಕೆ ಸಹಜವಾದುದು. ಉತ್ಸವದ ಮುಂಭಾಗದಲ್ಲಿ ಭಜನಾ ಪದಗಳನ್ನು ಹಾಡುವವರೂ ಹಿಂಭಾಗದಲ್ಲಿ ಗೌರಿಯನ್ನು ಕೊಂಡಾಡುವ ಜನಪದ ಹಾಡುಗಳನ್ನು ಹಾಡುವ ಮಹಿಳೆಯರನ್ನು ಕಾಣುತ್ತೇವೆ. ಜಾತ್ರೆ ಎಂದ ಮೇಲೆ ಬಂಧುಬಳಗ ಒಂದೆಡೆ ಸೇರಲೇಬೇಕಲ್ಲವೆ. ಅವರಿಗೆ ಮನೋರಂಜನೆ ನೀಡುವ ದೊಡ್ಡಾಟವೋ ಅಥವಾ ಸಾಮಾಜಿಕ ನಾಟಕವನ್ನೋ ಗ್ರಾಮದ ಹವ್ಯಾಸಿಗಳು ಆಡುವರು. ಜಾತ್ರೆಗಳ ಆಚರಣೆಗಳು ಚಲನಶೀಲವಾಗಿರುತ್ತವೆ. ಜನಪದರಿಂದ ಆಚರಣೆಗೊಳ್ಳುವ ಜಾತ್ರೆಯ ಸ್ವರೂಪವು ವರ್ಷದಿಂದ ವರ್ಷಕ್ಕೆ ಬದಲಾಗುತ್ತಾ ಹೋಗುತ್ತಿರುತ್ತದೆ. ಗೌರಿದೇವಿಯ ಆಚರಣೆಯ ಮೂಲ ಆಶಯ ಜಾತ್ರೆಯಾಗಿದೆಯಾದರೂ ಅದರ ಆಚರಣೆಗಳು ಬದಲಾವಣೆಗೆ ಒಳಗಾಗುತ್ತಾ ಸಾಗಿರುವುದು ಸ್ಥಳೀಯರಿಂದ ತಿಳಿದುಬಂದಿತು. ಬಹಳ ಹಿಂದಿನಿಂದ ರೂಢಿಯಲ್ಲಿದ್ದ ಆಚರಣೆಗಳು ಈಗ ನಶಿಸಿ ಹೋಗುತ್ತಿರುವುದಾಗಿ, ಹಳೆಯ ಆಚರಣೆಯ ಸ್ಥಳದಲ್ಲಿ ಹೊಸ ಸ್ವರೂಪದ ಆಚರಣೆ ರೂಢಿಗೆ ಬರುತ್ತಿರುವುದಾಗಿ ತಿಳಿದುಬಂದಿತು.

ಆಧುನಿಕ ಜೀವನ ಪದ್ಧತಿ, ಆಧುನಿಕ ಶಿಕ್ಷಣ ಪದ್ಧತಿ, ಕಾನೂನು ವ್ಯವಸ್ಥೆ, ಇವುಗಳಿಂದ ಜನಪದರಲ್ಲಿ ಹಳ್ಳಿಗಳಲ್ಲಿ ಬದಲಾವಣೆಗಳು ಸಹಜವಾಗಿ ಕಂಡುಬರುತ್ತವೆ. ಇವೆಲ್ಲವನ್ನು ಅನುಸರಿಸಿ ಹಳೆಯ ಜಾನಪದರ ಅಂಶಗಳು ನಶಿಸಿ ಹೊಸ ಹೊಸ ಆಚರಣೆ ವಿಚಾರಗಳು ಬೆಳಕಿಗೆ ಬರುತ್ತವೆ. ಏನೇ ಆದರೂ ಜನಪದರ ಧಾರ್ಮಿಕ ನಂಬಿಕೆಗಳು ಮುಂದುವರಿದು ಕೊಂಡು ಬಂದಿವೆ. ಒಟ್ಟಾರೆಯಾಗಿ ಹೇಳುವುದಾದರೆ ಶ್ರೀ ಗೌರಿದೇವಿ ಜಾತ್ರೆಯು ಜನರ ಬದುಕಿಗೆ ಹಾಗೂ ಅವರ ಜೀವನಕ್ಕೆ ಹತ್ತಿರವಾದಂತಹ ಸಂಬಂಧಗಳುಳ್ಳವಾಗಿವೆ. ನೊಂದು

ಬಂದ ಜೀವಿಗಳಿಗೆ ಜಾತ್ರೆಗಳು ಸಂತೋಷದ ತಾಣಗಳಾಗಿವೆ ಎಂದು ಇಲ್ಲಿ ಕಂಡುಬರುವುದು. ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದ ಫಲಿತಗಳು ಈ ಕೆಳಗಿನಂತಿವೆ.

ಅಧ್ಯಯನದ ಫಲಿತಗಳು

ಈ ಜಾತ್ರೆಯು ನೆಡೆಯುವುದರಿಂದ ಪ್ರತಿಯೊಂದು ಜಾತಿ, ಸಮುದಾಯಗಳು, ಬೇರೆ ಬೇರೆ ವರ್ಣದ ಜನರು ಭಾಗವಹಿಸುವುದು ಕಂಡುಬರುತ್ತದೆ.

- ➢ ಜಾತ್ರೆಯಲ್ಲಿ ನಡೆಯುವ ಆಚರಣೆ, ನಂಬಿಕೆ, ಸಂಪ್ರದಾಯಗಳೆಲ್ಲವೂ ಫಲವಂತಿಕೆ ಮತ್ತು ಸಮೃದ್ಧಿಯನ್ನು ಸಂಕೇತವಾಗಿ ಇರುವುದನ್ನು ತಿಳಿಯಬಹುದು.
- ➢ ಜಾತ್ರೆಯು ಧಾರ್ಮಿಕ ಭಾವನೆಯನ್ನು ಬೆಳೆಸುವುದರ ಮೂಲಕ ವೈಚಾರಿಕ ಮತ್ತು ವೈಜ್ಞಾನಿಕತೆಯ ಅಂಶಗಳು ತಿಳಿದುಬರುತ್ತವೆ.
- ➢ ಜಾತ್ರೆಗಳಲ್ಲಿ ಗಂಡು ಹೆಣ್ಣುಗಳು ಮುಕ್ತವಾಗಿ ಬೆರೆಯುವುದರಿಂದ ಸಾಮಾಜಿಕ ಕಟ್ಟುಪಾಡುಗಳನ್ನು ಘಟಿಯಾಗಿ ಉಳಿಯುವುದನ್ನು ನೋಡಬಹುದು.
- ಈ ಜಾತ್ರೆಯು ಸಾಮಾಜಿಕ ಸಂಬಂಧವನ್ನು ಬೆಸೆಯುವ ಜಾತ್ರೆಯಾಗಿದೆ ಎಂದು ತಿಳಿಯಬಹುದು.
- ಈ ಜಾತ್ರೆಯಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಯ ನಿಧಾನ ಗತಿಯಲ್ಲಿ ಸಾಗುತ್ತಿರುವುದು ಕಂಡುಬರುತ್ತದೆ.

ಸಲಹೆಗಳು

ಈ ಸಂಶೋಧನಾ ಅಧ್ಯಯನದಿಂದ ಪಡೆದ ಮಾಹಿತಿ ಆಧಾರದ ಮೇಲೆ ಸಲಹೆಗಳನ್ನು ತಿಳಿಸಲಾಗಿದೆ.

೧. ಗೌರಿ ಜಾತ್ರೆಯ ಬಗ್ಗೆ ಹಾಗೂ ಜಾತ್ರೆಗಳನ್ನು ಆಚರಿಸುವುದರ ಬಗ್ಗೆ ಹೆಚ್ಚಿನ ಪ್ರಚಾರವನ್ನು ಮಾಡಬೇಕು.

೨. ಈ ಜಾತ್ರೆಯ ನಡೆಯುವ ಸ್ಥಳವು ತುಂಬ ಕಡಿಮೆ ಪ್ರಮಾಣದಿಂದ ಕೂಡಿರುವುದರಿಂದ ಈ ಸ್ಥಳವನ್ನು ಸರ್ಕಾರ ಅಥವಾ ಗ್ರಾಮಪಂಚಾಯತಿ ವತಿಯಿಂದ ಜಾಗವನ್ನು ಕೊಡಿಸಬೇಕು.

೩. ಜಾತ್ರೆಯಲ್ಲಿ ಕುಡಿಯುವ ನೀರು, ಸಾರಿಗೆ ಸಂಪರ್ಕ, ಪ್ರತ್ಯೇಕ ಮಹಿಳೆಯರಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು ಹಾಗೂ ಇತರೆ ಮೂಲಭೂತ ಸೌಕಾರ್ಯಗಳನ್ನು ಒದಗಿಸಬೇಕು.

೪. ಜಾತ್ರೆಯಲ್ಲಿ ಗ್ರಾಮೀಣ ಸಾಂಸ್ಕೃತಿಕ ಕ್ರೀಡೆಗಳನ್ನು ಅಡಿಸುವ ಮೂಲಕ ಅವುಗಳನ್ನು ಜೀವಂತವಾಗಿರಿಸಲು ಶ್ರಮಿಸಬೇಕು.

೫. ಗೌರಿ ಜಾತ್ರೆಯಲ್ಲಿ ಆಧುನೀಕತೆ ಪ್ರವೇಶದಿಂದಾಗಿ ಪಾರಂಪರಿಕವಾಗಿ ಆಚರಣೆ ಮಾಡಿಕೊಂಡಿಬಂದಿರುವ ಜಾನಪದ ನೃತ್ಯಗಳು ಕಾಣ್ಮರೆಯಾಗಿವೆ ಅವುಗಳನ್ನು ಉಳಿಸುವ ಪ್ರಯತ್ನ ಈ ಊರಿನ ಹಿರಿಯ ಯಜಮಾನರು ಮಾಡಬೇಕು.

ಒಟ್ಟಾರೆಯಾಗಿ ಈ ಅಧ್ಯಯನವು ಗೌರಿ ಜಾತ್ರೆಯ ವೈಶಿಷ್ಟ್ಯವನ್ನು ತಿಳಿಸುವುದಲ್ಲದೆ ಮುಂದಿನ ಅಧ್ಯಯನಕಾರರಿಗೆ ಸ್ವಲ್ಪಮಟ್ಟಿಗಾದರೂ ಈ ಅಧ್ಯಯನವು ಸಹಾಯವಾದೀತೆಂದು ಭಾವಿಸಲಾಗಿದೆ. ಪ್ರಸ್ತುತ ಈ ಅಧ್ಯಯನದಲ್ಲಿ ಅನುಬಂಧ ಒಂದರಲ್ಲಿ ಪರಾಮಾರ್ಶನ ಗ್ರಂಥಗಳನ್ನು ಕೊಡಲಾಗಿದೆ. ಅನುಬಂಧ ಎರಡರಲ್ಲಿ ಚಳ್ಳಕೆರೆಯಲ್ಲಿ ಬರುವ ಗ್ರಾಮಗಳ ಹೆಸರುಗಳನ್ನೂ ಅನುಬಂಧ ಮೂರರಲ್ಲಿ ಗೌರಿ ಜಾತ್ರೆಯಲ್ಲಿ ಪಾಲ್ಗೊಳ್ಳುವ ಆ ಪರಿಸರದ ಗ್ರಾಮಗಳ ಪಟ್ಟಿಯನ್ನು ಕೊಡಲಾಗಿದೆ. ಅನುಬಂಧ ನಾಲ್ಕರಲ್ಲಿ ಮಾಹಿತಿದಾರರ ಪಟ್ಟಿಯನ್ನು ನೀಡಲಾಗಿದೆ. ಅನುಬಂಧ ಐದರಲ್ಲಿ ಗೌರಿಗೆ ಸಂಬಂಧಿಸಿದಂತೆ ಸ್ಥಳೀಯರು ಹಾಡುವ ಜನಪದ ಹಾಡುಗಳನ್ನು ನೀಡಲಾಗಿದೆ. ಅನುಬಂಧ ಆರರಲ್ಲಿ ನಕ್ಷೆಗಳಿವೆ. ಅನುಬಂಧ ಏಳರಲ್ಲಿ ಛಾಯಾಚಿತ್ರಗಳಿವೆ.

❖❖❖

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಗ್ರಾಮಗಳ ಪಟ್ಟಿ

ಮಾಹಿತಿದಾರರ ವಿವರ

ನಕ್ಷೆಗಳು

ಛಾಯಾಚಿತ್ರಗಳು

ಅನುಬಂಧ–೧

ಪರಾಮರ್ಶನ ಗ್ರಂಥಗಳು

ಆನಂದಮೂರ್ತಿ, ೧೯೨೭, ಉಜ್ಜನಿ ಚೌಡಮ್ಮನ ಹಬ್ಬದ ವೈಶಿಷ್ಟ್ಯ, ಮೀನ ಪ್ರಕಾಶನ, ಮೈಸೂರು.

ಈಶ್ವರಪ್ಪ ಎಂ ಜಿ, ೧೯೭೨, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜನಪದ, (ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ).

ಕೌಶಲ್ಯಾ ಬಾಯಿ, ೨೦೧೧, ಭಾರತೀಯ ಹಬ್ಬಗಳು ಮತ್ತು ವ್ರತಗಳು, ವಿಶ್ವಾಸ ಮುದ್ರಣಾಲಯ, ಬೆಂಗಳೂರು.

ಚಿಕ್ಕಣ್ಣ ಯಣ್ಣೆಕಟ್ಟೆ, ೧೯೮೩, ತುಮಕೂರು ಜಿಲ್ಲೆಯ ಜಾತ್ರೆಗಳು, ಚಿತ್ಕಳಾ ಪ್ರಕಾಶನ, ತುಮಕೂರು

ಚೆನ್ನಣ್ಣ ವಾಲಿಕಾರ, ೧೯೯೧, ಸೌದತ್ತಿ ಯಲ್ಲಮ್ಮ, ರಾ.ಸಂ.ಕೇಂದ್ರ, ಕ.ರಾ.ವ.ಶಿ.ಸ. ಮೈಸೂರು.

ಜಗನ್ನಾಥ್ ಹೆಬ್ಬಾಳೆ, ೧೯೯೮, ಹೈದರಾಬಾದ್ ಕರ್ನಾಟಕ ಜಾತ್ರೆಗಳು, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

ಜವರೇಗೌಡ ದೇ, ೨೦೦೧, ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

ತಿಮ್ಮಪ್ಪ ಎ ಕೆ, ೨೦೦೭, ಶಿವಮೊಗ್ಗ ಜಿಲ್ಲೆಯ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ದಾಸೇಗೌಡ, ೨೦೦೦, ಮಂಡ್ಯ ಜಿಲ್ಲೆಯ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ದಿವಾಕರ್ ಆರ್ ಬಿ, ಕುಮಾರ್ ಆರ್ ಬಿ, ೨೦೧೫, ಕುಮಾರರಾಮನ ಹಬ್ಬ-ಜಾತ್ರೆಗಳು, ಗಂಗೋತ್ರಿ ಪ್ರಕಾಶನ, ರಾಮಸಾಗರ.

ನಾಗರಾಜಯ್ಯ ಹಂ ಪ, ೧೯೯೭, ಕರ್ನಾಟಕ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಪಾಟೀಲ ಬಿ ಪಿ, ೧೯೯೯, ಗ್ರಾಮ ದೇವತೆಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪುರುಷೋತ್ತಮ ಬಿಳಿಮಲೆ, ೧೯೯೯, ಹುಲಿಗಮ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಹಿ ಚಿ, ೨೦೦೧, ಉಜ್ಜನಿ ಚೌಡಮ್ಮ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮಹಾದೇವ ಸಿ, ೧೯೯೮, ಮಳವಳ್ಳಿ ತಾಲ್ಲೂಕಿನ ಜಾತ್ರೆಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ರಂಗಸ್ವಾಮಿ ಡಿ ಟಿ, ೧೯೭೧, ಭಾರತದ ಹಬ್ಬ ಹರಿದಿನಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಲಿಂಗಯ್ಯ ಡಿ, ೧೯೮೪, ಕರ್ನಾಟಕದ ಗ್ರಾಮದೇವತೆಗಳು, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಶಶಿಕಲಾ ಎಂ ಆರ್, ೨೦೧೪, ನರಸೀಪುರ ತಾಲೂಕಿನ ಹಬ್ಬ ಮತ್ತು ಜಾತ್ರೆಗಳು, ರಚನಾ ಪ್ರಕಾಶನ, ಮೈಸೂರು.

ಶಿವಕುಮಾರಸ್ವಾಮಿ, ೧೯೮೮, ಕರ್ನಾಟಕ ಜಾತ್ರೆಗಳು, ಸ್ನಾತಕೋತ್ತರ ಕೇಂದ್ರ, ಬಿ ಆರ್ ಪ್ರಾಜೆಕ್ಟ್, ಶಿವಮೊಗ್ಗ.

ಶಿವಣ್ಣ ಮೀರಾಸಾಬಿಹಳ್ಳಿ, ೧೯೯೯, ಗೌರಸಮುದ್ರ ಮಾರಮ್ಮ ಮತ್ತು ಉಚ್ಛಾರ್ತಿ ಗೌರಮ್ಮ, ಪಟೇಲ್ ಪಬ್ಲಿಕೇಷನ್ಸ್, ಬೆಂಗಳೂರು.

ಶ್ರೀಧರಮೂರ್ತಿ ಎಂ, ೧೯೮೧, ದೇವತೆಗಳು ಮತ್ತು ಹಬ್ಬಗಳು, ಪುನರ್ವಸು ಪ್ರಕಾಶನ, ಬೆಂಗಳೂರು.

ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.

ಸಿದ್ದೇಶ ನೆಲ್ಲಿಸರ, ೨೦೦೪, ಅಂತರಗಟ್ಟಮ್ಮನ ಜಾತ್ರೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

ಸಿದ್ದೇಶ್ವರಿ ಎಂ ಎಸ್, ೨೦೦೪, ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪ್ರಭಾದೇವರ ಜನಕಲ್ಯಾಣ ಸಂಸ್ಥೆ, ಸಾಂಸ್ಥಾನ ಮಠ, ಸಂಡೂರ, ಪು-೫೬.

ಹಿರೇಮಠ ಎಸ್ ಎಸ್, ೧೯೯೨, ಜಾತ್ರೆಗಳು, ಸಮತಾ ಪ್ರಕಾಶನ, ಹರಪ್ಪನಹಳ್ಳಿ.

ಅಂತರಜಾಲದ ಮಾಹಿತಿ.

ಅನುಬಂಧ-೨

ಚಳ್ಳಕೆರೆ ತಾಲೂಕಿನ ಗ್ರಾಮಗಳು

ಅಮೃತಾಪುರ
ಅಜ್ಜನಹಳ್ಳಿ
ಅಬ್ಬೇನಹಳ್ಳಿ
ಆಲಗೊಂಡನಹಳ್ಳಿ
ಐಗಾರ್ಲಹಳ್ಳಿ
ಓಬಳಾಪುರ
ಓಬನಹಳ್ಳಿ
ಓಬನಹಳ್ಳಿ ಕಾವಲು
ಓಬನಯ್ಯನಹಟ್ಟಿ
ಕಸವಗೊಂಡನಹಳ್ಳಿ
ಕಸ್ತೂರಿ ತಿಮ್ಮನಹಳ್ಳಿ
ಕಡೆಹುಡೇವು
ಕಮಲಮರದಹಳ್ಳಿ
ಕಮ್ಮತ್‌ಮರಿಕುಂಟೆ
ಕರಿಕೆರೆ
ಕನ್ನೇನಹಳ್ಳಿ

ಗಿಡ್ಡನಹಳ್ಳಿ
ಗಿಡ್ಡಪುರ
ಗಿರಿಯಮ್ಮನಹಳ್ಳಿ
ಗುಂತಕೋಲಮ್ಮನಹಳ್ಳಿ
ಗುಡಿಹಳ್ಳಿ
ಗೊಲ್ಲಹಳ್ಳಿ
ಗೋಪನಹಳ್ಳಿ
ಗೊರ್ಲಗಟ್ಟೆ
ಗೋಸಿಕೆರೆ
ಗೋಸಿಕೆರೆ ಕಾವಲು
ಗೋವಿನಹಾಳು
ಗೌಡಗೆರೆ
ಗೌರಸಮುದ್ರ
ಗೌರಿಪುರ
ಗೌರಿಪುರ
ಚಳ್ಳಕೆರೆ

ಚೋಳೂರು ಕಾವಲು
ಜಡೆಕುಂಟೆ
ಜನ್ನೇನಹಳ್ಳಿ
ಜಂಗಮರಹಳ್ಳಿ
ಜಾಜೂರು
ಜಾಜೂರು ಕಾವಲು
ಜುಂಜುರಗುಂಟೆ
ಜೋಗಟ್ಟೆ
ತಳಕು
ತಿಮ್ಮಣನಹಳ್ಳಿ
ತಿಮ್ಮಣ್ಣನಾಯಕನ ಕೋಟೆ
ತಪ್ಪಗೊಂಡನಹಳ್ಳಿ
ತಿಪ್ಪಯ್ಯನಕೋಟೆ
ತಿಪ್ಪರೆಡ್ಡಿಹಳ್ಳಿ
ತೋರಬೀರನಹಳ್ಳಿ
ತೊರಕೋಲಮ್ಮನಹಳ್ಳಿ

ಕಾಲುವೆಹಳ್ಳಿ	ಚನಗನಹಳ್ಳಿ	ದಾಸರಮುತ್ತೇನಹಳ್ಳಿ
ಕಾಪ್ರಹಳ್ಳಿ	ಚನ್ನಮ್ಮನಾಗ್ತಿಹಳ್ಳಿ	ದುಗ್ಗವರ
ಕಾಟಮ್ಮದೇವರಕೋಟೆ	ಕಾಟಮ್ಮದೇವರಕೋಟೆ ಕಾವಲು	ದೇವರಹಳ್ಳಿ
ಕಾಟವ್ವನಹಳ್ಳಿ	ಚಟ್ಟೆಕಂಬ	ದೇವರಹಳ್ಳಿ
ಕುರುಡಿಹಳ್ಳಿ	ಚಲುಮೆಯಹಳ್ಳಿ	ದೇವರೆಡ್ಡಿಹಳ್ಳಿ
ಕುದಾಪುರ	ಚಿಕ್ಕಬೂದಿಹಳ್ಳಿ	ದ್ಯಾವರ್ನಹಳ್ಳಿ
ಕೋನಿಗರಹಳ್ಳಿ	ಚಿಕ್ಕಹಳ್ಳಿ	ದೊಡ್ಡ ಬಾದಿ
ಕೋನಿಗರ ಕಾವಲು	ಚಿಕ್ಕಮದಿರೆ	ದೊಡ್ಡ ಬೀರನಹಳ್ಳಿ
ಕೊರ್ಲಗುಂಟೆ	ಚಿಕ್ಕಮ್ಮನಹಳ್ಳಿ	ದೊಡ್ಡ ಚೆಲ್ಲೂರು
ಕ್ಯಾದಿಗುಂಟೆ	ಚಿಕ್ಕ ಉಳ್ಳಾರ್ತಿ	ದೊಡ್ಡ ಉಳ್ಳಾರ್ತಿ
ಕ್ಯಾತಗೊಂಡನಹಳ್ಳಿ	ಚಿಕ್ಕೇನಹಳ್ಳಿ	ದೊಡ್ಡ ಉಳ್ಳಾರ್ತಿ ಕಾವಲು
ಗಂಜಿಗುಂಟೆ	ಚಿತ್ರನಾಯಕನಹಳ್ಳಿ	ದೋಣ್ಣಿಹಳ್ಳಿ
ಗಜ್ಜಗನಾಹಳ್ಳಿ	ಚಾಳುಕೆರೆ	ದೋಣಿಹಳ್ಳಿ ಕಾವಲು
ಘಟಪರ್ತಿ	ಚೋಳೂರು	ನಗರಂಗೆರೆ
ಮಲ್ಲೂರಹಳ್ಳಿ	ಬೊಮ್ಮಸಮುದ್ರ	ಲಿಂಗವ್ವನಹಳ್ಳಿ
ನನ್ನಿವಾಳ	ಬೋಗನಹಳ್ಳಿ	ವಡೇರಹಳ್ಳಿ
ನಲಗೇತನಹಟ್ಟಿ	ಭೈನಾಯ್ಕನಹಟ್ಟಿ	ವಲಸೆ
ನಾಗಗೊಂಡನಹಳ್ಳಿ	ಮಹದೇವಪುರ	ವರವು
ನಾಯಕನಹಟ್ಟಿ	ಮಹದೇವಪುರ	ವರವು ಕಾವಲು
ನೇರ್ಲಗುಂಟೆ	ಮಲೆಬೋರನಹಟ್ಟಿ	ವೀರದಿಮ್ಮನಹಳ್ಳಿ
ಪಗಡಲಬಂಡೆ	ಮಲ್ಲಸಮುದ್ರ	ವಿಡುಪನಕುಂಟೆ
ಪಗಡಲಬಂಡೆ ಕಾವಲು	ಮಲ್ಲವ್ವಹಳ್ಳಿ	ವಿಶ್ವನಾಥಪುರ
ಪರಶುರಾಮಪುರ	ಮಲ್ಲವ್ವನಹಟ್ಟಿ	ವಿಶ್ವೇಶ್ವರಪುರ
ಪಿಲ್ಲಹಳ್ಳಿ	ಮನ್ನೆಕೋಟೆ	ಹುಳಿಗೊಂಡನಹಳ್ಳಿ

ಪುರ್ಲಹಳ್ಳಿ
ಪುಟ್ಲೇರಹಳ್ಳಿ
ಪುಟ್ಲೇರಹಳ್ಳಿ ಕಾವಲು
ಬನವಿಗೊಂಡನಹಳ್ಳಿ
ಬಂಡೆ ತಿಮ್ಮಲಾಪುರ
ಬಂಜಿಗೆರೆ
ಬಸಾಪುರ
ಭರಮಪುರ
ಭರಮಸಾಗರ
ಬಾಲೇನಹಳ್ಳಿ
ಬ್ಯಾಡರೆಡ್ಡಿಹಳ್ಳಿ
ಭೀಮನಕೆರೆ
ಭೀಮಗೊಂಡನಹಳ್ಳಿ
ಬುಕ್ಕೇರಹಳ್ಳಿ
ಬುಡ್ಲತಟ್ಟೆ
ಬುಕ್ಕಾಂಬುದಿ
ಬೊಂಬೆರಹಳ್ಳಿ
ಬೊಮ್ಮನಕುಂಟೆ

ಮರಿಕುಂಟೆ
ಮತ್ಸಮುದ್ರ
ಮೀರಾಸಾಬಿಹಳ್ಳಿ
ಮಮ್ಮದಿಸಾಗರ
ಮುಷ್ಟಿಲಗುಮ್ಮಿ
ಮೇಡೂರು
ಮೇಡೂರು ಕಾವಲು
ಮೈಲನಹಳ್ಳಿ
ಯಲಗಟ್ಟೆ
ರಂಗವ್ವನಹಳ್ಳಿ
ರಾಮಸಾಗರ
ರಾಮಜೋಗಿಹಳ್ಳಿ
ರೆಡ್ಡಿಹಳ್ಳಿ
ರೇಖಲಗೆರೆ
ಬುಡ್ಲತಟ್ಟೆ ಕಾವಲು
ರೇಣುಕಾಪುರ
ಲಕುಮಗೊಂಡನಹಳ್ಳಿ
ಲಕ್ಷ್ಮೀಪುರ

ಹನುಮಂತಹಾಳ್
ಹಿರೇಹಳ್ಳಿ
ಹಿರೆಕೆರೆ ಕಾವಲು
ಹುಲಿಕುಂಟೆ
ಹೆಗ್ಗೆರೆ
ಹೆಂಜಮುತ್ತೇನಹಳ್ಳಿ
ಹೊಟ್ಟೆಪ್ಪನಹಳ್ಳಿ
ಸಾಣಿಕೆರೆ
ಸಿದ್ದಾಪುರ
ಸಿದ್ದೇಶ್ವರನ ದುರ್ಗ
ಸೂರನಹಳ್ಳಿ
ಸೋಮಗುದ್ದು

ಅನುಬಂಧ-೩

ಗೌರಿದೇವಿಯ ಜಾತ್ರೆಯಲ್ಲಿ ಪಾಲ್ಗೊಳ್ಳುವ ಗ್ರಾಮಗಳ ಪಟ್ಟಿ

(ಈ ಕೆಳಗಿನ ಪಟ್ಟಿಯಲ್ಲಿ ಇರುವ ಊರುಗಳು ಅಕ್ಕ-ಪಕ್ಕದ ಊರುಗಳು)

ದೊಡ್ಡಉಳ್ಳಾರ್ತಿ ಗೌರಿಪುರ

ಚಿಕ್ಕಉಳ್ಳಾರ್ತಿ	ಮಹದೇವಪುರ
ದುರ್ಗಾವರ	ಕಡೇವುಡೆ
ಕಾಳುವೇಹಳ್ಳಿ	ನಾಗಪ್ಪನಹಳ್ಳಿ
ಚನ್ನಗನಹಳ್ಳಿ	ಕೊಲ್ಲಕುಂಟೆ
ಯಾದಲಗಟ್ಟೆ	ಚಿಕ್ಕಬಾದಿಹಳ್ಳಿ
ಭರಮಸಾಗರ	ದೊಡ್ಡಬಾದಿಹಳ್ಳಿ
ಬೊಮ್ಮಸಮುದ್ರ	ರಂಗನಾಥಪುರ
ರಂಗವ್ವನಹಳ್ಳಿ	ಪಿಲ್ಲಹಳ್ಳಿ
ಮೀರಾಸಾಬಿಹಳ್ಳಿ	ಹೊಸೂರು
ದೊಡ್ಡೇರಿ	ಮಿಟ್ಟಲಕಟ್ಟೆ
ದಾಸರಮುತ್ತೇನಹಳ್ಳಿ	

ತಿಮ್ಮಣ್ಣನಹಳ್ಳಿ	ಓಬಯ್ಯನಹಟ್ಟಿ
ಗಿರಿಯಮ್ಮನಹಳ್ಳಿ	ಗಿಡ್ಡಪುರ
ಘಟಪರ್ತಿ	ಗಜ್ಜುಗನಹಳ್ಳಿ
ಬಂಜಿಗೆರೆ	ದೇವರಹಳ್ಳಿ
ಓಬಳಾಪುರ	ಹೊಸಹಳ್ಳಿ
ರೇಣುಕಾಪುರ	ಹೀರೆಹಳ್ಳಿ
ಬೂದಿಹಳ್ಳಿ	ತಪ್ಪಯ್ಯನ್ನಕೋಟೆ
ಕಸವಿಗೊಂಡನಹಳ್ಳಿ	ಚಳ್ಳಕೆರೆ
ತರಿಕೆರೆ	ಬುಡ್ನಹಟ್ಟಿ
ಚಿತ್ರನಾಯಕನಹಳ್ಳಿ	ಚಿಕ್ಕಮ್ಮನಹಳ್ಳಿ
ತಳಕು	ಬತ್ತಯ್ಯನಹಟ್ಟಿ
ಗುಡೆಹಳ್ಳಿ	ಮೈಲನಹಳ್ಳಿ
ಜಾಜೂರು	ಮನ್ನೇಕೋಟೆ
ಬೇಡರೆಡ್ಡಿಹಳ್ಳಿ	ದೇವರೆಡ್ಡಿಹಳ್ಳಿ
ಹೊಸೂರು	ವಲಸೆ
ಪಾಲನಾಯಕನಕೋಟೆ	ಪರಶುರಾಂಪು ಕೋಲ್ಲಕುಂಟೆ

ಅನುಬಂಧ–೪

ಮಾಹಿತಿದಾರರ ವಿವರ (ದೊಡ್ಡ ಉಳ್ಳಾರ್ತಿ)

ಹೆಸರು	ವಯಸ್ಸು	ಲಿಂಗ	ಜಾತಿ	ವೃತ್ತಿ
ಈರಕ್ಕ	೬೧	ಮಹಿಳೆ	ನಾಯಕ	ಕೂಲಿ
ಉಮೇಶ	೬೧	ಪುರುಷ	ಕುರುಬ	ಕೃಷಿ
ಓಬಕ್ಕ	೭೫	ಮಹಿಳೆ	ನಾಯಕ	ಕೂಲಿ
ಓಂಕರಾಪ್ಪ	೫೫	ಪುರುಷ	ಛಲವಾದಿ	ವ್ಯವಸಾಯ
ಓಬಳೇಶಪ್ಪ	೭೦	ಪುರುಷ	ನಾಯಕ	ಕೂಲಿ
ಓಬನಾಯಕ	೫೫	ಪುರುಷ	ನಾಯಕ	ಕುರಿ
ಕರಿಯಣ್ಣ ಸಿ.ಪಿ	೬೨	ಪುರುಷ	ಕುರುಬ	ವ್ಯವಸಾಯ
ಕೃಷ್ಣಪ್ಪ	೬೩	ಪುರುಷ	ನಾಯಕ	ಸದಸ್ಯರು
ಗಂಗಮ್ಮ	೫೮	ಪುರುಷ	ನಾಯಕ	ಕೂಲಿ
ಗೌರಮ್ಮ	೫೨	ಮಹಿಳೆ	ನಾಯಕ	ಕೂಲಿ
ಗೌರಣ್ಣ	೫೫	ಪುರುಷ	ನಾಯಕ	ಬಡಗೆ
ಗೌರಮ್ಮ	೬೮	ಮಹಿಳೆ	ನಾಯಕ	ಕೂಲಿ
ಗುಡಿಬಂಡೆಪ್ಪ	೭೫	ಪುರುಷ	ಗೊಲ್ಲಯಾದವ	ಕುರಿ
ಗುಡಿಬಂಡೆಪ್ಪ	೭೮	ಪುರುಷ	ಗೊಲ್ಲ	ವ್ಯವಸಾಯ

ಧನಂಜಯರೆಡ್ಡಿ	೬೨	ಪುರುಷ	ರೆಡ್ಡಿ	ಬಡಗೆ
ತಮ್ಮಣ್ಣ	೬೨	ಪುರುಷ	ಗೊಲ್ಲ	ದಲ್ಲಾಳಿ
ತಿಪ್ಪೇಸ್ವಾಮಿ	೬೮	ಪುರುಷ	ರೆಡ್ಡಿ	ಕೃಷಿ
ದುರುಗಪ್ಪ	೭೨	ಪುರುಷ	ಆದಿ ಕರ್ನಾಟಕ	ಕೂಲಿ
ದುರುಗಜ್ಜ	೬೦	ಪುರುಷ	ಮಾದಿಗ	ಕೂಲಿ
ನಾಗಣ್ಣ	೫೬	ಪುರುಷ	ಕುರುಬ	ಕೃಷಿ
ನಾಗರಾಜ	೫೮	ಪುರುಷ	ಮಾದಿಗ	ಕೂಲಿ
ನಾಗರಾಜಪ್ಪ	೫೧	ಪುರುಷ	ಗೊಲ್ಲ	ವ್ಯವಸಾಯ
ಪಾಲಕ್ಕ	೭೦	ಮಹಿಳೆ	ನಾಯಕ	ಕೂಲಿ
ಪಾಲಯ್ಯ	೬೬	ಪುರುಷ	ನಾಯಕ	ಕೂಲಿ
ಬಡಿಗೆ ಚೋರಯ್ಯ	೭೧	ಪುರುಷ	ನಾಯಕ	ಬಡಿಗೆ
ಬಸವರಾಜ	೩೫	ಪುರುಷ	ನಾಯಕ	ಶಿಕ್ಷಕ
ಬಸವರಾಜ	೩೮	ಪುರುಷ	ನಾಯಕ	ಕೂಲಿ
ಮಂಜುನಾಥರೆಡ್ಡಿ	೫೮	ಪುರುಷ	ರೆಡ್ಡಿ	ಕೃಷಿ
ಮಾರಕ್ಕ	೬೮	ಮಹಿಳೆ	ಮಾದಿಗ	ಕೂಲಿ
ಮಾರಕ್ಕ	೫೦	ಮಹಿಳೆ	ಮಾದಿಗ	ಕೂಲಿ
ಯಲ್ಲಪ್ಪ	೬೮	ಪುರುಷ	ಮಾದಿಗ	ಕೂಲಿ
ಯಲ್ಲಪ್ಪ	೬೫	ಪುರುಷ	ಮಾದಿಗ	ಕೂಲಿ
ವೀರೇಶ	೫೨	ಪುರುಷ	ಲಿಂಗಾಯತ	ಬಡಗೆ
ವೆಂಕಟೇಶ್	೩೮	ಪುರುಷ	ಕುರುಬ	ಸದಸ್ಯ
ಶಾಂತಮ್ಮ	೭೫	ಮಹಿಳೆ	ನಾಯಕ	ಕೃಷಿ
ಶಿವಲಿಂಗಪ್ಪ	೬೬	ಪುರುಷ	ಕುರುಬ	ಹೊಟಲ್
ಸಂಜೀವಪ್ಪ	೬೫	ಪುರುಷ	ಪದ್ಮಶಾಲಿ	ಕೂಲಿ

ಸಾಹುಕಾರಪ್ಪ	೭೦	ಮಹಿಳೆ	ಲಿಂಗಾಯಿತ	ಕೃಷಿ
ಹನುಮಂತರೆಡ್ಡಿ	೫೫	ಪುರುಷ	ರೆಡ್ಡಿ	ವ್ಯಾಪಾರ
ಹನುಮಂತಪ್ಪ	೫೧	ಪುರುಷ	ನಾಯಕ	ಕೂಲಿ

ಅನುಬಂಧ-೫

ಗೌರಿ ಪದಗಳು

ಮುದದಿಂದ ನೆನೆದೇವು ಮೂಷಿಕ ವಾಹನನ
ಮಾತೆ ಶ್ರೀಗೌರಿಯ ಮಮತೇಯ
ಮಾತೆ ಶ್ರೀಗೌರಿಯ ಮಮತೇಯ ಮಗನಾದ
ಮುದ್ದು ಗಣನಾಥನಾ ನೆನೆದೇವು.

ಸೃಷ್ಟಿಗೆ ಅಧಿಕನು ಆದಿ ಬ್ರಹ್ಮ ತಾನು
ನಾರಾಯಣನ ಕುವರನು
ನಾರಾಯಣನ ಕುವರನ ಸತಿಯಾದ
ಮಾತೆ ಶಾರದೆಯ ನೆನೆದೇವು.

ಸರ್ವರಿಗೂ ಜಯ ನೀಡಿ ಸುಖ ಸಂಪದವ ನೀಡಿ
ಕಾಪಡುವಂಥ ಮಹಾಲಕ್ಷ್ಮೀಯೂ
ಕಾಪಾಡುವಂಥ ಮಹಾಲಕ್ಷ್ಮೀಯ ನೆನೆದು
ಜಯವ ನೀಡೇರಿದು ಬೇಡೇವು.

ಬಲಗೊಂಡು ನಮ್ಮ ಬಳಗದ ಗಣಂಗಳು
ಬಲದಿ ನೀಲಮ್ಮ ನರಸರು
ಬಲದಿ ನೀಲಮ್ಮ ನರಸರು ಬಸವಯ್ಯ
ಬಲಗೊಂಡು ಪದವ ನಡೆಸೀರಿ.

ಉಗ್ಗಡಿಸಿ ನೆನೆದೇವು ಎದ್ದ ಗಣಂಗಳು
ಮುಗ್ಧೆ ನೀಲಮ್ಮ ನರನಾರು
ಮುಗ್ಧೆ ನೀಲಮ್ಮ ನರನಾರು ಬಸವಯ್ಯ
ಉಗ್ಗರಿಸಿ ಪದವಾ ನಡೆಸೀರಿ.

ಮುಂಜಾನೆ ನೆನೆದೇವು ಪಂಚಮುಖದಯ್ಯನ
ಕೆಂಚೆ ಗವುರಾನಾ ಅರಸಾರು
ಕೆಂಚೆ ಗವುರಾಜಾ ಅರಸಾರು ಕಲ್ಲಯ್ಯದ
ಮುಂಚೆಯೇ ನಾವು ನೆನೆದೇವು.

ಶಂಕರ ಸೀಮೆಯ ಪಂಚಮುಖದಯ್ಯಾನ
ಕೆಂಚೆಯ ಭಕ್ತರಿಗೆ ವರಗಳೂ
ಕೆಂಚೆಯ ಭಕ್ತರಿಗೆ ವರಗಳ ಕೊಡುವಂಥ
ಕೆಂಚೆ ಗೌರನಾ ಅರನಾರು.

ಪಡುವಲ ಸೀಮೆಯ ನಗೆ ನಾಕಾರಯ್ಯನ
ಪಡುವಳ ಭಕ್ತರಿಗೆ ವರಗಳೂ
ಪಡುವಲ ಭಕ್ತರಿಗೇ ಮಗಳ ಕೊಡುವಂಥ
ಮಡದಿ ಗೌರನಾ ಅರನಾನಾ

ತೆಂಕಲು ಸೀಮೆಯ ಪಂಚಮುಖದಯ್ಯನ
ತೆಂಕಲು ಭಕ್ತರಿಗೇ ವರಗಳ
ತೆಂಕಲು ಭಕ್ತರಿಗೇ ವರಗಳ ಕೊಡುವಂಥ
ಕೆಂಚೆ ಗೌರಾನಾ ಅರನಾನು

ನನ್ನಯ್ಯಾನ ನೆನೆದೇವು ಚನ್ನಯ್ಯಾನಿಗೊಲಿದವನೆ
ಸಣ್ಣ ಗೌರಾನಾ ಅರನಾರು
ಸಣ್ಣ ಗೌರಂನಾ ಅರನಾರು ಕೈಲಾಸದ
ಕಣ್ಣುಕೊಟ್ಟಯ್ಯಾನ ನೆನೆದೇವು

ಕಕ್ಕಯ್ಯಾನ ನೆನೇದೇವು ಚಿಕ್ಕಯ್ಯಗೊಲಿದವನೆ
ಮುತ್ತೈದೆ ಗೌರನರನಾನೆ
ಮುತ್ತೈದೆ ಗೌರನರನಾನೆ ಕೈಲಾಸದ
ಮಕ್ಕಳ ಕೊಟ್ಟಯ್ಯಾನ ನೆನೇದೇವು.

ಬಾರಯ್ಯ ಬಸವಯ್ಯನ ನಿಮ್ಮಸತಿ ನೆನೆದೇವು
ಬಾರಯ್ಯ ಎಂದು ಕರೆದೇವು
ಬಾರಯ್ಯ ಎಂದು ಕರೆದೇವು ನಿನ್ನನ್ನು
ನೀರೇ ಗೌರವಾ ಕರೆಯಾಕೆ.

ರೇವಣ್ಣನಂಬೋ ಶರಣರೋಗಣ ಬನ್ನಿ
ದೇವಿ ಗೌರನಾ ಕರೆವುದಕೆ
ದೇವಿ ಗೌರನಾ ಕರೆವುದಕ್ಹೋಗೋಣ ಬನ್ನಿ
ನೀವೂ ನಮ್ಮೂರ ಕಾಂತೆಯರು:-

ನಮ್ಮೂರ ಕಾಂತೆಯರು ನಿಂಬೆಕಾಯ
ಜಡೆಯವರು ನಿಂಬಣ್ಣನೆಂಬೋ ಶರಣರೂ
ನಿಂಬಣ್ಣನೆಂಬೊ ಶರಣರೋಗೋಣ ಬನ್ನಿ
ನೀರೆ ಗೌರನಾ ಕರೆವುದಕೆ.

ಸಾಣೀಕಲ್ಲಿನಂಗೆ ಸಾದಾ ಕಟ್ಟೆಯ ಮೇಲೆ
ದಾಯವನಾಡೋ ಎಳೆಯರು
ದಾಯವನಾಡೋ ಎಳೆಯರೊಗೋಣ ಬನ್ನಿ
ದೇವಿ ಗೌರನಾ ಕರೆವುದಕೆ.

ಕಡಲೇ ಕಾಳಿನಂಗೆ ಕಡೆದ ಕಟ್ಟೆಯ ಮೇಲೆ
ಪಗಡೇಯನಾಡೋ ಹಿರಿಯರೂ
ಪಗಡೇಯನಾಡೋ ಹಿರಿಯರೊಗೋಣ ಬನ್ನಿ
ತ್ವರಿದಿ ಗೌರನಾ ಕರೆವುದಕೆ.

ಉದ್ದಿನ ಕಾಳಿನಂಗೆ ತಿದ್ದಿದ ಕಟ್ಟೆಯ ಮೇಲೆ
ಉದ್ಯೋಗ ಮಾಡೋ ಹಿರಿಯರು
ಉದ್ಯೋಗ ಮಾಡೋ ಹಿರಿಯರೋಗೋಣ ಬನ್ನಿ
ಭದ್ರೆ ಗೌರನಾ ಕರೆವುದಕೆ.

ದೇವಿನ ಕರೆವುದಕೆ ಯಾರ್ಯಾರು ಬರಬೇಕು
ದೊಡ್ಡ ಉಳ್ಳಾರ್ತಿಯ ಮಠದೋರು
ದೊಡ್ಡ ಉಳ್ಳಾರ್ತಿಯ ಮಠದ ಗಣಂಗಳು
ದೇವಿ ಗೌರನಾ ಕರೆವುದಕೆ.

ಅಕ್ಕನ ಕರೆವುದಕೆ ಮತ್ಯಾರು ಬರಬೇಕು
ಚಿಕ್ಕ ಉಳ್ಳಾರ್ತಿಯ ಮಠದೋರು
ಚಿಕ್ಕ ಉಳ್ಳಾರ್ತಿಯ ಮಠದೋರು ಗಣಂಗಳು
ಅಕ್ಕ ಗೌರನಾ ಕರೆವುದಕೆ.

ಅಕ್ಕನ ಕರೆವುದಕೆ ಮತ್ಯಾರು ಬರಬೇಕು
ದೊಡ್ಡ ಉಳ್ಳಾರ್ತಿಯ ಗೌಡಾರು
ದೊಡ್ಡ ಉಳ್ಳಾರ್ತಿಯ ಗೌಡರು ಶಾನುಭೋಗರು
ಅಕ್ಕ ಗೌರನಾ ಕರೆವುದಕೆ.

ಹುತ್ತದ ಮೇಲೆ ಬಿಳಿಯ ಸಿಂಹಾಸನ
ಸೃಷ್ಠಿಗೆ ಮೂಜಗಕೆ ಒಡೆಯನ
ಸೃಷ್ಠಿಗೆ ಮೂಜಗಕೆ ಒಡೆಯ ಕೈಲಾಸದ
ಸೃಷ್ಠಿಗೀಶ್ವರನ ನೆನದೇವು.

ಬೆಟ್ಟದ ಮೇಲೆ ಬಿಳಿಯ ಸಿಂಹಾಸನ
ಸೃಷ್ಠಿಗೆ ಮೂರ್ಜಗಕೆ ಒಡೆಯಾನ
ಸೃಷ್ಠಿಗೆ ಮೂರ್ಜಗಕೆ ಒಡೆಯಾನ ಕೈಲಾಸದ
ರೂಢಿಗೀಶ್ವರನಾ ನೆನೆದೇವು.

ನನ್ನಯ್ಯಾನ ನೆನೆದೇವು ಬೆನ್ನಯ್ಯನಿಗೊಲಿದವನ
ಸೊನ್ನಾಲ ಗೌರೀಯರನಾನು
ಸೊನ್ನಾಲ ಗೌರೀಯರನಾನು ಕೈಲಾಸದ
ಕಣ್ಣು ಕೊಟ್ಟಯ್ಯನ ನೆನೆದೇವು.

ದೇವಿನ ಕರೆವುದಕೆ ಯಾರ‍್ಯಾರು ಬರಬೇಕು
ಬೆಳ್ಳಿಯ ಕೋಲು ತಳವಾರ
ಬೆಳ್ಳಿಯ ಕೋಲು ತಳವಾರಣ್ಣಾ ನೀವು
ದೇವಿ ಗೌರನಾ ಕರೆವುದಕೆ.

ದೇವಿನ ಕರೆವುದಕೆ ಯಾರ‍್ಯಾರು ಬರಬೇಕು
ಕಟ್ಟೆ ಪಂಜಿನಾ ಮಡಿವಾಳ
ಕಟ್ಟೆ ಪಂಜಿನಾ ಮಡಿವಾಳ ಅಣ್ಣಯ್ಯ
ದಿಟ್ಟೆ ಗೌರನಾ ಕರೆವುದಕೇ.

ಬಾರಯ್ಯ ಬಸವಯ್ಯ ಬಿನ್ನವನೇಳೇವು
ನಾವು ಬರುವೇವು ತವರೀಗೆ
ನಾವು ಬರುವೇವು ತವರೀಗೆ ಬಸವಯ್ಯ
ದೇವರ ಪ್ರಣಿಯ ತರಬೇಕು.

ದೇವರ ಪ್ರಣಿಯ ತರಬೇಕು ಅಂದರೆ
ದೇವರ ಲೋಕಕ್ಕೆ ನರೆದಾನು ಬಸವಯ್ಯ
ಜೋಡೆರಡು ಕರವಾ ಮಲಗಿದಾನು ಘುನಲಿಂಗಗೆ
ಸೋದರಿ ಗೌರಾನಾ ಕಳಾವಯ್ಯ.

ಸೋದರಿ ಗೌರಾನ ಕಳಾವಯ್ಯ ಅಂದರೆ
ಈಗ ಮಠದೊಳಗೆ ಅಣಿಯಲ್ಲಿ
ಈಗ ಮಠದೊಳಗೆ ಅಣಿಯಲ್ಲಿ ಬಸವಯ್ಯ
ನುಡಿಯ ಕೇಳಿ ದೇವಲೋಕಕ್ಕೆ ನಡೆದಾರೆ.

ದೇವಲೋಕಕ್ಕೆ ನಡೆದಾರೆ ಬಸವಯ್ಯ
ಜೋಡೆರಡು ಕರವಾ ಮುಗಿದಾರೆ
ಜೋಡೆರಡು ಕರವಾ ಮುಗಿದಾರೆ ಗೌರಕ್ಕ ನಿಮ್ಮ
ದೇವರ ಪ್ರಣಿಯ ಕೊಡಲಿಲ್ಲ.

ಬಾರಯ್ಯ ಬಸವಯ್ಯ ಬಿನ್ನವನೇಳೆವು
ನಾವು ಬರುವೇವು ತವರಿಗೆ
ನಾವು ಬರುವಿಟ್ಟ ತವರೀಗೆ ಬಸವಯ್ಯ
ಲಿಂಗದ ಪ್ರಾಣಿಯ ತರಬೇಕು
ಲಿಂಗದ ಪ್ರಾಣಿಯ ತರಬೇಕು ಬಸವಯ್ಯ
ಲಿಂಗದ ಲೋಕಕ್ಕೆ ನಡೆದಾನೆ.

ಲಿಂಗಗೆಡೆ ಕೊಡುವಾ ಘನಲಿಂಗಾನೆ
ತಂಗಿ ಗೌರಾನ ಕಳವಯ್ಯ
ತಂಗಿ ಗೌರಾನ ಕಳವಯ್ಯ ಅಂದರೆ
ಈಗ ಮಠದೊಳಗೆ ಅಗೆಯಿಲ್ಲಿ.

ಈಗ ಮಠದೊಳಗೆ ಅಗೆಯಲ್ಲ ಅಂದರೆ
ದೇವರ ಲೋಕಕ್ಕೆ ನಡೆದಾರೆ
ದೇವರ ಲೋಕಕ್ಕೆ ನಡೆದಾರೆ ಬಸವಯ್ಯ
ನಿಂದೆರಡು ಕೈಯ್ಯಿಯ ಮುಗಿದಾನೆ

ನಿಂದೆರಡು ಕಯಯ್ಯ ಮುಗಿದಾನೆ ಗೌರಕ್ಕೆ ನಿಮ್ಮ
ಲಿಂಗ ಪ್ರಾಣಿಯ ಕೊಡಲಿಲ್ಲ
ಲಿಂಗ ಪ್ರಾಣಿಯ ಕೊಡಲಿಲ್ಲ ಅಂದರೆ
ಕೆಂಗಣ್ಣ ಉದುಕುವ ಜಲ ತುಂಬಿ.

ಸಿಡಿಮಿಡಿಗುಟ್ಟುತ ಮುಡಿಯ ತೊಗಾಡುವ
ಎಡವಿನ ಬೆರಳೂ ಉರಿಯಲ್ಲಿ
ಎಡವಿನ ಬೆರಳೂ ಉರಿಯಲ್ಲಿ ಪಾರ್ವತಿ ದೇವಿ
ದೇವರ ಲೋಕಕ್ಕೆ ನಡೆದಾಳು
(ಶಿವಣ್ಣ ಮೀರಾಸಾಬಿಹಳ್ಳಿ, ೧೯೯೯, ಗೌರಸಮುದ್ರ ಮಾರಮ್ಮ ಮತ್ತು ಉಳ್ಳಾರ್ತಿ ಗೌರಮ್ಮ, ಪಟೇಲ್ ಪಬ್ಲಿಕೇಷನ್ಸ್, ಬೆಂಗಳೂರು. ಪು–೬೮,೬೯,೭೦.)

ಗಂಗೆ ಗೌರಿ ಹಾಡು:

ಒಂದೇ ನಂಬರ ದಸರಿ ಬ್ಯಾದಿಗೆ
ಅದರ ಮ್ಯಾಲೊಂದು
ಅಲಶಿಲ ಮಲಕಿಲ ಮಂಚವ ಹಾಕಿದೆ
ಹೊಯ್ಯಂಬರ ರಾತ್ರಿ ಒಬ್ಬನೇ ಶಿವನು
ಗೀತಗಂಗಿ ಶಿವನ ಮ್ಯಾಲೊಂದು
ಎಲೆಯ ಬಾಡಿತ್ತು.

ಎರಡೇ ನಂಬರ ದಸರಿ ಖ್ಯಾದಿಗೆ
ಅದರ ಮ್ಯಾಲೊಂದು
ಅಲಕಿಲ ಮಲಕಿಲ ಮಂಚವ ಹಾಕಿದೆ
ಹೊಯ್ಯಂಬರ ರಾತ್ರಿ ಒಬ್ಬನೇ ಶಿವನು
ಸೋತಗಂಗಿ ಶಿವನ ಮ್ಯಾಲೆರಡು
ಎಲೆಯ ಬಾಡಿತ್ತ.

ಮೂರೇ ನಂಬರ ದಸರಿ ಬ್ಯಾದಿಗೆ
ಅದರ ಮ್ಯಾಲೊಂದು
ಅಲಕಿಲ ಮಲಕಿಲ ಮಂಚವ ಹಾಕಿದೆ
ಹೊಯ್ಯಂಬರ ರಾತ್ರಿ ಒಬ್ಬನೇ ಶಿವನು
ಸೋತಗಂಗಿ ಶಿವನ ಮ್ಯಾಲ ಮೂರು
ಎಲೆಯ ಬಾಡಿತ್ತ.

ನಾಲ್ನೇ ನಂಬರ ದಸರಿ ಬ್ಯಾದಿಗೆ
ಅದರ ಮ್ಯಾಲೊಂದು
ಅಲಕಿಲ ಮಲಕಿಲ ಮಂಚವ ಹಾಕಿದೆ
ಹೊಯ್ಯಂಬರ ರಾತ್ರಿ ಒಬ್ಬನೇ ಶಿವನು
ಸೋತಗಂಗಿ ಶಿವನ ಮ್ಯಾಲ ನಾಲ್ಕು
ಎಲೆಯ ಬಾಡಿತ್ತ.

ಐದೇ ನಂಬರ ದಸರಿ ಬ್ಯಾದಿಗೆ
ಅದರ ಮ್ಯಾಲೊಂದು
ಅಲಕಿಲ ಮಲಕಿಲ ಮಂಚವ ಹಾಕಿದೆ
ಹೊಯ್ಯಂಬರ ರಾತ್ರಿ ಒಬ್ಬನೇ ಶಿವನು
ಸೋತಗಂಗಿ ಶಿವನ ಮ್ಯಾಲ ಐದು
ಎಲೆಯ ಬಾಡಿತ್ತ.

ಗೌರಿಯ ಇದಕಂಡು ಗಂಗಿಗಿ ನುಡಿದಾಲ
ಸಿಟ್ಟಿಲಿ ಅನತಾಳ
ಕೆರೆಲಾಕ ಮರಟ ತರದಿಲ್ಲಿ ಬಿಡತಿನೀ
ಹೊಯ್ಯಂಬರ ರಾತ್ರಿ ಶಿವನಿಗೆ ನೀ ಕಂಡು
ಬೆನ್ನ ಹತ್ತಿ ಓಡಿ ಬಂದಿದಿಯಾ

ಬಂದರೆ ನಾನೆ ಬಂದೆ ಆಕಾರ
ನಿನ್ನ ಗಂಡ ತಂದಾರೆ ಬಂದೆ
ಅಣಕ ಚುಣಕದ ಮಾತ ನನಗೊಡ ಸಲ್ಲ
ಗೌರೀ ನೀ ಏನು ಬಂದೆ.

(ನೀಲಾಂಬಿಕಾ ಪೋಲೀಸ್ ಪಾಟೀಲ್, ೨೦೦೭, ಶ್ರೀಮತಿ ಸರಸ್ವತಿ ಮಲ್ಲಿಕಾರ್ಜುನ ಕಾಡಾದಿ ಗೋದು ತಾಯಿ ನಗರ ಮುಖ್ಯ ರಸ್ತೆ, ಶಿವ ನಿಲಯ, ಗುಲಬರ್ಗ, ಪು-೨೭೨-೨೭೩.)

ಆರತಿ ಬೆಳೆಗುವಾಗ ಹಾಡುಗಳು
ಏಕದಾರುತೇ ಗೌರಿ ಬೆಳಗದಾರಂತೆ
ಒಂದ ಸೇರ ಎಣ್ಣಿ ತಂದೇನ ಗೌರಿ
ಒಂದ ದೇವಿಗಿ ಹಚ್ಚೇನ ಗೌರಿ
ಏಕದಾರುತೇ ಗೌರಿ ಬೆಳಗದಾರುತೆ.

ಎರಡ ಸೇರ ಎಣ್ಣಿ ತಂದೇನ ಗೌರಿ
ಎರಡ ದೇವಿಗಿ ಹಚ್ಚೇನ ಗೌರಿ
ಏಕದಾರುತೇ ಗೌರಿ ಬೆಳಗದಾರುತೆ.

ಮೂರು ಸೇರ ಎಣ್ಣಿ ತಂದೇನ ಗೌರಿ
ಮೂರ ದೇವಿಗಿ ಹಚ್ಚೇನ ಗೌರಿ
ಏಕದಾರುತೇ ಗೌರಿ ಬೆಳಗದಾರುತೆ.

ನಾಲ್ಕ ಸೇರ ಎಣ್ಣಿ ತಂದೇನ ಗೌರಿ

ನಾಲ್ಕ ದೇವಿಗಿ ಹಚ್ಚೇನ ಗೌರಿ
ಏಕದಾರುತೇ ಗೌರಿ ಬೆಳಗದಾರುತೆ.

ಐದಸೇರ ಎಣ್ಣಿ ತಂದೇನ ಗೌರಿ
ಐದ ದೇವಿಗಿ ಹಚ್ಚೇನ ಗೌರಿ
ಏಕದಾರುತೇ ಗೌರಿ ಬೆಳಗದಾರುತೆ.

"ಗೌರಿ ಕೂಡಿಸಿದಾಗ ಆಡುವಾಗ ಹಾಡುಗಳು
ಗೌವರಮ್ಮನ ಮೈತುಂಬಾ ಧರಿಸ್ಯಾಳೆ ಅರಿಷಿಣ
ಹಳ್ಳದ ದಂಡೀಲಿ ಬಿತ್ತ್ಯಾರೆ ಅರಿಷಿಣ
ಹೊನ್ನ ಗುದ್ದಲಿಯಲ್ಲಿ ಅಗಳ್ಯಾರ ಅರಿಷಿಣ
ರನ್ನದೇ ಕೋಲು ಕೋಲೆನ್ನದೆನ್ನಿರೆ.

ಬಿದರ ಬುಟ್ಟ್ಯಾಗ ತುಂಬ್ಯಾರೆ ಅರಿಷಿಣ
ಚಂದನದ ಒಣರೆಲೆ ತಳುಸ್ಯಾರೆ ಅರಿಷಿಣ
ರನ್ನದೇ ಕೋಲು ಕೋಲೆನ್ನದೆನ್ನಿರೆ.

ಚಂದನದ ಓಣಕಿಲೆ ತಳುಸ್ಯಾರೆ ಅರಿಷಿಣ
ಬೆಳ್ಳಿ ಬಟ್ಟಲಾಗೆ ತುಂಬ್ಯಾರೆ ಅರಿಷಿಣ
ರನ್ನದೇ ಕೋಲು ಕೋಲೆನ್ನದೆನ್ನಿರೆ.

ಬೆಳ್ಳಿ ಬಟ್ಟಲಾಗೆ ತುಂಬ್ಯಾರೆ ಅರಿಷಿಣ
ಗೋಧಿ ಕಲ್ಲಿಲೆ ಬೀಸ್ಯಾರೆ ಅರಿಷಿಣ
ರನ್ನದೇ ಕೋಲು ಕೋಲೆನ್ನದೆನ್ನಿರೆ.

ಗೋಧಿ ಕಲ್ಲಿಲೆ ಬೀಸ್ಯಾರೆ ಅರಿಷಿಣ
ಬಂಗಾರ ಬಟ್ಟಲಾಗ ತುಂಬ್ಯಾರೆ ಅರಿಷಿಣ
ರನ್ನದೇ ಕೋಲು ಕೋಲೆನ್ನದೆನ್ನಿರೆ.

ಬಂಗಾರ ಬಟ್ಟಲಾಗ ತುಂಬ್ಯಾರೆ ಅರಿಷಿಣ
ಗೌರಮ್ಮ ಮೈತುಂಬ ಧರಿಸ್ಯಾರೆ ಅರಿಷಿಣ
ರನ್ನದೇ ಕೋಲು ಕೋಲೆನ್ನದೆನ್ನಿರೆ.

(ಓಬಕ್ಕ, ದೊಡ್ಡ ಉಳ್ಳಾರ್ತಿ, ಹಾಡಿದ ಗೌರಿ ಹಾಡುಗಳು)

ಅನುಬಂಧ–೬


ನಕ್ಷೆಗಳು

೧. ಭಾರತದ ಭೂಪಟ



https://www.mapsofindia.com/maps/

೨. ಕರ್ನಾಟಕದ ಭೂಪಟ




https://www.mapsofindia.com/maps/karnataka/

೩. ಚಿತ್ರದುರ್ಗ ಭೂಪಟ




HTTPS://WWW.MAPSOFINDIA.COM/MAPS/KARNATAKA/DISTRICTS/CHITRADURGA.HTM

೪. ಚಳ್ಳಕೆರೆ ಭೂಪಟ



ಕೃಪೆ: ಜಿಲ್ಲಾ ಪಂಚಾಯತ್, ಚಿತ್ರದುರ್ಗ

೫. ದೊಡ್ಡ ಉಳ್ಳಾರ್ತಿ ಭೂಪಟ



http://villagemap.in/karnataka/chitradurga/challakere/957100.html

ಛಾಯಾಚಿತ್ರಗಳು



ಗೌರಿದೇವಿ ವಿಗ್ರಹ (ದೊಡ್ಡ ಉಳ್ಳಾರ್ತಿ)



ಜಾತ್ರೆಯ ಸಂದರ್ಭದಲ್ಲಿ ಉರುಳುಸೇವೆ ಮಾಡುವ ಭಕ್ತರು (ದೊಡ್ಡ ಉಳ್ಳಾರ್ತಿ)



ಊರಿನ ಹಿರಿಯ ಮಹಿಳೆಯಿಂದ ಮಾಹಿತಿ ಸಂಗ್ರಹಿಸುತ್ತಿರುವ ಸಂಶೋಧಕ (ಓಬಕ್ಕ, ದೊಡ್ಡ ಉಳ್ಳಾರ್ತಿ)



ಊರಿನ ಮುಖಂಡರಿಂದ ಮಾಹಿತಿ ಸಂಗ್ರಹ (ಶಂಕರಪ್ಪ ದೊಡ್ಡ ಉಳ್ಳಾರ್ತಿ)


ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ